ಸಾಹಿತ್ಯ ದಾಸೋಹ – ೧೭೮

ಸಮನ್ವಯ ಸಮಿತಿ

ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ದಾಸೋಹ

ದಾಸೋಹದಲ್ಲಿ ಸದಸ್ಯರು ಪ್ರಸ್ತುತಿ ಪಡಿಸಿದ ಪ್ರಸ್ತುತಿಗಳ ಮುದ್ರಣ ರೂಪ

೧.ರವೀಂದ್ರ ಬಿಎಸ್
೨.ಜಯಂತಿ ಮನೋಹರ
೩.ಸಂಮ್ಮೋದ್ ವಾಡಪ್ಪಿ
೪.ರತ್ನಾ ಮೂರ್ತಿ
೫.ಶಾಂತಾ ಗೋಪಾಲ್
೬.ಗುರುಪ್ರಸಾದ್ ಎಚ್ ಎಲ್
೭.ರೇಣುಕಾ ದೇಸಾಯಿ
೮.ಮಂಗಳಾ ನಾಡಿಗ್
೯.ಡಾ.ಶ್ರೀಲಕ್ಷ್ಮಿ



೧೦.ಗೌರಾಂಬಾ ವೆಂಕಟಸುಬ್ಬಯ್ಯ
೧೧.ವೆಂಕಟೇಶ್ ಕೆ ಆರ್
೧೨.ಶ್ರವಣಕುಮಾರಿ
೧೩.ಶಂಕರರಾವ್ ಎಚ್
೧೪.ಬಾಲಸುಬ್ರಹ್ಮಣ್ಯಂ
೧೫.ಎಂಎಸ್ ನರಸಿಂಹಮೂರ್ತಿ
೧೬.ಗೋನವಾರ ಕಿಶನ್ ರಾವ್
೧೭.ಅರುಣ ಜಿವಿ
೧೮.ವೆಂಕಟೇಶ ಮೂರ್ತಿ ಎಂ ಜಿ
೧೯.ಇಜೇರಿ ಎಮ್ಎಸ್

13/06/2020

ಸಾಹಿತ್ಯ ದಾಸೋಹ - 178

ಪ್ರಸ್ತಾವನೆ

ಸಾಹಿತ್ಯ ದಾಸೋಹ 178 ಜೂನ್ 13, 2020 ರಂದು ನೋಡಿಯೋ ಸಾಹಿತ್ಯ ವೇದಿಕೆಯಡಿಯಲ್ಲಿ ಸಂಜೆ ನಡೆಯಿತು. ಕಾರ್ಯಕ್ರಮದಲ್ಲಿ 48 ಸದಸ್ಯರು ಭಾಗವಹಿಸಿದ್ದು 19 ಸದಸ್ಯರು ತಮ್ಮ ಕವನ, ಪ್ರವಾಸ ಕಥನ, ಲೇಖನಗಳನ್ನು ಪ್ರಸ್ತುತಿ ಪಡಿಸಿದರು. ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೊರನಾಡಿನ ಕನ್ನಡಿಗರಾದ ಶ್ರೀ ಗೋನ್ವರ ಕಿಶನ್ ರಾವ್ ಅವರು ವಹಿಸಿದ್ದರು, ಅವರು ತಮ್ಮ ಸಮಾರೋಪ ಭಾಷಣದಲ್ಲಿ ಹೈದರಾಬಾದಿನ ಕನ್ನಡಿಗರ ಕನ್ನಡ ಸಾಹಿತ್ಯ ಸೇವೆಯ ಬಗ್ಗೆ ವಿವರವಾಗಿ ಮಾತನಾಡಿದರು. ನಂತರ ಎಲ್ಲ ಸದಸ್ಯರ ಪ್ರಸ್ತುತಿಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮವನ್ನು ಸನ್ಮಾನ್ಯ ಶ್ರೀ ಬೆಂಗಳೂರು ಶ್ರೀನಿವಾಸ ರಾವ್ ರವೀಂದ್ರ ಅವರು ಯಶಸ್ವಿಯಾಗಿ ನಿರ್ವಹಿಸಿದರು. ತಾಂತ್ರಿಕ ನಿರ್ವಹಣೆಯ ಜವಾಬ್ದಾರಿಯನ್ನು ಗುಹಾ ಹಾಗು ಗುರುರಾಜ ಶಾಸ್ತ್ರಿ ಅವರುಗಳು ಯಶಸ್ವಿಯಾಗಿ ನಿರ್ವಹಿಸಿದರು.

ಗುಹಾ

ಒಳಗಿರುವ ವಿಷಯಗಳು

ಅಸ್ಪಷ್ಟ ತಲ್ಲಣಗಳು : ಕತೆಗಳು : ಶ್ರವಣ ಕುಮಾರಿ ಟಿಎಸ್
ಹೊಸ ಭರವಸೆಯ ಹೊಂಬಾಗಿಲು.

"ಬಾಗಿಲನ್ನೊಡೆದು ಒಳ ಬಂದರು" ಎನ್ನುವಂತೆ, ಶ್ರವಣ ಕುಮಾರಿಯವರು,ಪ್ರಕಟಿತ ಕನ್ನಡ ಕಥಾ ಬರಗಾರರ ಅಂಗಳಕ್ಕೆ, ಮೈತ್ರಿ ಪುಸ್ತಕ ೨೦೨೦ ರ ಬಹುಮಾನಿತ ಕೃತಿ " ಅಸ್ಪಷ್ಟ ತಲ್ಲಣಗಳು" ಕತೆಗಳು ಮೂಲಕ ಪ್ರವೇಶಿಸಿದ್ದಾರೆ. ಅವರ ಪ್ರಬಂಧ, ಕತೆಗಳು ನಾಡಿನ ಹಲವಾರು ಪತ್ರಿಕೆಗಳಲ್ಲಿ ಪ್ರಕಟಿತವಾಗಿದ್ದರೂ ಸಂಕಲನವೊಂದು ಕನ್ನಡಿಗರ ಕೈ ಮುಟ್ಟಿರಲಿಲ್ಲ.ಮೊದಲ ಪ್ರವೇಶದಲ್ಲಿಯೇ, ಮೈತ್ರಿ ಪ್ರಕಾಶನದ ಕತಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ೨೫ ಸಂಕಲನಗಳಲ್ಲಿ ಬಹುಮಾನಗಳಿಸಿ ತಾವೋಬ್ಬ ಗಮನಿಸಬೇಕಾದ ಕನ್ನಡ ಕತೆಗಾರ್ತಿಯೆಂದು ಘೋಷಿಸಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕಿನ ಸೇವೆಯಲ್ಲಿದ್ದಾಗ, ಅಲ್ಲಿ ಕನ್ನಡ ಸಂಘದ ಮೂಲಕ ಕನ್ನಡ ಪರ ಚಟುವಟಿಕೆಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದ ಶ್ರವಣ ಕುಮಾರಿಯವರು, ನಿವೃತ್ತಿಯ ನಂತರ ಹೆಚ್ಚಿನ ಸಮಯವನ್ನು ಅಧ್ಯಯನ ಮತ್ತು ಬರಹಕ್ಕೆ ಮೀಸಲಿಟ್ಟಿದ್ದಾರೆ. "ಸಮನ್ವಯ ಸಮಿತಿ * ಕನ್ನಡವೇ ಸತ್ಯ" ಸಾಹಿತ್ಯ ವೇದಿಕೆಯಲ್ಲಿ ಕ್ರಿಯಾಶೀಲರಾಗಿ, ವಿವಿಧ ಅಂತರ್ಜಾಲ ವೇದಿಕೆಗಳಲ್ಲಿ / ಅಂತರ್ಜಾಲ ಪತ್ರಿಕೆಗಳಲ್ಲಿ ತಮ್ಮ ಪ್ರಬಂಧಗಳ, ಕತೆಗಳ ಮೂಲಕ ಸಾಹಿತ್ಯಕೃಷಿಯನ್ನು ಮಾಡುತ್ತಿದ್ದಾರೆ.

ಪ್ರಸಕ್ತ, " ಅಸ್ಪಷ್ಟ ತಲ್ಲಣಗಳು" ಸಂಕಲನದಲ್ಲಿ ಹತ್ತು ಕತೆಗಳಿವೆ. ತಮ್ಮ ಅನುಭವ, ಚಿಂತನೆಯ ಮೂಸೆಯಲ್ಲಿ ಮೂಡಿದ ಮನುಜ ಮನದ ತಲ್ಲಣಗಳನ್ನು ಗ್ರಹಿಸಿ ಚಿತ್ರವತ್ತಾಗಿ ಮನಮುಟ್ಟುವಂತೆ ಸರಾಗ ಸುಲಲಿತ ಧಾಟಿಯಲ್ಲಿ ಆಕರ್ಷಕ ಭಾಷೆಯಲ್ಲಿ ಸುಲಿದ ಕಳಿತ ಬಾಳೆಯ ಹಣ್ಣಿನ ರೀತಿಯಲ್ಲಿ ಓದುಗರಿಗೆ ಉಣಬಡಿಸಿದ್ದಾರೆ. ಪ್ರತಿ ಕತೆಯಲ್ಲೂ ತಲ್ಲಣವಿದೆ. ಸಂಬಂಧಗಳ ತಾಕಲಾಟವಿದೆ. ಅನಿರೀಕ್ಷೀತ ತಿರುವುಗಳಿಂದ ಓದುಗರನ್ನು ಕಕ್ಕಾಬಿಕ್ಕಿ ಮಾಡುವ ಅಭಿಲಾಶೆ ಕತೆಗಾರ್ತಿಗೆ ಇದ್ದಂತಿಲ್ಲ. ಅದರ ಬದಲು ಕತೆಗಳು ಓದುಗರಿಗೆ ಅರಿವಿರುವ ಪರಿಸರದಲ್ಲಿಯೆ ತಣ್ಣಗೆ ಜುಳುಜುಳು ಹರಿಯುತ್ತದೆ. ಅವುಗಳಲ್ಲಿ ಅವಸರವಿಲ್ಲ, ನಿಧಾನವಾಗಿ ಎಳೆ ಎಳೆಯನ್ನು ಬಿಡಿಸಿಡುತ್ತಾ, ಪ್ರತಿ ತಲ್ಲಣವನ್ನು ಪರಿಣಾಮಕಾರಿಯಾಗಿ ಸಂವಹಿಸುತ್ತಾ ನವಿರಾಗಿ ಸಾಗುತ್ತದೆ.

ಪಾತ್ರ ಪೋಷಣೆಯನ್ನು ತಮ್ಮ ಸಹಜ ಬರಹದಿಂದ ಪುಷ್ಟಿಗೊಳಿಸುತ್ತಾ, ಸಣ್ಣ ಪುಟ್ಟ ಅಂಶಗಳನ್ನು ಉಪೇಕ್ಷೆ ಮಾಡದೆ ತಕ್ಕ ನ್ಯಾಯ ಒದಗಿಸಿದ್ದಾರೆ. ಹೀಗಾಗಿ ಕಥಾಪಾತ್ರಗಳು ಓದುಗುರ ಸಮೀಪವಾಗುತ್ತದೆ.ಇಲ್ಲಿನ ಕತೆಗಳಲ್ಲಿ ಕಾಣಿಸಿಕೊಳ್ಳುವ ಪಾತ್ರಗಳು ನಮ್ಮ ಸುತ್ತಲೇ ಇವೆ. ಕೆಲವು ಪಾತ್ರಗಳು ನಾವೇ ಆಗಿದ್ದೇವೆ.

ತಾಯಿ – ಮಗಳು, ಅಣ್ಣ-ತಂಗಿ, ಗಂಡ- ಹೆಂಡತಿ ಮೊದಲಾದ ಸಂಬಂಧಗಳ ನಡುವಿನ ಸಂಘರ್ಷ, ಕಾಲದ ಅಂತರವು ಸೃಷ್ಟಿಸುವ ವಿಭಿನ್ನ ಸನ್ನಿವೇಶಗಳು, ಪರಿಸ್ಥಿತಿಯ ಒತ್ತಡಗಳು ನಿರ್ಮಿಸುವ, ಸಂಬಂಧಗಳ ಅಂತರ ಮತ್ತು ಸಾಮಿಪ್ಯಗಳು ಹದವಾಗಿ, ಅತಿರೇಕವಾಗದೆ ತರ್ಕಬದ್ದವಾಗಿ ಕತೆಗಳಲ್ಲಿ ತೆರೆದುಕೊಂಡಿದೆ. ಸ್ತ್ರೀ ಸಂವೇದನೆಯು ಹೆಚ್ಚಾಗಿ ಪ್ರತಿಭಟನೆಯ

ರೂಪವನ್ನು ಪಡೆದಿದೆ,'ಪಾಲು', 'ಕಿತ್ತಕೊಂಡಿ' 'ಕಟ್ಟೆಯ ಮೂಲೆಯಲ್ಲಿ ಕುಳಿತವ' ಕತೆಗಳಲ್ಲಿ ಮೃದುಭಾವದ ಮಿಡಿತಗಳಾಗಿವೆ.

ಈ ಕತೆಗಳಲ್ಲಿ, ವಿಭಿನ್ನವಾಗಿ ನಿಲ್ಲುವುದು, 'ಕಾಮಿನಿಯೂ ಚಿಕನ್ ಬಿರ್ಯಾನಿಯೂ' ಮತ್ತೆ 'ರಾಧಾರಮಣ'. ಹಸಿವಿನ ಸಂಕಟಕ್ಕೆ ಸಿಲುಕಿದ ವಯಸ್ಸು ದಾಟುತ್ತಿರುವ ವೇಶ್ಯೆಯನ್ನು , ಕಾಮುಕನೊಬ್ಬ ಅನುಭವಿಸಿ, ಹಣ ಕೊಡದೆ ಮೋಸ ಮಾಡುವ ಸಂದರ್ಭದಲ್ಲಿ, ಅವಳ ಹಳೆಯ ಗೆಳೆಯ, ಮಧ್ಯವರ್ತಿಯೊಬ್ಬನ ಅಂತಃಕರಣ, ನಮ್ಮ ಗಮನವನ್ನು ಸೆಳೆಯುತ್ತದೆ.

ಲೈಂಗಿಕ ಅಲ್ಪಸಂಖ್ಯಾತ ರಾಧಾಕೃಷ್ಣನನ್ನು ಅರಿಯದೆ ಮದುವೆಯಾಗುವ ಮೀನಾಕ್ಷಿ ಸಹಜ ಕಾಮನೆಗೊಳಗಾಗಿ, ಇನ್ನೊಬ್ಬನ ಸಂಗಮಾಡಿ ಮನೆಬಿಟ್ಟು ಓಡಿಹೋಗುತ್ತಾಳೆ. ಈ ಸಂದರ್ಭವು ರಾಧಾಕೃಷ್ಣನ ಮಾನಸಿಕ ಬಿಡುಗಡೆಗೂ ಕಾರಣವಾಗುತ್ತದೆ. ಕ್ಷೋಭೆಗೊಳಗಾಗುವ ಅವನು, ತಾಯಿಯು ಕಟ್ಟಿದ್ದ ಬಂಧನದಿಂದ ಬಿಡಿಸಿಕೊಂಡು, ದೇವರ ಮುಂದೆ ನಾನು ರಾಧೆ ಎಂದು ಕೂಗುವುದು ಬಿಡುಗಡೆಯ ಸಂಕೇತವಾಗುತ್ತದೆ.

'ಜೇಡನ ಬಲೆ' ಯಲ್ಲಿ ಗ್ರಾಮ್ಯ ಕನ್ನಡವನ್ನು ಸಮರ್ಥವಾಗಿ ಬಳಸುವ ಕತೆಗಾರ್ತಿ, ಅನ್ಯಾಯವನ್ನು ಪ್ರತಿಭಟಿಸಿ ಸಿಡಿಯುವ ಹೆಣ್ಣು ರಮ್ಯಳ ಪಾತ್ರವನ್ನೂ ಚೆನ್ನಾಗಿ ಪೋಷಣೆ ಮಾಡಿದ್ದಾರೆ. 'ಅವಳು ಮತ್ತು ಮಗಳು' ಹಾಗೂ 'ಅಸ್ಪಷ್ಟ ತಲ್ಲಣಗಳು", ಕತೆಗಳು ಜಾಡು ಒಂದೇ ದಿಕ್ಕಿನಲ್ಲಿ ಸಾಗಿ, ಅಂತ್ಯವು ಭಿನ್ನವಾಗಿದೆ. ಅದರೆ ಕತಾನಾಯಕಿಯರ ಮನದ ತಲ್ಲಣಗಳು ಸ್ಪಷ್ಟರೂಪವನ್ನು ಪಡೆದುಕೊಂಡಿದೆ. ನಾವಿಲ್ಲಿ ಇದ್ದೇವಾ ಅನಿಸಿಬಿಡುತ್ತದೆ.

'ಮುಖಾಮುಖಿ' ಯ ಅಹಲ್ಯಾಬಾಯಿ, ಮನ ಕಲಕಿಬಿಡುತ್ತಾಳೆ. ಕಾಲದ ಪರಿಧಿಯಲ್ಲಿ, ಸ್ವಲ್ಪ ಹಿಂದೆ ಸರಿದು, ಈ ಕತೆಯನ್ನು ಓದಬೇಕು. ಇಲ್ಲಿ ಬಳಸುವ ರೂಪಕವು ಬಲು ಪರಿಣಾಮಕಾರಿಯಾಗಿದೆ. ಝುಗ್ ಎಂದುಕರೆಂಟು ಬಂದು, ಅಹಲ್ಯಾಬಾಯಿಯ ನೆತ್ತಿಯ ಮೇಲಿನ ಸೀರೆ ಜಾರಿ, ಬೋಡು ತಲೆ ಕಾಣಿಸಿ, ಸಮಾಜದ ಕ್ರೂರತೆ ಶಾಕ್ ಹೊಡೆಸುತ್ತದೆ. ಕಣ್ಣ ಹನಿಯು ಆಕೆಯ ಬೋಡು ನೆತ್ತಿಯ ಮೇಲೆ ಬಿದ್ದು ಜಾರ ತೊಡಗುತ್ತದೆ. ಒಂದೇ ಏಟಿಗೆ ಸಾಮಾಜಿಕ ಕೌರ್ಯವನ್ನೂ, ದೌರ್ಜನ್ಯಕ್ಕೊಳಗಾದ ಹೆಣ್ಣಿನ ಅಸಹಾಯಕತೆಯನ್ನು ಬಯಲು ಮಾಡುತ್ತದೆ.

ಹೆಚ್ಚು ಕಡಿಮೆ ಸವೆದ ಜಾಡಿನಲ್ಲಿ ಸಾಗುವ 'ಜೀವನ್ಮುಖಿ' , ಒಂದು ರೀತಿಯ ಸಮಸ್ಯೆಯನ್ನು ನೋಡುವ ಎರಡು ನೋಟಗಳನ್ನು ತೆರೆದಿಡುತ್ತದೆ.

ಶ್ರವಣ ಕುಮಾರಿ ತೀರಾ ಹೊಸದು ಅನ್ನುವ ಜಾಡನ್ನು ತುಳಿಯುವುದಿಲ್ಲ. ನಮ್ಮ ನಡುವಿನ ಘಟನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾರೆ. ಸಾಮಾನ್ಯವಾಗಿ ಒಪ್ಪಿತವಾಗುವ ಪರಿಹಾರಗಳತ್ತ ಸಾಗುತ್ತಾರೆ. ಸ್ತ್ರೀ ಸಂವೇದನೆಯ ನೋವುಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತಾರೆ. ಆಧುನೀಕತೆಗೂ ತಾಯ್ತನದ ಮಿಡಿತಗಳಿಗೂ ತಾಕಲಾಡಿಸುತ್ತಾರೆ. ಪಾತ್ರಪೋಷಣೆಯು ಸಮರ್ಥವಾಗಿ ಮಾಡಿ, ಭಾಷೆಯನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ.

ಕನ್ನಡಕ್ಕೆ ಒಬ್ಬ ಸಮ ಮನಸ್ಥಿತಿಯುಳ್ಳ, ತರ್ಕಬದ್ಧವಾಗಿ ಯೋಚಿಸುವ, ಚಿತ್ರವತ್ತಾಗಿ ಸನ್ನಿವೇಶಗಳನ್ನು ಸಂವಹಿಸು ಕತೆಗಾರ್ತಿ, ಶ್ರೀಮತಿ ಶ್ರವಣಕುಮಾರಿ ಅವರಲ್ಲಿ ಸಿಕ್ಕಿದ್ದಾರೆ. ಅವರು ಮತ್ತಷ್ಟು ವಿಭಿನ್ನವಾಗಿ ಆಲೋಚಿಸಿ,ಸಹಜವಾಗಿ ಬರೆದು ಕನ್ನಡ ಕಥಾಲೋಕವನ್ನು ಶ್ರೀಮಂತಗೊಳಿಸಲಿ.

.... ಬೆಂಶ್ರೀ ರವೀಂದ್ರ.

ಕಾಳಿದಾಸನ ಕುಂಚದಲ್ಲಿ ಅರಳಿದ ಶಿವ - ಪಾರ್ವತಿಯರ ಮಿಲನದ ಚಿತ್ರ ಕಾವ್ಯ

ಮಡದಿ ದಾಕ್ಷಾಯಣಿ ತನ್ನ ತಂದೆ ದಕ್ಷನ ಯಜ್ಞದ ಹೋಮಕುಂಡದಲ್ಲಿ ಅಗ್ನಿಗಾಹುತಿ ಆದಮೇಲೆ ಪರಶಿವ ದಿವ್ಯಧ್ಯಾನಾಸಕ್ತನಾಗಿರುತ್ತಾನೆ. ದಾಕ್ಷಾಯಣಿ ಪರ್ವತರಾಜನ ಮಗಳು ಪಾರ್ವತಿಯಾಗಿ ಜನಿಸಿರುತ್ತಾಳೆ. ಪರಶಿವನನ್ನು ಒಲಿಸಿಕೊಳ್ಳಲು ಅವನು ಧ್ಯಾನಾಸಕ್ತನಾಗಿದ್ದ ಸಮಯದಲ್ಲಿ ಅವನ ಸೇವೆಯಲ್ಲಿ ನಿರತಳಾಗಿರುತ್ತಾಳೆ ಗಿರಿಜೆ.

ಪಾರ್ವತಿ - ಪರಮೇಶ್ವರರ ಪುತ್ರನಿಂದ ಮಾತ್ರ ಮರಣ ಬರುವ ವರ ಪಡೆದಿದ್ದ ತಾರಕಾಸುರನ ಹಿಂಸೆ ತಡೆಯಲು ಶಿವ ತನ್ನ ಧ್ಯಾನದಿಂದ ಹೊರಬರಬೇಕೆಂಬ ಆಶಯದಿಂದ ದೇವತೆಗಳು ಪಾರ್ವತಿಗೆ ಸಹಾಯ ಮಾಡಲು ಕಾಮದೇವನನ್ನು ಕಳಿಸುತ್ತಾರೆ. ಅವನೊಂದಿಗೆ ಬಂದ ವಸಂತ ಆ ಪ್ರದೇಶವನ್ನು ಸುಗಂಧ ಭರಿತ ಪುಷ್ಪಗಳಿಂದ - ಹಕ್ಕಿಗಳ ಮಧುರ ಗಾನದಿಂದ ಮೋಹಕವಾಗಿಸುತ್ತಾನೆ. ಕಾಮದೇವ ತನ್ನ ಮೋಹನಾಸ್ತ್ರವನ್ನು ಧ್ಯಾನಸ್ಥ ಶಿವನ ಮೇಲೆ ಪ್ರಯೋಗಿಸುತ್ತಾನೆ. ಧ್ಯಾನದಿಂದ ಕ್ಷಣಕಾಲ ವಿಮುಖನಾಗುವಂತೆ
ಮಾಡಿದ ಕಾಮದೇವ, ಶಿವನ ಕೋಪಾಗ್ನಿಗೆ ಗಿರಿಜೆಯ ಎದುರಿಗೇ ದಗ್ಧನಾಗಿ ಹೋಗುತ್ತಾನೆ. ಹೀಗೆ ತನ್ನ ಸೌಂದರ್ಯದಿಂದ ಹಾಗೂ ಸೇವೆಯಿಂದ ಶಿವನನ್ನು ಮೆಚ್ಚಿಸಲು ವಿಫಲಳಾದ ಗಿರಿಜೆ ತಂದೆಯ ಅರಮನೆಯ ವೈಭವವನ್ನು ಬಿಟ್ಟು ತಪಸ್ಸಿನಲ್ಲಿ ತೊಡಗಲು ಅರಣ್ಯಕ್ಕೆ ಹೋಗುತ್ತಾಳೆ.
ಅಲ್ಲಿ, ಅವಳು ಆಹಾರವನ್ನು ತೊರೆದು ಪಂಚಾಗ್ನಿಯ ಮಧ್ಯೆ ನಿಂತು ಮಾಡಿದ ಕಠಿಣ ತಪಸ್ಸನ್ನು ಕಾಳಿದಾಸ ವಿವರವಾಗಿ ಹೇಳುತ್ತಾನೆ. ಮರದ ಎಲೆಯನ್ನು (ಪರ್ಣವನ್ನು) ತಿನ್ನುವುದನ್ನೂ ಬಿಟ್ಟು ತಪೋನಿರತಳಾದ ಪಾರ್ವತಿಗೆ `ಅಪರ್ಣಾ' ಎಂಬ ಹೆಸರು ಪ್ರಸಿದ್ಧವಾಯಿತು.

ಪಾರ್ವತಿಯ ಕಠಿಣ ತಪಸ್ಸು ಸಫಲವಾಯಿತು. ತನ್ನ ಮೂಲ ರೂಪ ಮರೆಮಾಚಿ ಬ್ರಹ್ಮಚಾರಿಯ ರೂಪದಲ್ಲಿ ಅವಳಿರುವಲ್ಲಿಗೆ ಬರುವ ಶಿವ, "ಅಪ್ರತಿಮ ಸುಂದರಿಯಾದ ನಿನಗೆ ಶಿವ ಸರಿಯಾದವನಲ್ಲ. ಹಾವುಗಳಿಂದ ಕೂಡಿರುವ ದೇಹ, ಗಜಚರ್ಮ ಧರಸಿರುವುದು, ಚಿತಾ ಭಸ್ಮ ಲೇಪಿತ ಶರೀರ, ಅವಲಕ್ಷಣವಾದ ಮೂರನೆಯ ಕಣ್ಣು" ಎಂದು ತನ್ನ ಮೂಲ ರೂಪದ ವೈಚಿತ್ರ್ಯಗಳನ್ನು ಹೇಳುತ್ತಾನೆ. ಪಾರ್ವತಿ ಈ ರೀತಿಯ ನಿಂದನೆಯನ್ನು ಸಹಿಸದೆ, ಶಿವನ ಮಹಾತ್ಮೆಯನ್ನು ಹಲವು ಬಗೆಯಲ್ಲಿ ಹೇಳುತ್ತಾ, ನನಗೆ ಅವನೇ ಬಹುಮಾನ್ಯ ಪ್ರಿಯ ಎನ್ನುತ್ತಾಳೆ.

ಇತೋ ಗಮಿಶ್ಯಾಮ್ಯಥವೇತಿ ವಾದಿನೀ ಚಚಾಲ ಬಾಲಾ ಸ್ತನಭಿನ್ನವಲ್ಕಲಾ |
ಸ್ವರೂಪಮಾಸ್ಥಾಯ ಚ ತಾಂ ಕೃತಸ್ಮಿತಃ ಸಮಾಲಲಮ್ಬೇ ವೃಷರಾಜಕೇತನಃ || 5-84

`ಕೊನೆಗೆ ಸಾಕಿನ್ನು ಇವನ ಮಾತು ಎಂದು ಪಾರ್ವತಿ, ಅಲ್ಲಿಂದ ಬೇರೆಡೆ ಹೋಗಲು ಒಂದು ಕಾಲನ್ನು ಎತ್ತಿಡುವುದರಲ್ಲಿ, ನಂದಿವಾಹನ ಶಿವ ತನ್ನ ನಿಜ ರೂಪ ಧರಿಸಿ ನಗುತ್ತಾ ಅವಳನ್ನು ತಡೆಯುತ್ತಾನೆ.'

ತಂ ವೀಕ್ಷ್ಯ ವೇಪಥುಮತೀ ಸರಸಾಂಗಯಷ್ಟಿರ್ನಿಕ್ಷೇಪಣಾಯ ಪದಮುದ್ಧೃತಮುದ್ವಹನ್ತೀ |
ಮಾರ್ಗಾಚಲವ್ಯತಿಕರಾಕುಲಿತೇವ ಸಿನ್ಧುಃ ಶೈಲಾಧಿರಾಜತನಯಾ ನ ಯಯೌ ನ ತಸ್ಥೌ || 5-85

'ಹರಿಯುವ ನದಿಗೆ ಅಡ್ಡಬಂದ ಬೆಟ್ಟ ತಡೆ ಒಡ್ಡಿದಂತೆ, ಒಮ್ಮೆಗೇ ತೋರಿದ ಪರಶಿವನ ನಿಜ ರೂಪವನು ಕಂಡ ಗಿರಿಜೆಗೆ, ಬೇರೆಡೆಗೆ ಹೋಗಲು ಎತ್ತಿದ್ದ ಒಂದು ಕಾಲನ್ನು ಮುಂದಿಡಲೂ ಆಗಲಿಲ್ಲ .. ಅಲ್ಲಿಯೇ ಇರಲೂ ಆಗಲಿಲ್ಲ.'

ಅದ್ಯಪ್ರಭೃತ್ಯವನತಾಂಗಿ ತವಾಸ್ಮಿ ದಾಸಃ ಕ್ರೀತಸ್ತಪೋಭಿರಿತಿ ವಾದಿನಿ ಚನ್ದ್ರಮೌಲೌ |
ಅಹ್ನಾಯ ಸಾ ನಿಯಮಜಂ ಕ್ಲಮಮುತ್ಸಸರ್ಜ ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ || 5-86

`ಅವನತಾಂಗಿಯೇ, ಇಂದಿನಿಂದ ನಾನಾದೆ ನಿನ್ನ ದಾಸ, ತಪಸ್ಸಿನಿಂದ ನನ್ನನ್ನು ಕೊಂಡಿರುವಿ' ಎಂದು ಪರಶಿವ ಹೇಳುತ್ತಿರುವಾಗಲೇ, ಪಾರ್ವತಿಗೆ ಅಂದಿನ ವರೆಗೂ ತಪಶ್ಚರ್ಯೆಯಿಂದ ಉಂಟಾದ ಕ್ಲೇಶವೆಲ್ಲವೂ ನಿವಾರಣೆಯಾಗಿಹೋಯಿತು.

ಇದು ಕಾಳಿದಾಸ ಕಣ್ಣಿಗೆ ಕಟ್ಟುವಂತೆ ನಿರ್ಮಿಸಿರುವ ರಮ್ಯ ಚಿತ್ರಣ. ಒಮ್ಮೆಗೇ ಒದಗಿದ ಅಚ್ಚರಿ - ಸಂತಸಗಳಿಂದ ಆವರಿಸಿರುವ ಲಜ್ಜೆ, ಗಾಭರಿ ಎಲ್ಲವೂ `ನ ಯಯೌ ನ ತಸ್ಥೌ' ಎಂಬ ಎರಡು ಕ್ರಿಯಾಪದಗಳಲ್ಲಿ ತೆರೆದು ತೋರಿಸುತ್ತದೆ. ಹಾಗೆಯೇ, ಅವಳನ್ನು `ಅವನತಾಂಗಿ' ಎಂದರೆ, ತಲೆ ಲಜ್ಜೆಯಿಂದ ಬಾಗಿದೆ ಎನ್ನುತ್ತಾನೆ. ಒಂದು ಕಾಲನ್ನು ಎತ್ತಿ ಹಿಡಿದಿರುವ ಸ್ವಭಾವತಃ ಕೋಮಲೆಯಾದ ಗಿರಿಜೆ ಬೇರೆಡೆ ಹೋಗಲಾರಳು .. ಅಲ್ಲಿಯೇ ಇರಲೂ ಲಜ್ಜೆ, ಸಂಕೋಚ ಅಡ್ಡ ಬರುತ್ತಿದೆ.

ಇಲ್ಲಿ ಕಾಣುವ ಚಿತ್ರಕಾವ್ಯವನ್ನು ನಾನಿಲ್ಲಿ ಕವಿತೆಯಾಗಿ ಹೇಳುವ ಪ್ರಯತ್ನ ಮಾಡಿದ್ದೇನೆ.

ತಪವ ಮಾಡಿಹಳು ಗಿರಿಜೆ ಪರಶಿವನ ಒಲವಿಗಾಗಿ
ತೊರೆದಿಹಳು ಅರಮನೆಯ ಭೋಗವನು
ಕಾನನದಿ ಒರಟು ಶಿಲೆಯ ತಲ್ಪ ಕಾಷಾಯ ವಸನ
ಹಿಮದಲ್ಲಿ ಮಳೆಯಲ್ಲಿ ಬಿಸಿಲ ಬೇಗೆಯಲಿ

ನಾಲಕ್ಕು ದಿಕ್ಕುಗಳಲಿ ಪ್ರಜ್ವಲಿಸುತ್ತಿರುವ ಬಡಬಾನಲ
ಮೇಲೆ ಸುಡುವ ಭಾಸ್ಕರ ನಡೆದಿದೆ ಪಂಚಾಗ್ನಿಯ ತಪ
ಕಂದ ಮೂಲ ಫಲಗಳೂ ಬೇಡವಾಯಿತು

ಹಸಿರೆಲೆಗಳ ಆಧಾರವನು ತೊರೆದು ಆದಳು ಅಪರ್ಣಾ

ತಟ್ಟಿತು ಗಿರಿಜೆಯ ನಿಲ್ಲದ ಕಠೋರ ತಪ ಪರಶಿವನನು
ವಟುವೇಷದಲಿ ಬಂದಿಹನು ಮುಂದೆ
ಸುಕೋಮಲೆ ನೀನೆಲ್ಲಿ ? ಚಿತಾಭಸ್ಮಲೇಪಿತ ಅವನೆಲ್ಲಿ?
ಎನುತ ಹರಿಸಿಹನು ನಿಂದೆಯನು ಹರನು

ತಾಳಲಾರದಾದಳು ಗಿರಿಜೆ ಶಿವನಿಂದನೆಯನು
ಹೋಗುವೆನಿಲ್ಲಿಂದ ಎನುತ ಕಾಲನೊಂದ ಎತ್ತಿಹಳು
ನಗುತಾ ಶಿವನಾಗ ತಡೆದನವಳ ನಿಜರೂಪದಿ
ಎತ್ತಿದ ಕಾಲನು ಮುಂದಿಡಲಾರದಾದಳಾಗ

ನಡುಗಿದೆ ಕಾಯ ಪ್ರಿಯಕರನ ಕಂಡು ಬಾಗಿದೆ ಶಿರ
ಅಡ್ಡಲಾಗಿ ಬಂದ ಬೆಟ್ಟ ತಡೆಯುವ
ಹರಿವ ನದಿಯಂತಾದಳು ಪರ್ವತರಾಜ ಕುಮಾರಿ
ಅಲ್ಲಿಯೇ ನಿಲ್ಲಲಾರಳು ಬೇರೆಡೆ ಹೋಗಲಾರಳು

ನುಡಿದನಾಗ ಹರನು ಜಗ ಮೆಚ್ಚುವಂದದಿ
ಅವನತಾಂಗಿ ನಾನಿನ್ನ ದಾಸನಾದೆನು
ಕೊಂಡಿರುವಿ ನನ್ನನು ನಿನ್ನ ತಪದಿಂದ ಎನಲು
ಸಂದಿತು ತಪಸ್ಸಿನ ಫಲ ಮಂಗಳವಾಯಿತು ಜಗಕೆ

ಇದು, ಒಮ್ಮೆಗೇ ಪ್ರಿಯಕರನ ಸಂಗ ಒದಗುವ ಸಂದರ್ಭದಲ್ಲಿ ಕಾಣುವ ಒಬ್ಬ ತರುಣಿ ಅನುಭವಿಸುವ ಭಾವಗಳ ತಾಕಲಾಟದ ಚಿತ್ರಣ. ಹಾಗೆಯೇ ತಾನು ಕೂತಲ್ಲಿಂದ ಬೇರೆಡೆ ಹೋಗಲು ದಡಕ್ಕನೆ ಎದ್ದ ಪಾರ್ವತಿಯನ್ನ `ಸ್ತನಭಿನ್ನವಲ್ಕಲಾ' ಎಂದರೆ, ಆತುರದಲ್ಲಿದ್ದ ಅವಳ ಮೇಲುಹೊದಿಕೆ ಸರಿದಿತ್ತು ಎನ್ನುತ್ತಾನೆ ಕಾಳಿದಾಸ. ಹೀಗೆ ತಾನು ಲೋಕದಲ್ಲಿ ಕಂಡದ್ದನ್ನು ಕಾವ್ಯವಾಗಿಸಿರುವ ಇಂತಹ ರಸ ಘಟ್ಟಗಳು, ರಮ್ಯ ಚಿತ್ರಣಗಳು ಹಲವೆಡೆ ಕಾಣಿಸಿಗುತ್ತವೆ. ಹಾಗಾಗಿಯೇ ಸಲ್ಲುತ್ತಿದೆ ಅವನಿಗೆ ಕವಿಕುಲಗುರುವೆಂಬ ಶಾಶ್ವತ ಸನ್ಮಾನ🙏

ಡಾ.ಜಯಂತಿ ಮನೋಹರ

ಒಡೆದ ಕಂಬ

ಓಂ ನಮೋ ನಾರಾಯಣಾಯ
ಅಹುದು ಮತ್ತೊಂದು ಮುಸ್ಸಂಜೆ ಆಯಿತು
ಕೆಂಪಾದ ಸೂರ್ಯ, ಹಕ್ಕಿಗಳ ದಿಕ್ಕು ಗೂಡಿನತ್ತ
ಅಂತರಂಗದ ಹೊಸ್ತಿಲಲ್ಲಿ ದುರುಳ ಮನದ ಉದರವ ಬಗೆದು ಅಂಧಕಾರವೆಂಬ ಕರುಳನ್ನು ಕಿತ್ತುತಿಹನು
ಅವನೇ ಅಹುದು ಅವನೇ ನರಸಿಂಹ

ಮತ್ತೆ ಮತ್ತೆ ಮುಂಜಾವಿನಲಿ ಹುಟ್ಟಿದ ಹಿರಣ್ಯ ಕಶ್ಯಪು
ಅಜ್ಞಾನದ ಕರಾಳ ಗುರುವಿಗೆ ನಮಿಸುತ
ಮಾತು ಕೇಳದ ಭಂಧ ತಲೆ ಎತ್ತುತಿಹನು
ಭವ್ಯ ಆಲಯದಲಿ ತನ್ನದೇ ಹೆಸರು ಕೇಳುವ ತವಕ
ಮೊದಲು ಆಕರ್ಷಕ ಯಾವುದು? ಕೆಡುಕೇ ಅಲ್ಲವೇ?
ಆ ಹಿರಣ್ಯನೊಡನೆ ಕಾಮ, ಕ್ರೋಧ, ಮದ, ಮತ್ಸರ
ಎಲ್ಲವೂ ಹುಟ್ಟಿಯೇ ಬಿಟ್ಟವು

ಹೃದಯಾಂತರಾಳದಲಿ ಯಾವುದೋ ಒಂದು ಕೋನದಲಿ ಅವನ ಜನನವಾಗಿತ್ತು ಮುಗ್ಧ ಬಾಲಕ
ದುರುಳತೆಯ ಛಾಯೆಯಲ್ಲಿ ಒಂದು ಪ್ರಶಾಂತ ದೀಪ
ಹೇಳುತ್ತಿತ್ತು ದುರುಳ ಪಿತನಿಗೆ ನೀನು ಮಿಥ್ಯದ ಅಧಿಪತಿ ಎಂದು
ನುಡಿಯುತ್ತಿತ್ತು ನಮೋ ನಾರಾಯಣಾಯ ಎಂದು

ಹ.. ನಾನೇ ಎಲ್ಲವೂ ಎಂಬ ಅಹಂಕಾರದ ಅರಮನೆಯಲಿ
ಕೂಗು, ಅಪಹಾಸ್ಯದ ನಗು, ಬಿಗುಮಾನದ ದವಡೆಯಲಿ
ಹಸಿಯಾದ ಖಾದ್ಯ ತಿಂದು ತಿಂದು ತೇಗುತ್ತಿತ್ತು
ಒಂದೇ ಸ್ಥಿರವಾದ ಉಚ್ಚಾರ ಬಲು ದಿಟವಾದ ಧ್ವನಿ
ಅದೇ ಆ ಕೋನದಲಿ ಕುಳಿತ ಮಗುವಾಗಿದ್ದ ಮನ
ಅದೇನೋ ಆ ಪಕ್ವವಾದ ರುಚಿಯಾದ ಹಣ್ಣಿನ ಸಿಹಿ
ದುಷ್ಟ ಕಿರುಚಾಟವನ್ನು ಸದೆಬಡೆಯುತ್ತಿತ್ತು

ಮತ್ತೆ ಮತ್ತೆ ಬೆಳಕು ಮೂಡಿ, ನೆತ್ತಿಗೆ ಬಂದು
ಸೊಕ್ಕು ಇಳಿಸುವ ಆ ಕೆಂಪಾದ ಸಂಜೆ
ದುರುಳ ಮನದ ಗಧಾ ಪ್ರಹಾರಕ್ಕೆ ಅಂತರಂಗದಲ್ಲಿನ

ದುರಹಂಕಾರದ ಕಂಬ ಒಡೆದು ಬಂದು ಉಗ್ರವಾಗಿ
ಸದೆಬಡೆಯುತ್ತದೆ ಮತ್ತೆ ಪ್ರಹ್ಲಾದವೆಂಬ ಮನದಮಗು
ನಗೆಬೀರಿ ಕೈ ಮುಗಿದು ಓಂ ನಮೋ ನಾರಾಯಣಾಯ ಎನ್ನುತ್ತಿದೆ
ಮತ್ತೊಂದು ಮುಂಜಾವು ಮತ್ತದೆ ಒಳ ಹೊರಗಿನ ಜಟಾಪಟಿ.. ಕಾಯಬೇಕು ಆ
ಸಾಯಂಕಾಲಕ್ಕಾಗಿ

- ಸಂಮ್ಮೋದ ವಾಡಪ್ಪಿ

ಬಕಾಸುರನ ಮರಿಮಕ್ಕಳು

ಕುರುಡ ಧೃತರಾಷ್ಟ್ರ ಪಾಂಡವರ ಪ್ರಗತಿಗೆ ಮತ್ಸರ ತಾಳಿ ಅರಗಿನ ಮನೆಯಲ್ಲಿ ಸುಡಿಸಲು ಯತ್ನಿಸಿದ್ದು ತಿಳಿದಿದೆ. ಪಾಂಡವರು ಅಲ್ಲಿಂದ ಹೇಗೋ ಪಾರಾಗಿ ಏಕಚಕ್ರನಗರಕ್ಕೆ ಬಂದು ಭಿಕ್ಷೆ ಬೇಡಿ ತಂದದ್ದನ್ನು ಅವರಮ್ಮನಿಗೆ ಕೊಟ್ಟರೆ 'ಅರ್ಧಪಾಲು ವೃಕೋದರಂಗೆ'. ಆದರೆ ವೃಕೋದರನಿಗೋ ಅದು ಏನೇನೂ ಸಾಲದೆ ಸದಾ ಕಾಲ ಅವನಿಗೆ ಅರೆಹೊಟ್ಟೆಯೇ ಆಗಿದ್ದಾಗ, ಬಕಾಸುರನಿಗಾಗಿ ಕಳಿಸಿದ್ದ ರಾಶಿ ಆಹಾರವನ್ನು ತಿಂದನೆಂದರೆ
ಸೋಜಿಗಪಡಲೇನಿದೆ.

ನಮ್ಮ ತಂದೆಗೆ ಹಾಸನದಿಂದ ವರ್ಗವಾಗಿ ನಾವು ಹರಿಹರಕ್ಕೆ ಬಂದಮೇಲೆ ಅಲ್ಲಿಯ ಜೋಳದ ರೊಟ್ಟಿ, ನಮ್ಮನ್ನು ಬಹಳ ಆಕರ್ಷಿಸಿತು. ಬಕ್ರಿ ಜತೆಗೆ ತುಂಬ್ಗಾಯಿ, ಗುರೆಳ್ಳು ಚಟ್ನಿಪುಡಿ, ಕಾಳುಪಲ್ಯ ಜೊತೆಗೆ ತಾಜಾಮೆಂತ್ಯದ ಸೊಪ್ಪು, ಮೂಲಂಗಿ ಸೊಪ್ಪು ಹೆಸ್ರುಬೇಳೆ ಕೋಸಂಬ್ರಿ, ಹಸಿ ಮೂಲಂಗಿ, ಈರುಳ್ಳಿ, ಸೌತೆಕಾಯಿ, ಗಟ್ಟಿ ಮೊಸರು ಇವನ್ನು ಸ್ನೇಹಿತರ ಮನೇಲಿ ಮೊದಲಿಗೆ ತಿಂದು ಆಹಾ! ಅದರ ರುಚಿಗೆ ಮಾರು ಹೋಗಿದ್ದೆ. ಆದ್ರೆ ರೊಟ್ಟಿ ನಮ್ಮನ್ನ ಬಲವಾಗಿ ತಟ್ಟಲಿಲ್ಲ. ಯಾಕೆಂದ್ರೆ ಭಕ್ರಿ ಬಡಿಯೋದನ್ನ ಕಲಿಯಲು ಸಾಧ್ಯವೇ ಆಗಲಿಲ್ಲ. ಈಗ್ಲೂ ಜೋಳದ ರೊಟ್ಟಿ ಅಂದ್ರೆ ಬಾಯಲ್ಲಿ ನೀರ್ ಬರುತ್ತೆ. ಆದ್ರೆ ಮಾಡಿ ತಿಂದು ತೃಪ್ತಿಪಡುವಷ್ಟು ರೊಟ್ಟಿ ಬಡಿಯುವುದನ್ನು ಕರಗತ ಮಾಡಿಕೊಳ್ಳೋಕೆ ಆಗಿಯೇ ಇಲ್ಲ.
ಇನ್ನು ಚಪಾತಿ ಸಹ ಆಗಲೋ ಈಗಲೋ. ಅಷ್ಟಕ್ಕಷ್ಟೆ. ಯಾಕೇಂದ್ರೆ ನಾವು ಅನ್ನದ ನಾಡಿನಿಂದ ಬಂದವರು. ನಮ್ಮದು ಆ **ಅನ್ನಗತಃ ಪ್ರಾಣ.**

ಹರಿಹರದಿಂದ ದಾವಣಗೆರೆ ಕಾಲೇಜಿಗೆ ಓಡಾಡುತ್ತಾ ಬಿ ಎಸ್ ಸಿ ಮುಗಿಸಿ, ಕಿರ್ಲೋಸ್ಕರ್ ಇಂಗ್ಲೀಷ್ ಮೀಡಿಯಂ ಸ್ಕೂಲ್ನಲ್ಲಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿ ಎರಡು ವರ್ಷ ಆಗಿತ್ತು. ನಮ್ಮಕ್ಕ ವಿಜಯಲಕ್ಷ್ಮಿ ಕನ್ನಡ ಮೀಡಿಯಮ್ನಲ್ಲಿ ನನಗಿಂತ ಮೊದಲೇ ಟೀಚರ್ ಆಗಿದ್ಲು. ನಮ್ಮಕ್ಕನ ಸಹೋದ್ಯೋಗಿಗಳೆಲ್ಲ ಸೇರಿ ಬಿಜಾಪುರ ಬಾದಾಮಿ ಐಹೊಳೆ ಪಟ್ಟದಕಲ್ಲು ಆ ಕಡೆ ಒಂದು ಸಲ ಪ್ರವಾಸದ ಯೋಜನೆ ಹಾಕಿದರು. "ನೀವೂ ಬನ್ನಿ ರತ್ನ ಹಾಡು ಗೀಡು ಹೇಳ್ತಾ ಪ್ರಯಾಣ ಮಾಡೋಕೆ ಚೆನ್ನಾಗಿರುತ್ತೆ" ಎಂದು ಕರೆದರು. ಸರಿ. ನಾನು ನಮ್ಮಕ್ಕ ವಿಜಯಾ, ಇರೆಗ್ರಾ ಮೇಷ್ಟ್ರು, ಕೇಶವಮೂರ್ತಿ, ಶ್ರೀಪಾದ ಭಟ್ರು, ಸಾವಿತ್ರಿ ಮೇಡಮ್, ಚಂಪಾವತಿ ಬಾಪಟ್ ಹೀಗೆ ಒಂದು ಹತ್ತುಜನರ ಗುಂಪು ಪ್ರವಾಸ ಸನ್ನದ್ಧರಾಗಿ ಟ್ರೈನು ಹತ್ತಿದೆವು. ರಾತ್ರಿ ಪವಡಿಸಿ ಬೆಳಿಗ್ಗೆ ಎದ್ದು ಎಲ್ಲರೂ ಕಾಫಿ ಟೀ ಕುಡಿದರು. ನನ್ನದು ಕಾಫಿ ಟೀ ಕುಡಿಯದ ಸನ್ಯಾಸ. ತಂದಿದ್ದ ತಟ್ಟೆಗಳಿಗೆ ಮೂರು ಮೂರು ಚಪಾತಿ ಚಟ್ನಿಪುಡಿ ಹಾಕಿಕೊಂಡು ತಿಂದು ನಾಶ್ತಾ ಮುಗಿಸಿ ತಟ್ಟೆ ತೊಳೆದುಕೊಂಡು ಬಂದೆವು.
ಹರಟೆ ಹೊಡೆದು ಸಾಕಾಗಿ ಮೊದಲ ದಿನದ ಉಮೇದು ಬಹಳ ಜೋರಾಗಿದ್ದುದರಿಂದ, ನಮ್ಮ ಖಂಜಿರ ತಾಳ ಗೆಜ್ಜೆ ಎಲ್ಲಾ ಹೊರ ತೆಗೆದು ಬಾರಿಸುತ್ತಾ ದಂಡಿಯಾಗಿ ಬರುತ್ತಿದ್ದ

ಜನಪದಗೀತೆಗಳನ್ನು ಇಹಲೋಕದ ಪರಿವೆ ಮರೆತು ಕೆಲವರು ಹಾಡತೊಡಗಿದೆವು. ಉಳಿದವರು ಹೊರಗೆ ನೋಡುತ್ತಿದ್ದರು. ನಮ್ಮ ಗಾಯನಕ್ಕೆ ಎಚ್ಚರಾದುದು ಠಣ್ ಠಣ್ ಠಣ್ ಎಂಬ ಶಬ್ದದಿಂದ. ನೋಡಿದರೆ ಒಳಗಿಡುವುದು ಮರೆತಿದ್ದ ಒಂದು ತಟ್ಟೆಗೆ ಕಾಸುಗಳು ಬೀಳುತ್ತಿದ್ದವು. ನಮ್ಮ ಉಳಿದ ಸಹೋದ್ಯೋಗಿಗಳು ಫಕಫಕನೆ ನಗುತ್ತಾ,
"ಹಾಡ್ಕೋತಾ ಬೋಗಿಲಿ ಓಡಾಡಿದರೆ ಟ್ರೈನ್ ಚಾರ್ಜು ಸಂಪಾದಿಸ್ಕೊಬಹುದು ನೋಡಿ" ಅಂದರು. ಅಪಮಾನಕ್ಕೆ ಹಾಡು ಕಂಠದೊಳಗೇ ಹುಗಿದುಹೋಗಿ, ಖಂಜಿರ ತಾಳಗಳು ಕಿಟ್ಬ್ಯಾಗ್ನಲ್ಲಿ ಮುಖಮುಚ್ಚಿಕೊಂಡವು.

ಮನೆಯಿಂದಲೇ ಎಲ್ಲರೂ ಶಕ್ತ್ಯಾನುಸಾರ ರೊಟ್ಟಿ ಚಪಾತಿ ಚಟ್ನಿಪುಡಿ ಮಾಡಿಕೊಂಡು ತಂದಿದ್ದೆವು. ರೈಲ್ ಚೊಂಬು, ಗಾಜಿನ ಬಾಟಲಲ್ಲಿ ನೀರು ತುಂಬಿಕೊಂಡಿದ್ದೆವು.

ಸೊರಗಿದ್ದ ನಮ್ಮ ಬಕ್ಕಣಕ್ಕೆ ಹೊಂದುವ ಲಾಡ್ಜಿಂಗ್ ಅಥವಾ ಛತ್ರದಲ್ಲೇ ಉಳಿದುಕೊಂಡು ಹುಬ್ಬಳ್ಳಿ, ಧಾರವಾಡ, ಐಹೊಳೆ ಪಟ್ಟದಕಲ್ಲು ಬಾದಾಮಿ ಇಲ್ಲೆಲ್ಲಾ ಅಲೆದೆವು. ನಮ್ಮ ಕಾಲೇ ನಮಗೆ ಜಟಕಾ. ನಮ್ಮ ಉತ್ಸಾಹವೇ ನಮ್ಮ ಕುದುರೆ. ಆಟೋದ ಮಾಯೆ ಇನ್ನೂ ಮುಸುಕಿರದ ಕಾಲ. ಆದರೆ ಪ್ರಾಯದ ಕಸುವಿನ ನಮಗೆ ಇವ್ಯಾವೂ ಅಷ್ಟು ಭಾದಿಸುತ್ತಿರಲಿಲ್ಲ. ಕಟ್ಟಿಕೊಂಡು ಹೋಗಿದ್ದ ಚಪಾತಿ ರೊಟ್ಟಿ ಚಟ್ನಿಪುಡಿಗಳಲ್ಲೇ ನಾಲ್ಕೈದು ದಿನ ದೂಡಿದೆವು. ಅಷ್ಟೊತ್ತಿಗಾಗಲೇ ನಾಲಿಗೆ ಸಂಪು ಹೂಡಿ "ನಾನೊಲ್ಲೆ ನಾನೊಲ್ಲೆ" ಎನ್ನುತ್ತಿತ್ತು. ಅನ್ನಕ್ಕಾಗಿ ಹಪಹಪಿಸುತ್ತಿತ್ತು. ರೊಟ್ಟಿ ಚಪಾತಿ ಗಂಟು ಖಾಲಿಯಾದಾಗ ನಮಗೊಂಥರಾ ಸಂತೋಷವೇ ಆಯಿತು.
ಅಷ್ಟು ಹೊತ್ತಿಗೆ ವಿಜಾಪುರ ಮುಟ್ಟಿದ್ದೆವು. ನಾವು ಪ್ರವಾಸ ಹೊರಟಿದ್ದು ಬೇಸಿಗೆ ರಜವಾದ್ದರಿಂದ ಪ್ರತಿದಿನ ಉರಿಬಿಸಿಲ ವಿಹಾರವೇ. ಗೋಲಗುಂಬಜ್ ಇತ್ಯಾದಿ ನೋಡಿ ದಣಿದ ಕಾಲುಗಳನ್ನೆಳೆದುಕೊಂಡು ಬಹಳ ನಿರೀಕ್ಷೆಯಿಂದಲೇ ಒಂದು ಸಾಧಾರಣ ಹೋಟೆಲ್ಗೆ ನುಗ್ಗಿದೆವು. ಅಲ್ಲಿಯೂ ಮೊದಲು ಚಪಾತಿಯೇ ಬರಬೇಕೇ? ಆನಂತರವಾದರೂ ಅನ್ನ ಹುಳಿ ಸಾರು ಸಿಗುತ್ತೆ ಅಂದ್ಕೊಂಡ್ರೆ ಕೊಟ್ಟಿದ್ದು ಒಂದು ಸಣ್ಣ ಬಟ್ಟಲು ಅನ್ನ ತುಸು ಮೊಸರು. ವಿಚಾರಿಸಿದರೆ "ನಮ್ಕಡಿ ಮಂದಿ ಜಾಸ್ತಿ ಅನ್ನ ಬೇಡೂದಿಲ್ರಿ. ಅದಕ್ಕ ಮೊಸರಕ್ಕಷ್ಟ ಸೊಲೂಪ ಅನ್ನ ಕೊಡ್ತೀವಿ" ಅಂದ್ರು. ಹೊಟ್ಟೆ ತುಂಬಿದರೂ ದುಮುಗುಡುವ ಅತೃಪ್ತಿಯಿಂದಲೇ ದುಡ್ಡು ತೆತ್ತು ಹೊರಬಂದೆವು. ಹೊಟ್ಟೆ "ಅನ್ನ ಅನ್ನ" ಎಂದು ಬೇಡುತ್ತಿತ್ತು.
ಮುಂದೆ ಕಾರವಾರದಲ್ಲಿ ಇಳಿದಾಗ ರಾತ್ರಿ ಹತ್ತು ದಾಟಿತ್ತು. "ಮೀನು ವೆಜಿಟೇರಿಯನ್ ಅಲ್ಲವಾ?" ಎನ್ನುವ ಕರಾವಳಿಯ ಈ ಊರಿನಲ್ಲಿ, ಮೀನಿರದ ವೆಜಿಟೇರಿಯನ್ ಹೋಟೆಲ್ಗಾಗಿ ವಿಚಾರಿಸುತ್ತಾ ಅಲೆದಲೆದು ಅಂತೂ ಇಂತೂ ಒಂದನ್ನು ಪತ್ತೆ ಮಾಡಿ ಖುಷಿಯಿಂದ ಎದುರು ನಿಂತರೆ ನಮ್ಮನ್ನು ಸ್ವಾಗತಿಸಿದ್ದು ಅಚ್ಚುಕಟ್ಟಾಗಿ ತೊಳೆಸಿಕೊಂಡು ಲಕಲಕಿಸುತ್ತಿದ್ದ ಖುರ್ಚಿ ಮೇಜುಗಳು ಮತ್ತು ಬೋರಲು ಹಾಕಿಸಿಕೊಂಡಿದ್ದ ದೊಡ್ಡ ದೊಡ್ಡ ಪಾತ್ರೆಗಳು! "ತಿನ್ನಲು ಏನೂ ಸಿಗಲಿಲ್ಲ ನಿಜ. ಹಾಗಾದರೂ ಉಪವಾಸ ಮಾಡಿದೀವಲ್ಲ. ಅದಕ್ಕೆ ಒಂದಿಷ್ಟು ಪುಣ್ಯವನ್ನಾದರೂ ನಮ್ಮ ಅಕೌಂಟಿಗೆ

ಸೇರಿಸಪ್ಪಾ ಶಿವನೇ" ಎಂದು ಬೇಡಿಕೊಂಡು ಪುಣ್ಯಾತ್ಮ ಲಾಡ್ಜಿಂಗ್ನವನೊಬ್ಬ ಕೊಟ್ಟ ರೂಮುಗಳಲ್ಲಿ ಗಂಟು ಮೂಟೆ ಸಮೇತ ಮಲಗಿದೆವು.
ಮಾರನೆಯ ದಿನ ತುಂಬಾ ನಿರೀಕ್ಷೆಯಿಂದ ಸೇರಿದ್ದು ಗೋಕರ್ಣ. ಯಾಕೆಂದರೆ ನಮ್ಮ ಸಹೋದ್ಯೋಗಿ ಚಂಪಾವತಿ, ತಮ್ಮ ಸೋದರಮಾವ ವಾಮನರಾವ್ ಬಾಪಟ್ ಎನ್ನುವವರ ಮನೆಯಲ್ಲಿ ತಿಂಡಿ ಊಟ ಎರಡಕ್ಕೂ ವ್ಯವಸ್ಥೆ ಮಾಡಲು ಹೇಳಿದ್ದರು. ಬೆಳಿಗ್ಗೆ ಸ್ನಾನ ಮುಗಿಸಿ ನಾವು ಕಾತರಿಸಿದ್ದು ತಿಂಡಿಗಾಗಿ. ಆದರೆ ಮೊದಲು ಮಹಾಬಲೇಶ್ವರನ ದರ್ಶನ ಮಾಡಿಬಿಡೋಣ ಎಂದು ವಾಮನರಾವ್ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಇನ್ನೇನು ಮಾಡೋದು! "ಸಿವ್ನೇ ಕಾಪಾಡಪ್ಪಾ" ಎಂದು ದಿಂಡುಗಡೆದು ಎಲ್ಲಾದೇವರ ದರ್ಶನ ಮಾಡುವಾಗ್ಲೂ ಗಮನವೆಲ್ಲಾ...... ಬೇಡ, ಬಿಡಿ. ವಾಪಸ್ಸಾಗಿ ಅವರ ಮನೆ ಹೊಕ್ಕಾಗ ಸಾಲಾಗಿ ಇಟ್ಟ ಬಾಳೆಲೆ, ನೀರಿನ ಲೋಟ ನಮಗಾಗಿ ಶಿಸ್ತಿನಿಂದ ಕಾಯುತ್ತಿದ್ದವು. ಉಪ್ಪಿಟ್ಟು ಚಟ್ನಿ ಅವರೇ ಬಡಿಸಿ ಬಡಿಸಿ ಕೈ ಸೋಲುವವರೆಗೂ ತಿಂದು ಉದರ ಬ್ರಹ್ಮನನ್ನು ತೃಪ್ತಿ ಪಡಿಸಿದರೂ ಮುಂದಿನ ಊಟಕ್ಕೂ ನಾಲಿಗೆ ಹೊಟ್ಟೆ ಎರಡೂ ಕಾತರಿಸುತ್ತಿದ್ದವು.
ಗೋಕರ್ಣದ ಪೇಟೆ, ಸಮುದ್ರದ ದಂಡೆ ಎಲ್ಲಾ ಸುತ್ತಿಕೊಂಡು ಬರುವ ಹೊತ್ತಿಗೆ ಬಿಸಿಲು ಬ್ರಹ್ಮರಾಕ್ಷಸನಾಗಿ, ಹೊಟ್ಟೆ ಹಸಿದ ತೋಳನಂತಾಗಿತ್ತು. ಹಿತ್ತಿಲಿಗೆ ಹೋಗಿ ಕೈಕಾಲು ತೊಳೆದುಕೊಂಡು ಊಟದ ಮನೆಗೆ ಬಂದೆವು. ಕುಡಿ ಬಾಳೆಲೆಯ ಎಡತುದಿಯಲ್ಲಿ ಉಪ್ಪು, ಅದರ ಪಕ್ಕದಲ್ಲಿ ಮಿಡಿ ಉಪ್ಪಿನ ಕಾಯಿ, ಮಾವಿನಕಾಯಿ ಚಟ್ನಿ, ಒಂದು ಪಲ್ಯ. ನೋಡಿದ ತಕ್ಷಣ ಕೆರಳಿದ ರಸನೆ ನಮ್ಮ ಮರ್ಯಾದೆ ಕಳೆಯದಂತೆ ತುಟಿ ಹಲ್ಲಿನ ಬಿಗಿ ಸೆರೆಯಲ್ಲಿ ದೂಡಿ ಎಲೆಯ ಮುಂದೆ ಕುಳಿತೆವು.
ಶುರುವಾಯಿತು ನೋಡಿ ಮೊದಲು ತಂಬೂಳಿ, ಆನಂತರ ಮಿಡಿ ಉಪ್ಪಿನಕಾಯಿ ರಸ ಅದಕ್ಕೆ ಎಣ್ಣೆ, ಮಾವಿನಕಾಯಿ ಚಟ್ನಿ ಎಣ್ಣೆ, ಸರದಿಯ ಮೇಲೆ, ಅಲ್ಲದೆ ಸರದಿಯನ್ನೂ ಮೀರಿ ಮತ್ತೆ ಮತ್ತೆ ನಮ್ಮ ಎಲೆಯ ಕಡೆ ಹರಿದು ಬರುತ್ತಲೇ ಇದ್ದವು. ಒಬ್ಬೊಬ್ಬರೂ ಒಂದೊಂದನ್ನೂ ಅದೆಷ್ಟು ಸಲ ಕಲೆಸಿಕೊಂಡು ತಿಂದೆವೋ! ಎಣಿಸುವುದು ಆ ಸಾವಿರ ಜಿಹ್ವೆಯ ಆದಿಶೇಷನಿಗೂ ಸಾಧ್ಯವಿರಲಿಲ್ಲ. "ಬದನೆ ಕಾಯಿ ಹುಳಿ ಇದೆ" ಎಂದರು. ತುಂಬಿತೇನೋ ಎನಿಸುತ್ತಿದ್ದ ಹೊಟ್ಟೆ ತಕ್ಷಣ "ಇನ್ನೂ ಜಾಗವಿದೆ ಹಾಕು ಹಾಕು" ಎಂದರೆ, ನಾಲಿಗೆ ಮತ್ತೆ ಕೆರಳಿ "ಸವಿಯಲು ಸಿದ್ಧವಾಗಿದ್ದೇನೆ ಬರಲಿ ಬರಲಿ" ಎಂದು ಹಾರೈಸಿತು. ಧಾರಾಳವಾಗಿ ತೆಂಗಿನಕಾಯಿ ತಿರುವಿ ಹಾಕಿದ ಹುಳಿ. ಅಮರರ ಸುಧೇಯೇಂ! ತೆಗಿ ಛೀ! ಈ ಹುಳಿಗೆ ಸಾಟಿಯೇ? ಇದರ ಮುಂದೆ ನಿವಾಳಿಸಿ ಎಸೆಯಬೇಕು. ಮತ್ತೊಂದು ಸುತ್ತಿನ ಕೈ ಬಾಯ್ಗಳ ಪೈಪೋಟಿ ಶುರುವಾಯಿತು. ಕಡೆಯಲ್ಲಿ ಕೊತ್ತಂಬರಿ ಸೊಪ್ಪು ಒಗ್ಗರಣೆ ಹಾಕಿದ್ದ ಮಜ್ಜಿಗೆಯನ್ನ ತಿಂದು. ತೃಪ್ತಿಯಿಂದ ತೇಗಿ, ಸ್ವರ್ಗದೊಳಗೀ ಊಟ ದೊರೆವುದೇನು? ಆ ಮಹಾತಾಯಿಯದು ಅಕ್ಷಯ ಪಾತ್ರೆ ಇರಬೇಕು. ಅದೆಷ್ಟು ಸೇರು ಅಕ್ಕಿಯ ಅನ್ನ ಮಾಡಿದ್ದರೋ! ಅದಿನ್ನೆಷ್ಟು ಮಾವಿನಕಾಯಿ ಚಟ್ನಿ ತಿರುವಿ, ಅದಿನ್ನೆಂಥಾ ದೊಡ್ಡ ಕೊಳಗದಲ್ಲಿ ಬದನೆಕಾಯಿ ಹುಳಿ ಮಾಡಿದ್ದರೊ!
ಬಕಾಸುರನ ಊಟ ಕಿತ್ತುಕೊಂಡ ಭೀಮನೂ ನಮ್ಮ ಊಟ ನೋಡಿ ಬೆರಗಾಗುತ್ತಿದ್ದನೇನೋ! ಈಗ ಹೇಳಿ ಅವತ್ತು ನಾವು ಬಕಾಸುರನ ಮರಿಮಕ್ಕಳಂತಾಗಿದ್ದು ಸುಳ್ಳೇನು?

ಸಾಕ್ಷಾತ್ ಅನ್ನಪೂರ್ಣೇಶ್ವರಿಯಂತಹ ಆ ಮಹಾತಾಯಿ ಬಡಿಸಿದ ಊಟವನ್ನು ಎಂದಾದರೂ ಮರೆಯಲು ಶಕ್ಯವೇನು?
ವಾಮನರಾವ್ ಬಾಪಟ್ ದಂಪತಿಗಳಿಗೆ ಇಂದಿಗೂ ನನ್ನ ಹೃದಯದಲ್ಲಿ ಇರುವ ಸ್ಥಾನವನ್ನು ಬೇರೆಯವರು ಆಕ್ರಮಿಸಲು ಸಾಧ್ಯವಾಗಿಲ್ಲ.

- ನಾಗರತ್ನ ಸಾಲಗಾಮೆ

ಗಾಳಕ್ಕೆ ಮೀನು ಖಂಡ ಸಿಕ್ಕಿದಾಗ

ಕೆರೆಬಾಗಿಲ ಸುಬ್ಬಾಶಾಸ್ತ್ರಿಯ ಮಗ ಸ್ವಾಮಿಗೆ ಈ ಆಲೋಚನೆ ತಲೆಯಲ್ಲಿ ಯಾವಾಗ ಹೊಕ್ಕಿತೋ ಗೊತ್ತಿಲ್ಲ. ಅವನದು ಒಂದೇ ವರಾತ “ ನಾಗೇಶ, ನಮ್ಮ ಮನೆಯ ಬಾವಿಗೆ ದಪ್ಪದೊಂದೆರಡು ಮೀನು ಬಿಡಬೇಕು. ಬಾವಿನೀರು ವಾಸನೆಬಂದಿದೆ. ಮೀನಿದ್ದರೆ ನೀರು ಕೊಳೆಯುದಿಲ್ಲವಂತೆ . ನಮ್ಮ ಗುಂಡಮ್ಮತ್ತೆ ಹೇಳಿದರು. ಶನಿವಾರ ಸ್ಕೂಲ್ ಮುಗಿದ ಮೇಲೆ ಕೆರೆಗೆ ಹೋಗಿ ನಾವೇ ಮೀನು ಹಿಡಿಯೋಣ ಬರ್ತೀಯಾ, ಚೆನ್ನಾಗಿರತ್ತೆ “ ಅಂತಾ . ಎಂಟನೇ ಕ್ಲಾಸಲ್ಲಿ ಓದ್ತಾ ಇದ್ದ ಇಬ್ಬರೂ ಚಡ್ಡಿ ದೋಸ್ತಗಳು. ಇಬ್ಬರದೂ ಹುಡುಗುತನ. ಕುತೂಹಲ. ಸಾಬರ ಹುಡುಗರು, ಊರಿನ ಕೆರೆಯ ದಂಡೆಯಲ್ಲಿ ಗಾಳ ಹಾಕಿ ಘಂಟಗಟ್ಟಲೆ ಕುಳಿತು ಮೀನು ಹಿಡಿದು, ಬಗಲಿನ ಚೀಲ ತುಂಬಿಸಿಕೊಳ್ಳುತ್ತಿದ್ದದ್ದನ್ನು ಇವರಿಬ್ಬರೂ ಕಂಡವರೆ. ಗಾಳಕ್ಕೆ ಎರೆಹುಳು ಸಿಕ್ಕಿಸಿ ನೀರಿಗೆ ಬೀಸ ಬೇಕು. ಕೂತು ಕಾಯಬೇಕು. ಮೀನು ಎರೆಹುಳದ ಆಸೆಗೆ ಬಂದು ಬಾಯ್ಹಾಕಿದಾಗ ಗಾಳ ಮೀನಿಗೆ ಚುಚ್ಚಿಕೊಂಡು ಒಳಮುಖವಾಗಿ ಜಗ್ಗತ್ತೆ. ಆಗ ಎಳೆದರೆ ಮೀನು ಸಿಗತ್ತೆ. ಈ ಎಲ್ಲಾ ಥಿಯರಿ ಜ್ಞಾನ ಇವರಿಗೆ ಸಾಬರಹುಡುಗರ ಉಪದೇಶದಿಂದ ಗೊತ್ತಿತ್ತು. ಸರಿ ಅದನ್ನು ಪ್ರಯೋಗಿಸಿದರೆ ನನ್ನ ಉದ್ದೇಶ ಈಡೇರುತ್ತದೆ ಎಂದು ಯೋಚಿಸಿದ ಸ್ವಾಮಿ. ಒಬ್ಬನೇ ಮಾಡಕ್ಕೆ ಅಳುಕು. ಅದಕ್ಕೆ ನಾಗೇಶನ ಹಿಂದೆ ಬಿದ್ದಿದ್ದ. ಇಂಥವೆಲ್ಲಾ ನಾಗೇಶನಿಗೂ ಪ್ರಿಯವೇ. ಇವನೂ ಒಪ್ಪಿಕೊಂಡು, ಶನಿವಾರ ಮಾರ್ನಿಂಗ್ ಸ್ಕೂಲ್ ಮುಗದ್ಮೇಲೆ ಮೀನುಹಿಡಿಯುವ ರಹಸ್ಯ ಯೋಜನೆಯನ್ನು ಮಾಡಿಕೊಂಡರು.

ಶನಿವಾರ ಬಂತು. ಗಾಳ ಬೇಕಲ್ಲ ಮೀನು ಹಿಡಿಯಲು. ನಮ್ಮೂರಲ್ಲಿ ಇಲಿಬೋನು, ಇಲಿಪಾಷಾಣ, ಗಾಳ ಇಂಥಾ ಸಾಮಾನೆಲ್ಲಾ ಸಿಗುತ್ತಿದ್ದುದ್ದು ಬಸ್ಟಾಂಡ್ ಹತ್ತಿರ ಇದ್ದ ಹುಸೇನ್ ಸಾಬರ ಅಂಗಡಿಲೇ. ಇಬ್ಬರೂ ಸಾಹೇಬರ ಅಂಗಡಿಗೆ ಹೋಗಿ ಗಾಳ ಕೇಳಿದರು. ಸಾಹೇಬರಿಗೆ ಅಚ್ಚರಿ. ಬ್ರಾಂಬ್ರ ಕೇರಿಹುಡುಗರು, ಇಬ್ಬರೂ ಜೋಯಿಸರ ಮಕ್ಕಳು ಗಾಳ ಕೇಳ್ತಾವರಲ್ಲ ಅಂತಾ. ವಯಸ್ಸಿನಲ್ಲಿ ಹಿರಿಯರಾಗಿದ್ದ ಅವರು “ ಏ ನಿಮ್ಗೆ ಮಾಡಾಕ ಬೇರೆ ಕೆಲಸ ಇಲ್ವೇನ್ರೋ. ಗಾಳ ಯಾಕ್ರೋ. ಮೀನ್ ಹಿಡೀತಾರೇನೋ ನಿಮ್ಮೋರು. ಹೋಗ್ರೋ ಮನೇಗೆ “ ಅಂತಾ ಗದರಿದರು. ಇವರುಗಳಿಗೆ ಊರಲ್ಲಿ ಎಲ್ಲರ ಹತ್ತಿರ ಹೀಗೇ ಏನೇನೋ ತುಂಟಾಟಗಳನ್ನು ಮಾಡಿ ಬಯ್ಯಿಸಿಕೊಳ್ಳೋದು ಅಭ್ಯಾಸವಾಗಿ ಬಿಟ್ಟಿತ್ತು. ಜಡ್ಡುಬಿದ್ದಿದ್ದರು. ಅವರು ಗಾಳ ಕೊಡೋ ವರೆಗು ಜಗ್ಗದೇ ಅಂಗಡಿಯಲ್ಲಿ ಸಾಹೇಬರ ಮುಂದೆ ನಿಂತೇ ಇದ್ದರು. ಅವರಿಗೂ ವ್ಯಾಪಾರವಾಗ ಬೇಕಲ್ಲ. ಕೊನೆಗೆ ಗಾಳ ಕೊಟ್ಟು ಕಳಿಸಿದರು. ಇಬ್ಬರು ವಿಜಯ ಸಾಧಿಸಿದವರಂತೆ ಗಾಳ ಹಿಡಿದು , ಕೆರೆಯ ಹತ್ತಿರ ಬಂದರು. ಮಧ್ಯಾಹ್ನದ ಸಮಯ. ಕೆರೆಯಲ್ಲಿ ಬಟ್ಟೆ ಸೆಣೆಯೋ ಅಗಸರು , ಊಟ ಆದ ಮೇಲೆ ಉಂಡ ಪಾತ್ರೆ, ಉಪಕರಣೆ ತೊಳೆಯೋಕೆ ಬರೋ ಬ್ರಾಂಬ್ರು, ಮೀನುಹಿಡಿಯೋರು ಯಾರೂ ಇರ್ಲಿಲ್ಲ. ಇವರಿಗೆ ಅನುಕೂಲದ ಸಮಯ. ಈಗ ಮುಂದಿನ ಹಂತ. ಗಾಳಕ್ಕೆ ಸಿಕ್ಕಿಸಲು ಎರೆಹುಳು ಬೇಕಲ್ಲ. ಎಲ್ಲಿಂದ ತರೋದು. ಕೆರೆಹತ್ತಿರಾನೇ ಇದ್ದ ತಿಪ್ಪೆಗುಂಡಿಯನ್ನು, ಅಲ್ಲೇ ಬಿದ್ದಿದ್ದ ಕೋಲಿಂದ ಕೆದಕಿ ಒಂದಷ್ಟು ಎರೆಹುಳು ಹಿಡಿದುಕೊಂಡು ನೀರಿನ ಬಳಿ ಕೂತರು.

ಗಾಳದ ಬಾಣದಂತಹ ಚೂಪಾದ ತುದಿಗೆ ಎರೆಹುಳು ಸಿಕ್ಕಿಸಿ ಸ್ವಾಮಿ ಗಾಳವನ್ನು ಬೀಸಿದ ನೀರಿಗೆ. ಸ್ವಲ್ಪ ಹೊತ್ತು ಕಾದ. ಏನೋ ಜಗ್ಗಿದ ಹಾಗಾಯಿತು. ಅವಸರವಾಗಿ ಮೇಲಕ್ಕೆಳೆದ. ಏನೂ ಇರಲಿಲ್ಲ. ಸಿಕ್ಕಿಸಿದ್ದ ಎರೆಹುಳುವನ್ನು ಸ್ವಾಹಾ ಮಾಡಿ ಜಾಣ ಮೀನು ಈ ಹಾರುವರ ಹೈಕಳಿಗೆ ಚಕ್ಮಾ ಕೊಟ್ಟಿತ್ತು. “ ಮರಳಿ ಯತ್ನವ ಮಾಡು” ಎಂಬಂತೆ ಮತ್ತೊಮ್ಮೆ ಗಾಳಕ್ಕೆ ಎರೆಹುಳುವನ್ನು ಸಿಕ್ಕಿಸಿದ ಸ್ವಾಮಿ. ಜೋರಾಗಿ ತಿರುಗಿಸಿ ನೀರಿಗೆ ಬೀಸ್ತೀನಿ ನೋಡು ಅಂತಾ ಗರಗರ ತಿರುಗಿಸಿ ಬೀಸಿದ. ಏನು ವ್ಯತ್ಯಾಸವಾಯಿತೋ , ಇವನ ವೇಗದ ತಿರುಗಿಸುವಿಕೆಯಿಂದ ಗಾಳಕ್ಕೆ ತಲೆತಿರುಗಿತೋ ಏನೋ. ಗಾಳವು ನೀರಿಗೆ ಹೋಗಿ ಬೀಳುವುದರ ಬದಲು , ಬೀಸಿದ ವೇಗದೊಂದಿಗೆ ತಿರುಗಿ ಬಂದು ಸ್ವಾಮಿಯ ಮೀನಖಂಡಕ್ಕೆ ಬಲವಾಗಿ ಚುಚ್ಚಿಕೊಂಡು ಬಿಟ್ಟಿತು. ಸಣ್ಣಗೆ ರಕ್ತ ಜಿನುಗ ತೊಡಗಿತು. ಚೂಪಾಗಿ, ತುದಿಯಲ್ಲಿ ಕೊಕ್ಕೆಯಂತೆ ಬಾಗಿರುವ ಗಾಳವನ್ನು ಹೊರತೆಗೆಯುವುದು ಹೇಗೆ ? ಇಬ್ಬರಿಗೂ ಆತಂಕ. ಭಯ.   ಡಾಕ್ಟರ್ ಶಾಪಿಗೆ ಹೋಗೋದೇ ಸರಿ ಅಂತಾ ಪುಣ್ಯಕ್ಕೆ ಇಬ್ಬರಿಗೂ ಅದ್ವೇಗೋ ಅನ್ನಿಸಿ ಹೊರಟರು. ಸ್ವಾಮಿ ಮೀನಖಂಡದಲ್ಲಿ ಗಾಳದ ತುದಿ, ಅದರ ನೈಲಾನ್ ದಾರ, ಗಳು ನಾಗೇಶನ ಕೈಯಲ್ಲಿ. ಹೆಚ್ಚು ಎಳೆಯುವ ಹಾಗಿಲ್ಲ. ಹೆಜ್ಜೆ ಮೇಲೆ ಹೆಜ್ಜೆಯಿಡುತ್ತಾ , ಇವರ ವಿಚಿತ್ರ ಮೆರವಣಿಗೆ ಕೆರೆಬೀದಿ ದಾಟಿ, ಗಾಣಿಗರ ಕೇರಿಯನ್ನು ಹಾದು, ಮುಖ್ಯರಸ್ತೆಯಲ್ಲಿದ್ದ ವಿಷ್ಣುಮೂರ್ತಿ ಡಾಕ್ಟರ್ ಶಾಪನ್ನು ಸೇರಿತು. ಈ ಇಬ್ಬರ ಅವತಾರವನ್ನು ನೋಡಿ ಡಾಕ್ಟರಿಗೆ ನಗು. ಮೊದಲು ಗಾಳವನ್ನು ತೆಗೆದು ಮಾಡಬೇಕಾದ ಚಿಕಿತ್ಸೆ ಮಾಡಿದರು. ನಂತರ ಅವರು ತಮ್ಮ ಮಂಗಳೂರು ಧಾಟಿಯಲಿ “ಎಂಥಕ್ಕೆ ನೀವು ಮೀನ್ ಹಿಡಿಯಲು ಹೋದದ್ದು ? ನೀವು ಮಾಡುವ ಕೆಲಸವಾ ಅದು ? ನಿಮ್ಮಪ್ಪಂದಿರಿಗೆ ಗೊತ್ತುಂಟಾ ? ನಾ ಹೇಳ್ತೀನಿ ಇವತ್ತು . ಮುಂದೆ ಹೀಗೆಲ್ಲಾ ಮಾಡಬೇಡಿ” ಅಂತಾ ಗದರಿಸಿ, ಬುದ್ಧಿ ಹೇಳಿ ಕಳಿಸಿದರು. ಸಣ್ಣ ಊರಾದ್ದರಿಂದ ಎಲ್ಲರೂ ಎಲ್ಲರಿಗೂ ಗೊತ್ತಿರುತ್ತಿದ್ದರು. ಸಣ್ಣವರು ತಪ್ಪು ಮಾಡಿದ್ದಾರೆ ಎನಿಸಿದಾಗಸಲುಗೆಯಿಂದ ಬೈಯುವ ಅಧಿಕಾರವೂ ಇರುತ್ತಿತ್ತು. ಹಾಗಾಗಿ ಅಂಗಡಿಯ ಹುಸೇನ್ ಸಾಬರಿಂದ ಹಿಡಿದು ವಿಷ್ಣುಮೂರ್ತಿಡಾಕ್ಟರ್ ವರೆಗೆ ಎಲ್ಲರ ಗದರಿಕೆ ಈ ಹುಡುಗರಿಗೆ. ಪಾಪ . ಸ್ವಾಮಿ ನಾಗೇಶರ ರಹಸ್ಯ ಯೋಜನೆ ಹೀಗೆ ಬಟಾಬಯಲಾಗಿ, ಊರಲ್ಲಿ ಗುಲ್ಲಾಗಿ , ಎಷ್ಟೋ ದಿನ ಇವರಿಬ್ಬರನ್ನು ಓರಿಗೆಯ ಹುಡುಗರು “ಗಾಳದ ಸ್ವಾಮಿ” , “ಗಳು ನಾಗೇಶ” ಅಂತಾ ರೇಗಿಸ್ತಾ ಇದ್ದರು. ಮತ್ತೆಂದೂ ಸ್ವಾಮಿ ಮೀನಿನ ಸುದ್ದಿ ಎತ್ತಲಿಲ್ಲ. ಅಂತೂ ಬಾವಿಗೆ ಮೀನು ಬಿಡುವ ಅವನ ಆಸೆ ಹಾಗೇ ಉಳಿಯಿತು. ಅಭ್ಯಾಸವಿಲ್ಲದೆ ಅಗ್ನಿಹೋತ್ರ ಮಾಡಿ ಗಡ್ಡಮೀಸೆ ಸುಟ್ಟುಕೊಂಡಂತಾಯಿತು ಇವರ ಪ್ರಯತ್ನ.

ಶಾಂತಾ ನಾಗಮಂಗಲ.

ಬೆರಳು, ಸಂಬಂಧ ಮತ್ತು ಪ್ರೀತಿ

ಒಂದು ನೀರು ತುಂಬಿದ ಲೋಟವನ್ನು ನಿಮ್ಮ ಎಡ ಅಂಗೈ ಮೇಲೆ ಇಟ್ಟುಕೊಂಡು ಅದನ್ನು ಉದ್ದಕ್ಕೆ ಚಾಚಿ ಹಾಗೇ ನಿಂತುಕೊಳ್ಳಿ. ಎಷ್ಟುಹೊತ್ತು ಹೀಗೇ ನಿಲ್ಲುವುದಕ್ಕೆ ಸಾಧ್ಯವಾಗುವುದು ಎಂಬುದನ್ನು ಪರೀಕ್ಷಿಸಿ. ಒಂದು ನಿಮಿಷ, ಎರಡು ನಿಮಿಷ ಸಾಧ್ಯವಾಗಬಹುದೇ? ಪರೀಕ್ಷಿಸಿ. ಅಷ್ಟರಲ್ಲೇ ನಿಮ್ಮ ತೋಳುಗಳು ಅಸಾಧ್ಯವಾದ ನೋವನ್ನು ಅನುಭವಿಸತೊಡಗುತ್ತೆ ಹಾಗೂ ಕೇವಲ ಒಂದು ಲೋಟ ನೀರು ಅತಿಯಾದ ಭಾರದ ಪದಾರ್ಥದಂತೆ ತೋರತೊಡಗುತ್ತೆ. ಅಲ್ಲವೇ! ಪರೀಕ್ಷಿಸಿ ನೋಡಿ.

ಸಂಬಂಧಗಳೂ ಹಾಗೆಯೇ! ಮೊದ ಮೊದಲು ಇವು ಬಹಳ ಹಗುರ ಎನಿಸುತ್ತದೆ. ಆದರೆ ದಿನ ಕಳೆದಂತೆ ಅದೇ ಸಂಬಂಧವು ಎಷ್ಟು ಭಾರ ಎನಿಸತೊಡಗುತ್ತದೆ ಅಲ್ಲವೆ?

ಭಾರವೆನಿಸತೊಡಗಿದ ಲೋಟವನ್ನು ಎಷ್ಟೇ ಎಚ್ಚರಿಕೆಯಿಂದ ಹಿಡಿದುಕೊಳ್ಳಲು ಪ್ರಯತ್ನಿಸಿದರೂ ಅದರಿಂದ ನೀವು ಅನುಭವಿಸುತ್ತಿರುವ ನೋವನ್ನು ತಡೆಯಲಾಗದೆ ಲೋಟವನ್ನು ಕೆಳಗೆ ಬೀಳಿಸುತ್ತೀರ ಅಥವಾ ಅದೇ ಬಿದ್ದುಹೋಗುವುದು ಹಾಗೂ ಅದರಲ್ಲಿದ್ದ ನೀರು ಚೆಲ್ಲಿಹೋಗಿ ವ್ಯರ್ಥವಾಗುವುದು.

ಹೀಗಾಗದಿರಲು ಏನು ಮಾಡಬಹುದು? ಒಂದು ಮಾರ್ಗವೆಂದರೆ -

ಲೋಟವನ್ನು ಕೈಯಲ್ಲಿ ಭದ್ರವಾಗಿ ಹಿಡಿದುಕೊಂಡು ಅದನ್ನು ನಿಮ್ಮ ಎದೆಗವಚಿಕೊಳ್ಳಬಹುದು. ಹಾಗೆ ಮಾಡಿದಾಗ ನೀವು ಅದನ್ನು ಇಡೀ ದಿನ ಹಿಡಿದುಕೊಂಡಿದ್ದರೂ ನಿಮಗೆ ಆಯಾಸವಾಗುವುದಿಲ್ಲ ಹಾಗೂ ಏನೂ ಅನಿಸುವುದಿಲ್ಲ. ಅಂದರೆ ಹೃದಯಕ್ಕೆ ಹತ್ತಿರವಾದದ್ದು ಭಾರವಲ್ಲ, ಬದಲಿಗೆ ದೂರದಲ್ಲಿರುವುದು ಭಾರವಾಗಿರುವುದು.

ಅಂದರೆ ಯಾವುದು ಹತ್ತಿರ, ಯಾವುದು ದೂರ? ಇದನ್ನು ನಿರ್ಧರಿಸುವವರು ಯಾರು? ಯಾರೇಕೆ? ನೀವೇ ಅದನ್ನು ನಿರ್ಧರಿಸುವವರು.

ಲೋಟದಲ್ಲಿರುವುದು ತಣ್ಣೀರಾದರೆ ನೀವು ಲೋಟವನ್ನು ಐದೂ ಬೆರಳುಗಳಿಂದ ಬಿಗಿಯಾಗಿ ಹಿಡಿದುಕೊಂಡು ಅದನ್ನು ನಿಮ್ಮ ಎದೆಗೆ ಅಪ್ಪಿಕೊಂಡಿರಬಹುದು. ಅದೇ ಲೋಟದಲ್ಲಿರುವ ನೀರು ತುಂಬಾ ಬಿಸಿಯಾಗಿದ್ದಲ್ಲಿ ಅದು ನಿಮ್ಮ ಬೆರಳುಗಳನ್ನು ಸುಡುತ್ತದೆ. ಆಗ ನೀವು ಲೋಟದ ತುದಿಯನ್ನು ಮಾತ್ರ ಹಿಡಿದುಕೊಂಡು ಅದರೊಂದಿಗೆ ಒದ್ದಾಡಬೇಕಾಗುತ್ತದೆ. ಲೋಟದಲ್ಲಿನ ನೀರು ಚೆಲ್ಲಿದಲ್ಲಿ ನಿಮ್ಮ ಬೆರಳುಗಳು ಸುಡುವುದು, ಹಾಗೂ ಹೆಚ್ಚು ಕಾಲ ಹೀಗೇ ಇರಲು ಆಗುವುದಿಲ್ಲ.

ಹಾಗಾಗಿ ಅದು ತಣ್ಣಗಾಗುವವರೆಗೂ ಕಾಯಬೇಕು. ಆದರೆ ಕಾಯಿಸಿದ ನೀರು ತಣ್ಣಗಾದ ಮೇಲೆ ರುಚಿಯನ್ನು ಕಳೆದುಕೊಳ್ಳುತ್ತದೆ ಅಲ್ಲವೆ!

ಒಂದು ಪಕ್ಷ ಲೋಟದಲ್ಲಿರುವ ನೀರು ತೀರಾ ತಣ್ಣಗಿದ್ದರೂ ಅದರಿಂದ ನಾಲಗೆಗೆ ಒದ್ದಾಟ ಅಲ್ಲವೇ? ಇಂತಹ ಸಂದರ್ಭದಲ್ಲಿ ಹಿತವಾಗಿರುವುದೆಂದರೆ ಉಗುರು ಬೆಚ್ಚಗಿರುವ ನೀರು ಮಾತ್ರ ಅಲ್ಲವೇ?

ಇಂತಹ ಉಗುರು ಬೆಚ್ಚಗಿನ ಸಂಬಂಧವನ್ನು ಬೆಳೆಸಿಕೊಳ್ಳುವುದು ಹೇಗೆ? ಆಲೋಚಿಸಿ.

ಸಂಬಂಧವು ಉಗುರಿನಂತಿರಬೇಕು. ಅದು ಸದಾ ಬೆರಳಿನ ಅವಿಭಾಜ್ಯ ಅಂಗವೇ ಆಗಿರಬೇಕು. ಉಗುರು ಬೆರಳಿನಿಂದಾಚೆಗೆ ಬರುತ್ತಿದ್ದಂತೆ ಅದನ್ನು ಕತ್ತರಿಸಿ ಎಸೆಯಬೇಕಾಗುತ್ತದೆ ಅಲ್ಲವೇ? ಹಾಗೂ ಬೆರಳು ಹಾಗೂ ಉಗುರುಗಳ ನಡುವೆ ಕೊಳೆ ಇರದಂತೆ ನೋಡಿಕೊಳ್ಳಬೇಕು, ಇಲ್ಲದಿದ್ದಲ್ಲಿ ಅದು ಅನಾರೋಗ್ಯ ಸಂಬಂಧಗಳಿಗೆ ಎಡೆಮಾಡಿಕೊಡುವುದು, ಅಲ್ಲವೇ?

ಪ್ರೀತಿ ಬೆರಳಿನಂತೆ, ಬೆರಳೆತ್ತಿ ತೋರಿಸಿದ ಚಂದ್ರನಂತೆ. ಸಂಬಂಧವು ಬೆರಳಲ್ಲೂ ಇಲ್ಲ, ಆಕಾಶದಲ್ಲೂ ಇಲ್ಲ. ಆದರೆ ಅದು ನೀವು ಬೆರಳುಮಾಡಿ ತೋರಿಸುವ ಪ್ರೀತಿಯಲ್ಲಿದೆ ಅಲ್ಲವೇ? ಆಲೋಚಿಸಿ.

ಗುರುಪ್ರಸಾದ್ ಹಾಲ್ಕುರಿಕೆ
13-6-20

ಮೂಲ : ಭಾರತೀಯ ಸ್ಟೇಟ್ ಬ್ಯಾಂಕಿನ ತರಬೇತಿ ಕೇಂದ್ರದಲ್ಲಿ ಅನೇಕ ವರ್ಷಗಳ ಹಿಂದೆ ನಡೆದ "ಪರಿವರ್ತನ" ಕಾರ್ಯಕ್ರಮದಲ್ಲಿ ಪ್ರಸ್ತುತ ಪಡಿಸಿದ್ದು.

ಮತ್ತಷ್ಟು ವಿಶ್ಲೇಷಣೆ, ವಿಮರ್ಶೆಗಳಿಗೆ ಸ್ವಾಗತ.

ನನ್ನ ಹಮ್ಮನು ಬಿಡಿಸು

ರಾಗ : ಮೋಹನ.   ಆದಿತಾಳ

ನಾನು ನಾನೆನ್ನುವ ನನ್ನಹಮ್ಮನು ಬಿಡಿಸು
ಭಾನು ಮಂಡಲ ಸ್ಥಿತನೆ ನಾರಾಯಣ.
||ಪಲ್ಲವಿ||

ಮಾನ ಅಭಿಮಾನಗಳ ಹಿರಿದಾಗಿ ಮೆರೆಸುತ್ತ |
ಜ್ಞಾನ ಗೆಟ್ಟೆನು ಮುಕ್ತಿ ಮಾರ್ಗ ಹುಡುಕದೆಲೆ
||ಅ ಪ||

ಮದಮತ್ತ ದಾನವರ ಮದ ಮುರಿದ ಮದನ ಪಿತ
ಮದಿಸಿದೆನ್ನಯ ಮದವನಂತೆ ಮುರಿಯೋ
ಒದೆದು ಎಂತಾದರೂ ಬುದ್ಧಿಯನು ಕಲಿಸದಿರೆ
ನದಿಗಿಳಿದ ಮೃಣ್ಮೂರ್ತಿ ಪರದಾಶೆಯು

ಎಂಟು ಗೇಣಿನ ದೇಹ ತಂಟೆಕೋರರ ತಾಣ|
ನೆಂಟ ಸುಳಿವನು ಕೊಡದೆ ತೆರಳಬಹುದು
ಅಂಟು ಕಳಚಲೇ ಬೇಕು ಭವದ ಎಂದರಿದರೂ
ಗಂಟು ಹಾಕಿದೆ ಮದಕೆ ಕಾಮ ಕ್ರೋಧ ವನು

ಒಳಗೆಲ್ಲೋ ತುಡಿಯುತಿದೆ ಮೋಕ್ಷದಾಸೆಯು ಸ್ವಾಮಿ
ಅಳಿದು ಹೋಗದ ತೆರದಿ ಉಳಿಸಿ ಬೆಳೆಸುತಲಿ
ಇಳೆಯಲಿಂದೀ ಜನ್ಮ ವ್ಯರ್ಥವಾಗದ ತೆರದಿ
ನಳಿನನಾಭನೆ ಚೆನ್ನಕೇಶವನೆ ದಯಮಾಡೊ

* * * *

ರಚನೆ: ರತ್ನಾ ಮೂರ್ತಿ
ಗಾಯನ: ಮಂಗಳಾ ನಾಡಿಗ್

ಚರಮ ಗೀತೆ

ಆನಾ ಆಕ್ಮಟೋವಾ ರಷ್ಯಾದ ಓರ್ವ ಪ್ರಮುಖ ಕವಯಿತ್ರಿ. Requiem ಆಕೆಯ ಅತ್ಯುತ್ತಮ ಕೃತಿ ಎಂದು ಪರಿಗಣಿಸಲ್ಪಟ್ಟಿದೆ. ಇದು ಸಿದ್ಧ ಸೂತ್ರಗಳಲ್ಲಿ ಬಂಧಿಯಾಗದ ಆದರೆ ಕಾವ್ಯಗುಣವನ್ನು ತನ್ನುದ್ದಕ್ಕೂ ಮೈಗೂಡಿಸಿಕೊಂಡಿರುವ ಕವಿತೆ. ರಷ್ಯದ ಕ್ರಾಂತಿಯ ಸಮಯದಲ್ಲಿ ರಚಿತವಾದ ಈ ಕವನ ಆ ಸಂದರ್ಭದ ಸಮರ್ಥ ಚಿತ್ರಣವನ್ನು ಕೊಡುತ್ತದೆ. ಊರುಗಳು, ನದಿಗಳು, ಕ್ರಾಂತಿಕಾರಿಗಳ ಅಟ್ಟಹಾಸ, ಜೈಲುಗಳು, ಕೈದಿಗಳ ದೀನ ಅವಸ್ಥೆ, ಅವರ ಸಂಬಂಧಿಗಳ ಆರ್ತ ಸ್ಥಿತಿ, ಅನಿಶ್ಚಿತತೆ, ಅಸಹಾಯಕತೆ, ನೋವು, ಗಟ್ಟಿತನದ ಚಿತ್ರಗಳನ್ನು ಕಣ್ಮುಂದೆ ನಿಲಿಸುತ್ತದೆ. ಒಬ್ಬನೇ ಮಗನಾದ ಲೆವ್ ಗುಮಿಲೆವ್ ಹಾಗು ಪತಿಯ ಬಂಧನ (ನಂತರ ಪತಿಯ ಮರಣ) ತಂದ ವಿವಿಧ ಭಾವಾವೇಶಗಳನ್ನು ಬದಲಾದ ರಷ್ಯದ ಸಮಾಜಿಕ ಚಿತ್ರಣದೊಂದಿಗೆ ಕವನವು ಕಟ್ಟಿ ಕೊಡುತ್ತದೆ. ಈ ಕವನವನ್ನು 'ಕವನ ಚಕ್ರ' ಎಂದಿದ್ದಾರೆ. ೧೫ ಚಿಕ್ಕ ಚಿಕ್ಕ ಕವನಗಳ ಗುಚ್ಚವಿದು. ಮಿನಿ ಕವನಗಳು ಒಂದಕ್ಕೊಂದು ನೇರ ಸಂಬಂಧವಿಲ್ಲದಿದ್ದರೂ ಹಿಂದಿನ ಕವನದ ಭಾವದಿಂದ ಮುಂದುವರೆಯುತ್ತವೆ.

ಈ ನೀಳ್ಗವನವನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ನೋಡಬಹುದು. ಮೊದಲ ಭಾಗವು ಆಕ್ಮಟೋವಾಳು ಈ ಕವನವನ್ನು ಬರೆಯಲು ಪ್ರೇರಣೆ. ಎರಡನೆಯ ಮತ್ತು ಮುಖ್ಯ ಭಾಗದಲ್ಲಿ ೧೦ ಮಿನಿ ಕವನಗಳಿವೆ. ಆಕ್ಮಟೋವಾಳ (ರಷ್ಯದ ಯಾವುದೇ ಹೆಣ್ಣೂ ಆಗಬಹುದು) ವೇದನೆ ಕವನದಿಂದ ಕವನಕ್ಕೆ ವಿವಿಧ ಮಜಲುಗಳನ್ನು ದಾಟಿ ಕಡೆಗೆ ಆಧ್ಯಾತ್ಮಿಕ ನೆಲೆಯನ್ನು ತಲುಪುತ್ತದೆ. ಆಕೆಯ ವೈಯಕ್ತಿಕ ನೋವು ಸಾರ್ವತ್ರಿಕವೂ ಆಗುತ್ತದೆ. ಕಡೆಯ ಭಾಗದಲ್ಲಿ ತನ್ನಂತೆ ಸಂಕಟವನ್ನು ಅನುಭವಿಸಿದ ಮಹಿಳೆಯರಿಗೆ ಕವನವನ್ನು ಅರ್ಪಿಸುತ್ತಾಳೆ.

ಕವನ ರಚನೆಯ ಮುಖ್ಯ ಘಟ್ಟ ೧೯೩೫ ರಿಂದ ೧೯೪೦. ಆದರೂ ೧೯೫೭ರ ವರೆಗೆ ಕವನವನ್ನು ಪರಿಷರಿಸುತ್ತಲೇ ಇದ್ದಳು ಎನ್ನಲಾಗುತ್ತದೆ. ಸ್ಟಾಲಿನ್ ನ ಆಡಳಿತವಿದ್ದ ಸಮಯದಲ್ಲಿ ಈ ಕವನದ ಪ್ರಕಟಣೆ ಸಾಧ್ಯವಿಲ್ಲವೆಂದು ತನ್ನ ಕವಿ ಮಿತ್ರರಿಗೆ ಬಾಯಿಪಾಠ ಮಾಡಿಸುತ್ತಿದ್ದಳಂತೆ. ಸ್ಟಾಲಿನ್ ನ ಸಾವಿನ ನಂತರ (೧೯೫೩) ಕವನ ಪ್ರಕಟವಾದರೂ ರಷ್ಯಾದಲ್ಲಿ ಪೂರ್ಣವಾಗಿ ಪ್ರಕಾಶನಗೊಂಡಿದ್ದು ೧೯೮೭ರಲ್ಲಿ.

ನನಗೆ ರಷ್ಯನ್ ಬಾರದಿದ್ದುದರಿಂದ ಮೂರು ಇಂಗ್ಲೀಷ್ ಅನುವಾದಗಳನ್ನು ಆಕರವಾಗಿರಿಸಿಕೊಂಡು ಪ್ರತಿಯೊಂದು ಸಾಲಲ್ಲೂ ಪದದಲ್ಲೂ ಮೂಲ ಆಶಯ ಏನಿರಬಹುದೆಂದು ಆಲೋಚಿಸಿ ಕನ್ನಡಕ್ಕೆ ತಂದಿದ್ದೇನೆ. ನಿಮ್ಮ ವಿಮರ್ಶೆಗಳಿಗೆ ಸ್ವಾಗತ.

ಚರಮ ಗೀತೆ

ವಿದೇಶಿ ಆಕಾಶದ ಅಡಿಯಲ್ಲಲ್ಲ
ಅನ್ಯರ ರೆಕ್ಕೆಯ ರಕ್ಷಣೆಯಡಿಯಲ್ಲಲ್ಲ-
ಇದೆಲ್ಲವನ್ನೂ ನಾನು, ನನ್ನ ಜನರೊಡನೆ ಹಂಚಿಕೊಂಡಿದ್ದೇನೆ

ದುರಾದೃಷ್ಟವೂ ನಮ್ಮ ಕೈಬಿಟ್ಟ ಸ್ಥಳದಲ್ಲಿ.
(೧೯೬೧)

ಪ್ರಸ್ತಾವನೆಯ ಬದಲು

ಯೆಷ್ಹಾವ್[1] ಭಯೋತ್ಪಾದನೆಯ ಭೀಕರ ದಿನಗಳಲ್ಲಿ, ನಾನು ಹದಿನೇಳು ತಿಂಗಳು ಲೆನಿನ್ಗ್ರಾಡ್[2] ಜೈಲಿನ ಸರತಿಗಳಲ್ಲಿ ಕಾದಿದ್ದೇನೆ. ಒಂದು ದಿನ ಯಾರೊ ಒಬ್ಬರು, ಏಕೊ ಏನೋ, ನನ್ನನ್ನು 'ಆರಿಸಿದರು'. ಅಂದು ಚಳಿಯಿಂದ ನೀಲಿಗಟ್ಟಿದ ತುಟಿಯ, ನನ್ನ ಹೆಸರನ್ನು ಜನುಮದಲ್ಲೇ ಕೇಳದ ಒಬ್ಬಾಕೆ ನನ್ನ ಹಿಂದೆ ಇದ್ದಳು. ಒಮ್ಮಲೆ, ನಮ್ಮೆಲ್ಲರ ಸ್ವಭಾವವೇ ಆಗಿಬಿಟ್ಟಿದ್ದ ಜಡತೆಯಿಂದ ಬೆಚ್ಚಿ ಎದ್ದು, ನನ್ನ ಕಿವಿಯಲ್ಲಿ ಮೆಲ್ಲನೆ ಹೇಳಿದಳು(ಅಲ್ಲಿ ಎಲ್ಲರೂ ಮೆಲ್ಲಗೇ ಮಾತಾಡುತ್ತಿದ್ದೆವು) - ' ಯಾರಿಗಾದರೂ ಇದನ್ನು ವಿವರಿಸಲು ಸಾಧ್ಯವೇ?' 'ನಾ ಮಾಡಬಲ್ಲೆ' ಎಂದೆ. ಆಗ ಮುಖ ಮಾತ್ರವಾಗಿದ್ದರಲ್ಲಿ ನಗುವಿನಂಥದ್ದೇನೊ ಮಿಂಚಿತು.
(ಏಪ್ರಿಲ್ ೧ - ೧೯೫೭,ಲೆನಿನ್ಗ್ರಾಡ್)

ಅರ್ಪಣೆ

ಪರ್ವತಗಳು ಕುಸಿದಿವೆ ಈ ದಾರುಣ ದುಃಖದ ಮುಂದೆ,
ನಿಂತಿದೆ ಮಹಾನದಿಯೊಂದರ ಹರಿವು,
ಆದರೂ,
ಸೆರೆಯಾಳು ದರಿಯನ್ನೂ,
ಸಾವಿನಂತಹ ಬೇಗುದಿಯನ್ನೂ ಮರೆಮಾಚಿ
ಭದ್ರವಾಗಿ ಮುಚ್ಚಿಯೇ ಇದೆ ಸೆರೆಮನೆಯ ಬಾಗಿಲು.
ತಂಪಾದ ಗಾಳಿ ಬೀಸಿದೆ,
ಬೆಚ್ಚಗಿನ ಸೌಮ್ಯ ಸೂರ್ಯಾಸ್ತವಿದೆ,
ಯಾರಿಗಾಗಿಯೊ, ನಮಗೇನು ಗೊತ್ತು.
ಎಲ್ಲೆಡೆಯೂ ನಮದೊಂದೇ ರೀತಿ
ದ್ವೇಷದ ಕೀಲಿಯ ಕರ್ಕಶ ತಿರುವನ್ನು
ಸೈನಿಕರ ದಾರ್ಷ್ಟ್ಯದ ನಡೆಯನ್ನು ಕೇಳುತ್ತಾ,
ಮುಂಜಾನೆಯ ಪ್ರಾರ್ಥನೆಗೋ ಎಂಬಂತೆ, ಎಚ್ಚರಗೊಂಡು,
ಉತ್ಕರ್ಷದಿಂದಿಳಿದು, ಹುಚ್ಚೆದ್ದ ರಾಜಧಾನಿಯಲ್ಲಲೆದು,
ಕಂಡೇವು - ಸತ್ತವರ, ನಿರ್ಜೀವಿಗಳ;
ಮತ್ತಷ್ಟು ಕೆಳಗಿಳಿದ ಸೂರ್ಯನ; ಇನ್ನಷ್ಟು ಮಂಜಾದ ನೇವಾಳ:[3]
ಆದರೂ ದೂರದಲ್ಲೆಲ್ಲೊ ಹಾಡುತ್ತಿದೆ ಭರವಸೆ ನಿರಂತರವಾಗಿ.

ತೀರ್ಪು. ತಕ್ಷಣ ಒಡೆದ ಕಣ್ಣೀರ ಕಟ್ಟೆಯ
ಹಿಂದೆಯೇ ಸಂಪೂರ್ಣ ಏಕಾಂಗಿತನ,
ಮಿಡಿವ ಹೃದಯವನ್ನು ದಾರುಣವಾಗಿ ಕಿತ್ತೆಸೆದಂತೆ, ಅಥವಾ ಜಜ್ಜಿದಂತೆ,
ಅಲ್ಲೇ ಬಿದ್ದಿದ್ದಾಳಾವಳು ದಾರುಣವಾಗಿ.
ಆದರೂ ಏಕಾಂಗಿಯಾಗಿ, ತಡವರಿಸಿ ನಡೆಯುತ್ತಿದ್ದಾಳೆ.
ನೀವೆಲ್ಲಿದ್ದೀರಿ, ನನ್ನ ಒಲ್ಲದ ಗೆಳೆಯರೆ,
ನನ್ನ ಎರೆಡು ರಾಕ್ಷಸಿ ವರ್ಷಗಳ ಬಂಧಿಗಳೆ?
ಸೈಬೀರಿಯಾದ ಹಿಮಗಾಳಿಯಲ್ಲೇನು ಪವಾಡ ಕಂಡಿರಿ?
ಚಂದಿರನ ಗೋಲದ ಸುತ್ತಾ ಕಂಡಿರೆಂತಹ ಬಿಸಿಲು ಕುದುರೆ?
ನಿಮ್ಮೆಲ್ಲರಿಗೂ ಇದೋ ನನ್ನ ವಂದನೆ, ವಿದಾಯ.
(ಮಾರ್ಚ್ ೧೯೪೦)

ಮುನ್ನುಡಿ

ಇದು ನಡೆದದ್ದು, ಸತ್ತವರು ಮಾತ್ರವೇ
ನಗುತ್ತಿದ್ದಂದು, ತಮ್ಮ ಬಿಡುಗಡೆಯ ಸಂತಸದಲ್ಲಿ.
ಲೆನಿನ್ಗ್ರಾಡ್ ತನ್ನ ಸೆರೆಮನೆಗಳ ಸುತ್ತಲೇ ನೇತಾಡುತ್ತಿತ್ತು.
ಬೆಲೆ ಇಲ್ಲದ ಲಾಂಛನವೊಂದು, ತನ್ನ ತುಣುಕೊಂದನ್ನು ಹಾರಾಡಿಸುವಂತೆ.
ತೀಕ್ಷ್ಣವಾಗಿ ಉಚ್ಚ ಸ್ವರದಲ್ಲಿ ಹಾಡುತ್ತಿದ್ದವು ಶಿಳ್ಳೆಗಳು
ಪುಟ್ಟ ವಿದಾಯ ಗೀತೆಗಳ.
ಯಾತನೆಯಿಂದ ಬುದ್ದಿಗೆಟ್ಟ
ಅಪರಾಧಿಗಳ ಸಾಲುಗಳಿಗೆ.
ಪಕ್ಕದಲ್ಲೇ ನಡೆದಿತ್ತು ಸೇನಾಪಡೆ
-
ಮುಗ್ಧ ರಷ್ಯಾ ರಕ್ತ ರಂಜಿತ ಬೂಟುಗಳ,
ಕರಿಗಾಡಿ ಚಕ್ರಗಳ [4]ಅಡಿಯಲ್ಲಿ ವಿಲಿಗುಡುತ್ತಿದ್ದಾಗಲೆ
ಮರಣ ನಕ್ಷತ್ರ ನಮ್ಮ ಮೇಲೆಯೇ ಕಂಡಿತ್ತು.

ಕರೆದೊಯ್ದರು ನಿನ್ನ ಮುಂಜಾನೆಯಲ್ಲಿ. ಹಿಂಬಾಲಿಸಿದೆ
ಶವದ ಹಿಂದೆ ಸಾಗುವಂತೆ.
ಅರೆಗತ್ತಲ ಮನೆಯಲ್ಲಿ ಮಕ್ಕಳ ಅಳುತ್ತಿದ್ದರು.
ಮೂರ್ತಿಯ ಮುಂದಿದ್ದ ದೀಪದ ಬೆಳಕು[5] ಮಂಕಾಗಿತ್ತು
ನಿನ್ನ ತುಟಿಯ ಮೇಲಿನ ಮೂರ್ತಿಯ ಥಂಡಿಯನ್ನೂ
ನಿನ್ನ ಹುಬ್ಬಿನ ಮೇಲೆ ಸಾವಿನ ಹೂವಿನಂತಿದ್ದ ತಣ್ಣನೆಯ ಬೆವರ ಸಾಲನ್ನು

ನಾ ಮರೆಯಲಾರೆ.
ಕೊಲೆಯಾದ ಸೇನಾನಿಯ ಪತ್ನಿಯರೊಡನೆ ಕೆಂಪು ಚೌಕದಲ್ಲಿ
ಕ್ರೆಮ್ಲಿನ್ ನ[2] ಮಿನಾರುಗಳ ಕೆಳಗೆ ನಾನು ಎಣೆಯಿಲ್ಲದಂತೆ ರೋಧಿಸುವೆ.
[1935. ಶರತ್ಕಾಲ. ಮಾಸ್ಕೊ] (೧)

ಡಾನ್[3] ಶಾಂತವಾಗಿ ಹರಿಯುತ್ತಿದೆ.
ಕಿಟಕಿಯ ಸರಳುಗಳ ಮಧ್ಯೆ, ಓರೆ ಕಿರೀಟದ
ಚಂದ್ರ ಮೆಲ್ಲನೆ ಇಣುಕುತ್ತಿದ್ದಾನೆ.
ಬೆಚ್ಚುತ್ತಾನೆ ಛಾಯೆಯಂತಾದವಳ ಕಂಡು.
ಪರಮ ಏಕಾಂಗಿ.
ಬೇನೆಯಲ್ಲಿ ಬೆಂದ ಕೃಶಾಂಗಿ.
ಮಗ ಸೆರೆಯಲ್ಲಿದ್ದಾನೆ, ಪತಿ ಪರದಲ್ಲಿದ್ದಾನೆ.
ಪ್ರಾರ್ಥಿಸಿ; ಇವಳಿಗಾಗಿ ಪ್ರಾರ್ಥಿಸಿ. (೨)

ನನದಲ್ಲ; ಇದು ಬೇರಾರದೋ ನೋವು.
ನನ್ನಿಂದ ಸಹಿಸಲಸಾಧ್ಯ. ನಡೆದಿದ್ದೆಲ್ಲವನ್ನೂ
ಕೊಂಡೊಯ್ದು ಹುಗಿದು ಬಿಡಿ.
ಕಪ್ಪನೆಯ ಬಟ್ಟೆಯಿಂದ ಮುಚ್ಚಿಬಿಡಿ
ಬೆಳಕ ಸೆಲೆಗಳ ತೆಗೆದುಬಿಡಿ.
ಇರುಳಿರಲಿ. (೩)

ನಗೆ ಮಲ್ಲಿಗೆ, ಕೆಳೆಯರ ಕಣ್ಮಣಿ,
ತ್ಸಾರ್ಕೋಯೆ ಸಿಲೋದ[2] ತುಂಟಿ,
ಬದುಕು ತನ್ನಾಟದ ಮುನ್ಸೂಚನೆಯನ್ನೊಮ್ಮೆ
ನಿನಗೆ ಕೊಡಬೇಕಿತ್ತು.
ನೀನು ಕಟ್ಟೊಂದನ್ನು ಹಿಡಿದು, ಸಾಲಿನಲ್ಲಿ
ಮುನ್ನೂರನೆಯವಳಾಗಿ, ಸೆರೆಗೋಡೆಯ ಮುಂದೆ
ಹೊಸವರ್ಷದ ಮಂಜನ್ನು ಕಣ್ಣೀರಿನಿಂದ ಕರಗಿಸುವಿಯೆಂದು.
ಮುಗಿಲೆತ್ತರದ ಮರಗಳೂ ಬಾಗುತ್ತಿವೆ, ಸದ್ದಿಲ್ಲದೆ.
ಮುಗ್ಧ ಜೀವಗಳು ಹೋಗುತ್ತಿವೆ, ಸದ್ದಿಲ್ಲದೆ.
(೧೯೩೮) (೪)

ಹದಿನೇಳು ತಿಂಗಳು ಹಂಬಲಿಸಿದ್ದೇನೆ

ಗೂಡಿಗೆ ಮರಳೆಂದು ಅರಚಿದ್ದೇನೆ
ಮಾರೆಗಾರನ ಕಾಲಿಗೆ ಬಿದ್ದು ಹೊರಳಿರುವೆ ಭೊರಿಟ್ಟಿದ್ದೇನೆ,
ನಿನಗಾಗಿ ನನ್ನ ಕರುಳಿನ ಕುಡಿಯೇ, ಒಡಲಿನ ಕಿಡಿಯೆ
ಎಲ್ಲವೂ ಶಾಶ್ವತವಾಗಿ ಕಲಸಿ ಹೋಗಿದೆ
ಮೃಗ ಮನುಷ್ಯರ ವ್ಯತ್ಯಾಸ ಅಳಿಸಿಹೋಗಿದೆ
ಮರಣದಂಡನೆಯ ಜಾರಿಗಿನ್ನೆಷ್ಟು ದಿನವೋ ತಿಳಿಯದಾಗಿದೆ
ಅಲ್ಲೀಗ ಧೂಳುಗಟ್ಟಿದ ಹೂಗಳು
ಧೂಪಾರತಿಯ[5] ಕಿಂಕಿಣಿ ಅಷ್ಟೆ ಇದೆ
ಗಮ್ಯವೇ ಇರದಂಥ ಕಾಲುದಾರಿಗಳಲ್ಲಿ
ನನ್ನ ಕಣ್ಣುಗಳನ್ನೇ ದಿಟ್ಟಿಸುತ್ತಾ
ಸರ್ವನಾಶದ ಮುನ್ಸೂಚನೆ ನೀಡುತ್ತಿದೆ
ಅಗಾಧ ಅಗ್ನಿ ನಕ್ಷತ್ರ
(೧೯೩೯) (೫)

ವಾರಗಳುರುಳುತ್ತಿವೆ ನಿರಾಯಾಸವಾಗಿ
ಏನಾಗಿರಬಹುದಲ್ಲಿ ತಿಳಿಯದಾಗಿದೆ.
ಮಗನೆ, ಸೆರೆಮನೆಯ ಗೋಡೆಗಳ ಮೇಲೆ
ಹೊಳೆ ಹೊಳೆವ ಬಿಳಿಇರುಳು[6] ಇಣುಕಿತೆ
ಹದ್ದುಗಣ್ಣಿನ ಬಿರುನೋಟ
ಮರಮರಳಿ ಚುಚ್ಚಿತೆ
ಶಿಲುಬೆಗೇರುವ[5] ಮಾತು
ಸಾವಕಾಶದ ಸಾವಿನದು ಹೆಚ್ಚಿತೆ
(೧೯೩೯, ವಸಂತ) (೬)
ತೀರ್ಪು
ಬಂಡೆಯಂತೆ ಎರಗಿತದು
ಇನ್ನೂ ಮಿಡಿಯುತ್ತಿದ್ದ ಎದೆಗೆ
ಬಿಡಿ, ತಯಾರಾಗಿದ್ದೇನೆ
ಮುಂದಿನದು ನೋಡಿಕೊಳ್ಳುತ್ತೇನೆ.

ಓಹ್ ಎಷ್ಟೆಲ್ಲಾ ಕೆಲಸವಿದೆ
ನೆನಪು-ನೋವುಗಳನ್ನು ಕೊಲ್ಲಬೇಕಿದೆ
ಈ ಆತ್ಮವನ್ನು ಕಲ್ಲಾಗಿಸಬೇಕಿದೆ
ಈ ದೇಹಕ್ಕೆ ಮರಳಿ ಬದುಕುವುದ ಕಲಿಸಬೇಕಿದೆ

ಹೀಗೂ ಉಂಟೆ, ನನ್ನ ಕಿಟಕಿಯಾಚಗಿದೆ
ಬೇಸಗೆಯ ಔತಣಕೂಟದ ಮರ್ಮರ
ನನಗಂದೇ ಇತ್ತು ಹೊಳೆ ಹೊಳೆವ ಬೆಳಗಿನಲ್ಲಿ
ಬರಡಾದ ಕುಟಿರದ ಮುನ್ಸೂಚನೆ
(೨೨ ಜೂನ್, ೧೯೩೯, ಬೇಸಗೆ, ಫಾಂಟನ್ನಾಯಿ ಡಾಮ್)[7] (೭)

ಮೃತ್ಯುವಿಗೆ
ನೀನೆಂದೋ ಬಂದೇ ಬರುವಿ - ಇಂದೇ ಬರಬಾರದೆ?
ಕಾದಿರುವೆ
ದೀಪವಾರಿಸಿ, ಬಾಗಿಲು ತೆರೆದಿರುವೆ
ನಿನಗಾಗಿ
ಬಂದುಬಿಡು ಯಾವುದಾದರೊಂದು ರೂಪದಲ್ಲಿ
ವಿಷಪೂರ್ಣ ಗಾಳಿಯಂತೆಯೋ,
ನುರಿತ ಕಳ್ಳನ ಚೂರಿಯಂತೆಯೋ,
ಟೈಫಸ್ ಜ್ವರದಂತೆ ಆವರಿಸಿಯೋ
ಅಥವಾ ಜಿಗಿದು ಬಾ ನೀನೇ ಹೆಣೆದ ಕಾಲ್ಪನಿಕ ಕಥೆಯಿಂದ
ಕೇಳೀ ಕೇಳೀ ಹುಚ್ಚು ಹಿಡಿದ ನೀಲೀ ಟೋಪಿ ಮತ್ತು
ಭಯಭೀತ ಕೆಲಸದಾಳಿನಂತೆ
ನನಗಾವ ವ್ಯತ್ಯಾಸವೂ ಆಗದು
ಯೆನಿಸ್ಸೆ[3] ಹರಿಯುತ್ತಾಳೆ, ಧೃವ ನಕ್ಷತ್ರ ಮಿನುಗುತ್ತದೆ
ಪ್ರೀತಿಯನುಂಡ ಆ ನೀಲಿ ಕಂಗಳ ಬೆಳಕನ್ನು
ಕತ್ತಲೆಂಬ ಅಂತಿಮ ಭಯ ಆವರಿಸಿದೆ.
(೧೯ ಆಗಸ್ಟ್, ೧೯೩೯, ಫಾಂಟನ್ನಾಯಿ ಡಾಮ್) *(೮)*

ಈಗಾಗಲೆ ಮರುಳು ತನ್ನ ರೆಕ್ಕೆ ಬಿಚ್ಚಿ
ನನ್ನಾತ್ಮದ ಅರ್ಧವನ್ನೇ ಆವರಿಸಿದೆ
ಮತ್ತೇರಿಸುವ ಸುರೆಯ ಕುಡಿಸಿ
ಮತ್ತೆ ಕತ್ತಲೆಯ ಕಣಿವೆಯತ್ತ ಎಳೆಯುತ್ತಿದೆ.

ಆಗಲೇ, ಆಗಂತುಕನ ಉದ್ರೇಕದ
ಮಾತುಗಳು ಕಿವಿಯಲ್ಲಿ ಅನುರಣಿಸಿದಾಗಲೇ
ತಿಳಿಯಿತು, ಗೆಲುವನ್ನು ಅದಕ್ಕೇ

ಒಪ್ಪಿಸಬೇಕೆಂದು.

ಅತ್ತೂ ಕರೆದು ಬೇಡಿಕೊಂಡರೂ
ಗೋಳಿಟ್ಟರೂ
ನನ್ನದೆಂದುಕೊಂಡ ಯಾವುದನ್ನೂ
ಅದು ಕೊಂಡೊಯ್ಯಕೊಡುವುದಿಲ್ಲ

ನನ್ನ ಮಗನ ಭೀತ ಕಣ್ಣುಗಳನ್ನಲ್ಲ
ಕಲ್ಲಿನಲ್ಲೇ ಕೆತ್ತಿದಂತಹ ಬವಣೆಗಳನ್ನಲ್ಲ
ಗುಡುಗು ಸಿಡಿಲಿನ ಕಾಳರಾತ್ರಿಗಳನ್ನಲ್ಲ
ಜೈಲಿನ ಭೇಟಿಯ ಸಮಯವನ್ನಲ್ಲ

ಅವನ ತಂಪಾದ ಕೈಗಳನ್ನಲ್ಲ
ನಿಂಬೆಯ ತರಿ ನೆರಳನ್ನಲ್ಲ
ದೂರದೂರಿನ ಮೆಲುಮಾತನಲ್ಲ
ಕಡೆಯ ಸಾಂತ್ವಾನವನ್ನಲ್ಲ
(೧೪ ಮೇ, ೧೯೪೦, ಫಾಂಟನ್ನಾಯಿ ಡಾಮ್) (೯)

ಶಿಲುಬೆಗೇರಿಸುವುದು
"ಅಳಬೇಡಮ್ಮ, ನನ್ನ ಸಮಾಧಿಯನ್ನು ನೋಡಿ" (೧೦)

ಯಕ್ಷ ಕಿನ್ನರರು ಹಾಡಿಹೊಗಳಿದ ಶುಭ ಗಳಿಗೆಯಲ್ಲೇ
ಆಕಾಶದಲ್ಲೊಂದು ಅಗ್ನಿದಿವ್ಯ
ತಂದೆಯನ್ನು ಕೇಳಿದ "ನನ್ನ ಕೈಬಿಟ್ಟೆ ಏಕೆ?"
ತಾಯಿಗೆ ಹೇಳಿದ "ನನಗಾಗಿ ದುಃಖಿಸದಿರು"
(೧೯೪೦ , ಫಾಂಟನ್ನೆಯಿ ಡಾಮ್) (೧೧)

ಚರಮ ಗೀತೆ ೨

ಮೇರಿ ಮ್ಯಾಗ್ದಲೀನಾಳು ಎದೆ ಬಡಿದುಕೊಂಡು ಅತ್ತಳು
ಅವನ ಪ್ರಿಯಶಿಷ್ಯ ಕಲ್ಲಾಗಿದ್ದ
ಏಕಾಂಗಿಯಾಗಿ ಮೌನವಾಗಿದ್ದ ಅವನ ತಾಯಿಯತ್ತ
ಯಾರೂ ನೋಡಲಿಲ್ಲ, ನೋಡುವ ಧೈರ್ಯ ಮಾಡಲಿಲ್ಲ

(೧೯೪೩, ತಾಷ್ಕೆಂಟ್[2])

ಹಿನ್ನುಡಿ

ತಿಳಿದಿದ್ದೇನೆ, ಕಳಾಹೀನವಾಗುವ ಮುಖಗಳ ಬಗ್ಗೆ
ಕಣ್ಣಂಚಿನಲ್ಲಿ ಕಾಣುವ ಭಯದ ಬಗ್ಗೆ,
ಕೆನ್ನೆಯ ಮೇಲೆ ಮೂಡುವ ಯಾತನೆಯ
ಶಾಶ್ವತ ಲಿಪಿಯ ಬಗ್ಗೆ
ಹಾರಾಡುವ ಕಪ್ಪು ಕೂದಲು
ಬೆಳ್ಳಗಾಗುವ ಬಗ್ಗೆ
ಶರಣಾಗತಿಯ ಕೃತಕ ನಗುವಿನ ಬಗ್ಗೆ
ಪೊಳ್ಳು ನಗುವಿನ ಹಿಂದೆ ಅಡಗಿರುವ ಸಾವಿನ ಅಂಜಿಕೆಯ ಬಗ್ಗೆ
ಅದಕೆಂದೇ ನನ್ನ ಪ್ರಾರ್ಥನೆ ನನಗಾಗಿ ಮಾತ್ರವಲ್ಲ
ಕಡು ಚಳಿಯಲ್ಲೂ, ಬಿರು ಬೇಸಗೆಯಲ್ಲೂ
ಕುರುಡು ಕೆಂಪು ಗೋಡೆಯಡಿಯಲ್ಲಿ[8]
ನನ್ನೊಂದಿಗೆ ಸರತಿಯಲ್ಲಿ ನಿಂತ ನಿಮಗಾಗಿಯೂ (೧)

ಬಂದಿದೆ ಸ್ಮರಣೆಯ ಘಳಿಗೆ
ನಾ ನಿನ್ನನ್ನು ಕಾಣಬಲ್ಲೆ, ಮುಟ್ಟಬಲ್ಲೆ, ಕೇಳಬಲ್ಲೆ.

ಕಾವಲಿನವನಿಂದ ಎಳೆಯಲ್ಪಟ್ಟವಳನ್ನೂ
ಕಾಲಡಿಯಲ್ಲಿ ಮರಳು ಸರಿಯುವುದ ತಿಳಿಯಲಾರದವಳನ್ನೂ

ಕತ್ತು ಕೊಂಕಿಸಿ ಬಿಂಕದಿಂದ
'ನಾ ಮನೆಗೆ ಬಂದಾಯಿತು' ಎಂದವಳನ್ನೂ

ಎಲ್ಲರನ್ನೂ ಹೆಸರಿಟ್ಟು ಕರೆಯುವ ಬಯಕೆ
ಏನು ಮಾಡಲಿ? ಹೆಸರಿನ ಪಟ್ಟಿ ಕಳೆದುಹೋಗಿದೆ.

ಅವರಿಗಾಗಿಯೇ ನೇದಿರುವೆ ಕಂಬಳಿಯೊಂದನ್ನು,
ಅವರಿಂದಲೇ ಕೇಳಿದ ಪದಗಳನ್ನು ಕೋದು

ಕಡೆಯ ಉಸುರಿನವರೆಗೂ ಪದಪದವೂ ಹಸಿರು
ಹೊಸ ದುರಾದೃಷ್ಟವೂ ಅಳಿಸಲಾಗದ ಛಾಪು

ಸಾವಿರ ಸಾವಿರ ಜನರ ಕೊರಳಾದ
ನನ್ನ ಜರ್ಝರಿತ ದನಿ ಎಂದಾದರೊಮ್ಮೆ ಮೌನವಾದರೆ

ಅವರು ನನಗಾಗಿ ಪ್ರಾರ್ಥಿಸಲಿ, ನಾನಿಂದು
ಸ್ಮರಣೆಯ ಘಳಿಗೆಯಲಿ ಪ್ರಾರ್ಥಿಸಿದಂತೆ. ಅವರಿಗಾಗಿ.

ಎಂದಾದರೊಮ್ಮೆ ನನ್ನವರಿಗೆ
ನನಗಾಗಿ ಸ್ಮಾರಕ ನಿಲಿಸಬೇಕೆನಿಸಿದರೆ

ನನ್ನ ಸಮ್ಮತಿಗೊಂದೇ ನಿಯಮ
ಅದು

ನಾ ಮೊತ್ತ ಮೊದಲು ಕಣ್ತೆರೆದ ಕಡಲ ದಂಡೆಯಲ್ಲಿರಬಾರದು -
ನಾನೆಂದೋ ಕಡಲ ಸಂಬಂಧವನ್ನು ಕಳಚಿಕೊಂಡಿದ್ದೇನೆ.

ತ್ಸಾರನ್[9] ತೋಟದ ಪವಿತ್ರ ಗಿಡದಡಿಯಲ್ಲೂ ಬೇಡ-
ಅಲ್ಲಿ ನನ್ನ ಬೆಚ್ಚಗಿನ ದೇಹದ ಮೇಲೆ ದುಃಖದ ನೆರಳಿರುತ್ತದೆ.

ಅದು ಇಲ್ಲಿರಲಿ, ನಾ ಮುನ್ನೂರು ಘಂಟೆಗಳು
ಅಲುಗಾಡದ ಸರಳುಗಳ ಮುಂದೆ ಸರತಿಯಲ್ಲಿ ನಿಂತಲ್ಲಿ

ಸಾವಿನ ಧನ್ಯತೆಯಲ್ಲೂ ನನಗೆ
ಕರಿಗಾಡಿಗಳ ಘರ್ಷಣೆಯ ಸದ್ದು ಮರೆಯಬಾರದು

ದ್ವೇಷದಿಂದ ಬಡಿದ ಬಾಗಿಲು, ಗಾಯಗೊಂಡ ಮೃಗದಂತೆ
ಅರಚಿದ ಮುದುಕಿ ಮರೆಯಬಾರದು

ಒಣಗಿದ, ಸ್ತಬ್ಧ ಕಣ್ರೆಪ್ಪೆಗಳಿಂದ
ಹಿಮ ಕರಗಿ ಕಣ್ಣೀರಾಗಿ ಹರಿಯಲಿ

ಜೈಲಿನ ಹಕ್ಕಿ ದೂರದಲ್ಲಿ ಮೆಲ್ಲನೆ ಹಾಡಲಿ
ನೇವಾಳಲ್ಲಿ ನೌಕೆಗಳು ಮೂಕವಾಗಿ ಸಾಗಲಿ (೨)

(ಮಾರ್ಚ್ ೧೯೪೦, ಫಾಂಟನ್ನಾಯಿ ಡಾಮ್)

ರಷ್ಯನ್ ಮೂಲ - ಆನ ಆಕ್ಮಟೋವ
ಕನ್ನಡಕ್ಕೆ - ಶ್ರೀಲಕ್ಷ್ಮಿ
ಇಂಗ್ಲೀಷ್ ಅನುವಾದ ಆಕರಗಳು - Yevgeny Bonver, stanley Kunitz & Max Hayward, Judith Hemschemeyer

1 . ನಿಕೊಲಾಯ್ ಯೆಷ್ಹಾವ್ – ರಷ್ಯದಲ್ಲಿ ಶುದ್ಧೀಕರಣ ಅಭಿಯಾನವೆಂದು ಲಕ್ಷಾಂತರ ಜನರನ್ನು ಜೈಲಿಗಟ್ಟಿ ಕೊಲ್ಲಿಸಿದವ.
2. ರಷ್ಯಾದ ಊರುಗಳು
3 .ರಷ್ಯಾದ ನದಿಗಳು
4. black maria – ಕ್ರಾಂತಿಕಾರಿಗಳು ಓಡಾಡಲು ಬಳಸುತ್ತಿದ್ದ ಗಾಡಿ-
5. ಕ್ರಿಶ್ಚಿಯನ್ನರ ಪ್ರಾರ್ಥನೆಯ ಉಲ್ಲೇಖಗಳು, 10ನೆಯ ಪದ್ಯ ಪೂರ್ಣವಾಗಿ ಕ್ರಿಸ್ತನನ್ನು ಶಿಲುಬೆಗೇರಿಸುವ ಸಂದರ್ಭವನ್ನು ಉಲ್ಲೇಖಿಸುತ್ತದೆ.
6. ವಿಶ್ವದ ಅನೇಕ ಸ್ಥಳಗಳಲ್ಲಿ ರಾತ್ರಿ ಇಡೀ ಉತ್ಸವಗಳು, ಸಂಭ್ರಮಾಚರಣೆ ನಡೆಯುತ್ತವೆ ಇದಕ್ಕೆ white night ಎನ್ನತ್ತಾರೆ.
7. ಆಕ್ಮಟೋವಾಳ ವಾಸಸ್ಥಾನ
8. ಜೈಲಿನ ಗೋಡೆಗಳು
9-ರಷ್ಯಾದ ರಾಜ

ಡಾ.ಲಕ್ಷ್ಮೀ ಶ್ರೀನಿವಾಸನ್

ಯೋಗ - ಸುಯೋಗ

ಯೋಗ - ಸುಯೋಗ … ಇದು ನಮ್ಮ ದೇಶದಲ್ಲಿ ಹುಟ್ಟಿದ್ದು ನಮ್ಮ ಸುಯೋಗ
ಇದ ಜಾರಿಪಡಿಸಲು ಸರ್ಕಾರ ರಚಿಸಬೇಕಿಲ್ಲ ಯಾವುದೇ ಆಯೋಗ
ಪಾತಂಜಲಿಯಿಂದ ಬಿ ಕೆ ಎಸ ಅಯ್ಯಂಗಾರರ ವರೆಗೆ ನಡೆದಿದೆ ಇದರ ಪ್ರಯೋಗ
ಯೋಗ ಚೆನ್ನಾಗಿ ಕಲಿತರೆ ಅದರಿಂದಾಗುವುದು ಹಲವಾರು ಉಪಯೋಗ

ಯೋಗವು ನಮಗೆ ನಮ್ಮ ಪ್ರಾಚೀನದಿಂದ ಸಿಕ್ಕ ಅಮೂಲ್ಯ ನಿಧಿ
ಇದನ್ನು ಮನಸ್ಸಿಟ್ಟು ಕಲಿತರೆ ಹತ್ತಿರ ಸುಳಿಯದು ಯಾವುದೇ ವ್ಯಾಧಿ
ಮಾನವನ ದೇಹ, ಮನಸ್ಸಿನ ಹಲವಾರು ರೋಗಗಳಿಗೆ ಇದು ದಿವ್ಯೌಷಧಿ
ಯೋಗವು ಬೇಡವೇ ಬೇಡವೆನ್ನುವುದು ನಿಜಕ್ಕೂ ಅವಿವೇಕದ ಪರಮಾವಧಿ

ಯೋಗದಲ್ಲಿಹುದು ಪದ್ಮಾಸನ ಶೀರ್ಷಾಸನ ಹಾಗೂ ಇನ್ನೂ ಬಗೆ ಬಗೆಯ ಆಸನ
ಸಾವಿರಾರು ವರ್ಷಗಳ ಇತಿಹಾಸವಿದ್ದರೂ ಇಂದಿಗೂ ಇದು ನಿತ್ಯ ನೂತನ
ಯೋಗವನ್ನು ನಿರಂತರ ಅಭ್ಯಸಿಸಿದರೆ ದೇಹದಲ್ಲಿ ಮೂಡುವುದು ನವಚೇತನ
ಶ್ರದ್ಧೆಯಿಂದ ಸ್ವಲ್ಪಕಾಲ ಮಾಡಿದರೂ ಸದಾ ಉಲ್ಲಾಸದಿಂದಿರುವುದು ಮನ

ಇಂಥ ಯೋಗವನ್ನು ಇಡೀ ವಿಶ್ವಕ್ಕೆ ಪಸರಿಸಿರುವ ಕಾರ್ಯ ನಿಜಕ್ಕೂ “ಸೈ”
ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ನಮ್ಮ ಯೋಗ ಪಟುಗಳು, ಶಿಕ್ಷಕರಿಗೆ
ಒಂದು ದೊಡ್ಡ “ಜೈ” …. ಇನ್ನೊಮ್ಮೆ … ಮತ್ತೊಮ್ಮೆ “ಜೈ” “ಜೈ”

ಮನೋಹಂಸ (ವೆಂಕಟೇಶ್ ಮನು)

ಪ್ರವಾಸದ ಕುದುರೆಯನೇರಿ

ನಮ್ಮ ಚಿಕ್ಕಂದಿನ ದಿನಗಳಲ್ಲಿ ನಮಗೆ ಗೊತ್ತಿದ್ದಿದ್ದು ಎರಡೇ ಊರು, ಒಂದು ನಮ್ಮೂರು ಶಿವಮೊಗ್ಗ, ಇನ್ನೊಂದು ತಾತನ ಮನೆಯಿದ್ದ ಚಿತ್ರದುರ್ಗ. ಬೇಸಗೆ ರಜೆ ಬಂತೆಂದರೆ ಬೇರೆ ಯಾವುದೇ ಆಯ್ಕೆಗಳಿಲ್ಲದೆ ನಮ್ಮ ಖಾಯಂ ಪ್ರವಾಸ ದುರ್ಗಕ್ಕೆ. ತಾತನ ಮನೆ, ಅದಕ್ಕೆ ಹೊಂದಿಕೊಂಡಂತೆಯೇ ಇದ್ದ ದೊಡ್ಡಮ್ಮನ ಮನೆ. ಅಲ್ಲಿಂದಲೇ ಕಾಣುತ್ತಿದ್ದ ಇನ್ನೊಬ್ಬ ದೊಡ್ಡಮ್ಮನ ಮನೆ ಒಂದೆರಡು ಫರ್ಲಾಂಗ್ ದೂರದಲ್ಲಿದ್ದ ವಾವೆಯಲ್ಲಿ ನಮಗೆ ಸೋದರಮಾವನಾಗಬೇಕಿದ್ದವರ ಮನೆ... ಹೀಗೆ ಒಂದು ಅರ್ಧ ಕಿಲೋಮೀಟರಿನ ಪರಿಧಿಯಲ್ಲಿ ದಿನವೂ ಎಲ್ಲರ ಮನೆಯನ್ನೂ ಸುತ್ತುತ್ತ, ತಾತನ ಮನೆಯನ್ನು ನಮ್ಮ ಖಾಯಂ ಬಿಡಾರವಾಗಿ ಮಾಡಿಕೊಂಡು ತಿಂದುಂಡು ಆಡಿ ಹಾಯಾಗಿ ಮಲಗಿ ಯಾವುದೇ ತಲ್ಲಣಗಳಿಲ್ಲದ ಸುಖವಾದ ದಿನಗಳವು. ತಾತನ ಮನೆಯಲ್ಲಿದ್ದ ನಮ್ಮ ವಾರಿಗೆಯ ಚಿಕ್ಕಮ್ಮಂದಿರು, ಸೋದರಮಾವನೊಂದಿಗೆ ನಮ್ಮಂತೆಯೇ ಬರುತ್ತಿದ್ದ ದೊಡ್ಡಮ್ಮ, ಚಿಕ್ಕಮ್ಮಂದಿರ, ಮಾವನ ಮಕ್ಕಳು ಎಲ್ಲರೂ ಸೇರಿಕೊಂಡು ನಮ್ಮದೇ ಪ್ರಪಂಚವನ್ನು ನಿರ್ಮಿಸಿಕೊಂಡು ಆಟ, ಊಟ, ಓಟ ಎಲ್ಲಕ್ಕೂ ಜೊತೆಯಾಗಿ ಕಾಲಕಳೆಯುತ್ತಿದ್ದೆವು. ವಾಪಸ್ಸು ಹೋಗುವ ದಿನ ಹತ್ತಿರ ಬರುತ್ತಿದ್ದ ಹಾಗೆಯೇ, ಮುಂದಿನ ಬೇಸಿಗೆ ರಜೆ ಯಾವಾಗ ಬರುತ್ತದೆಂದು ಲೆಕ್ಕಹಾಕಿಕೊಂಡು ಅದಕ್ಕೂ ಕೆಲವು ರೂಪುರೇಷೆಗಳನ್ನು ತಯಾರಿ ಮಾಡಿಕೊಂಡೇ ಅಲ್ಲಿಂದ ಹೊರಡುತ್ತಿದ್ದೆವು.

ಆ ವಿಷಯ ಈಗ ಪಕ್ಕಕ್ಕಿಟ್ಟು ಮುಖ್ಯವಾದ ವಿಷಯಕ್ಕೆ ಬರೋಣ. ಹೀಗೆಲ್ಲಾ ನಾವು ಆನಂದವಾಗಿ ಕಾಲ ಕಳೆಯುತ್ತಿದ್ದ ಚೈತ್ರ, ವೈಶಾಖದ ಆ ಬಿರುಬೇಸಿಗೆಯ ದಿನಗಳಲ್ಲಿ ರಾತ್ರಿ ಊಟವಾದ ಮೇಲೆ ಸೆಕೆ ತಡೆಯಲಾಗದೆ, ಆ ಸೆಕೆಗೆ ನಿದ್ರೆ ಬಾರದೆ ಮನೆಯ ಎಲ್ಲಾ ಲೈಟುಗಳನ್ನೂ ಆರಿಸಿ ಮನೆ ಮುಂದುಗಡೆಯ ಜಗಲಿಯ ಮೇಲೆ ಇಡೀ ಕುಟುಂಬದ ಸದಸ್ಯರೆಲ್ಲಾ ಸೇರಿ ಪಟ್ಟಾಂಗ ಹೊಡೆಯುತ್ತಿದ್ದದ್ದು ಸಾಮಾನ್ಯವಾಗಿರುತ್ತಿತ್ತು. ಅಲ್ಲಿ ಒಂದು ಬೆತ್ತದ ಕುರ್ಚಿಯ ಮೇಲೆ ನಮ್ಮ ತಾತ ಅಧ್ಯಕ್ಷ ಸ್ಥಾನದಲ್ಲಿ ಆಸೀನರಾಗಿ ಗೋಷ್ಠಿಯ ಅಧ್ಯಕ್ಷತೆ ವಹಿಸಿಕೊಂಡಿರುವವರಂತೆ ಕುಳಿತಿರುತ್ತಿದ್ದರು. ಅವರ ಪಕ್ಕದಲ್ಲಿ ಕಟ್ಟೆಯ ಮೇಲೆ ನಮ್ಮ ಕಮಲು ದೊಡ್ಡಮ್ಮ (ತಾತನ ಮನೆಗೆ ಹೊಂದಿಕೊಂಡಂತೆ ಇದ್ದವರು) ಉಪಾಧ್ಯಕ್ಷ ಸ್ಥಾನದಲ್ಲಿ ಸ್ಥಾಪಿತರಾಗಿರುತ್ತಿದ್ದರು. ನಮ್ಮಜ್ಜಿ, ನಮ್ಮಮ್ಮ, ಚಿಕ್ಕಮ್ಮ, ಅಪರೂಪಕ್ಕೆ ಬರುತ್ತಿದ್ದ ನಾಗು ದೊಡ್ಡಮ್ಮ, ಕಮಿಟಿಯ ಇತರ ಸದಸ್ಯರು. ಉಳಿದ ಚಿಕ್ಕವರಾದ ನಾವೆಲ್ಲರೂ ಪ್ರೇಕ್ಷಕ ವರ್ಗದಲ್ಲಿ ಕುಳಿತಿರುತ್ತಿದ್ದೆವು.

ಯಾವುದೋ ಹಳೆಯ ವಿಷಯವೊಂದನ್ನು ನೆನಪಿಸಿಕೊಂಡು ತಾತ ಮಾತು ಆರಂಭಿಸುತ್ತಿದ್ದರು. ಅದಕ್ಕೆ ಅನುಮೋದನೆ ನಮ್ಮ ದೊಡ್ಡಮ್ಮನಿಂದ. ಕಮಿಟಿಯ ಮಿಕ್ಕ ಸದಸ್ಯರು ಆ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ತಮ್ಮ ವಿಚಾರಗಳನ್ನೂ, ಅನುಭವಗಳನ್ನೂ ಹಂಚಿಕೊಂಡು ಯಾವುದೋ

ಒಂದು ಕಾಲದ ಲೋಕದಲ್ಲಿ ಒಂದಷ್ಟು ಕಾಲ ಅಡ್ಡಾಡಿ ಬರುತ್ತಿದ್ದರು. ಅದೆಷ್ಟೋ ಸ್ವಾರಸ್ಯಕರ ವಿವರಗಳು ಆ ಗೋಷ್ಠಿಯಲ್ಲಿ ಬಂದು ನಾವೆಲ್ಲರೂ ಕಣ್ಣು ಬಾಯಿ ಬಿಟ್ಟುಕೊಂಡು ಮಾತಾಡುತ್ತಿದ್ದ ಎಲ್ಲರ ಕಲ್ಪನೆಯ ಹಿಂದೆಯೂ ಸಾಗಿ, ನಮ್ಮ, ನಮ್ಮದೇ ದೃಶ್ಯಗಳನ್ನು ಕಲ್ಪಿಸಿಕೊಂಡು ಒಂದಷ್ಟು ಕಾಲ ಪಯಣಿಸಿ ಬರುತ್ತಿದ್ದೆವು. ಇಂತಹ ಗೋಷ್ಠಿಗಳಲ್ಲಿ ಹಿಂದೆ ನಡೆದ ಯಾವಯಾವುದೋ ಹಾಸ್ಯ ಪ್ರಸಂಗಗಳು, ಮರೆಯಲಾಗದ ಕೆಲವು ಸಾಹಸಗಳು, ಮನೆಯ ಇತಿಹಾಸಕ್ಕೆ ಸಂಬಂಧಪಟ್ಟಂತ ವಿಷಯಗಳು ಹೀಗೆ ಸಕಲವೂ ಸೇರಿರುತ್ತಿದ್ದವು. ಅವೆಲ್ಲವೂ ನಮ್ಮ ಪರಿಧಿಯಲ್ಲೇ ಎಂದೋ ನಡೆದಂತ ವಿಷಯಗಳಾದ್ದರಿಂದ ನಮಗೆಲ್ಲರಿಗೂ ಬಹಳ ಆಸಕ್ತಿದಾಯಕವಾಗಿಯೂ, ಕುತೂಹಲಕರವಾಗಿಯೂ ತೋರುತ್ತಿದ್ದುದು ಅಚ್ಚರಿಯೇನಲ್ಲ.

ನಮ್ಮ ತಾತನಿಗೆ ಹಲವು ಸದಭಿರುಚಿಯ ಆಸಕ್ತಿಗಳು. ತೀರ್ಥಯಾತ್ರೆಗಳ, ಪ್ರವಾಸಗಳ ಕುರಿತಾಗಿಯೂ ಅವರಿಗೆ ತುಂಬಾ ಕುತೂಹಲವಿತ್ತು. ಹೀಗೆಯೇ ಯಾವುದೋ ಒಂದು ರಾತ್ರಿ ಶುರು ಮಾಡುತ್ತಿದ್ದರು “ಮೊನ್ನೆ ವೆಂಕಟರಾಮು ಸಿಕ್ಕಿದ್ದ…. ತಿರುಪತಿಗೆ ಸಂಸಾರ ಸಮೇತ ಕಾರು ಮಾಡ್ಕೊಂಡು ಹೋಗಿದ್ರಂತೆ. ಮೂರು ದಿನ ಅಲ್ಲೇ ಇದ್ದು ಬರುವಾಗ ಅಲಮೇಲು ಮಂಗಾಪುರ, ಗೋವಿಂದರಾಜ ಪಟ್ಣ ಎಲ್ಲಾ ನೋಡ್ಕೊಂಡು ಬಂದ್ರಂತೆ” ವಾಕ್ಯ ಮುಗಿದ ತಕ್ಷಣವೇ ನಮ್ಮ ದೊಡ್ಡಮ್ಮ “ಅಲ್ಲಾ, ಅಷ್ಟು ಹತ್ತಿರ ಹೋದವರು ಕಂಚಿ, ಕಾಳಹಸ್ತಿಗೆ ಹೋಗ್ಲಿಲ್ವಂತಾ?” ಪ್ರಶ್ನೆ ಎಸೆಯುತ್ತಿದ್ದರು. ಹಿಂದೆಯೇ “ಅರೇ ಅಲ್ಲಿಂದ ತಿರುತ್ತಣೀನೂ ತುಂಬಾ ಹತ್ರ. ಸುಬ್ರಹ್ಮಣ್ಯೇಶ್ವರನ ದೇವಸ್ಥಾನ. ತುಂಬಾ ಚೆನ್ನಾಗಿದೆ. ನಮ್ಮ ನಾಗ್ರಾಜ ಹೋಗಿದ್ದಾಗ ರಾತ್ರಿಯೇ ಅಲ್ಲಿಗೆ ಸೇರ್ಕೊಂಡು ಬೆಳಗಿನ ಝಾವದ ಪೂಜೆಗೆ ಹೋಗಿದ್ನಂತೆ. ಪೊಂಗಲ್ ಪ್ರಸಾದವಂತೆ ರಾಮಣ್ಣ (ನಮ್ಮ ತಾತನ ಮಕ್ಕಳೆಲ್ಲರೂ ತಂದೆಯನ್ನು ಹೆಸರು ಹಿಡಿದೇ ಕರೆಯುತ್ತಿದ್ದುದು) ಕೈಯಿಂದ ತುಪ್ಪ ಸೋರ್ತಿತ್ತಂತೆ” ನಮ್ಮಮ್ಮನ ಉವಾಚ. ಆ ಮಾತನ್ನು ಕೇಳುತ್ತಿದ್ದ ಹಾಗೆಯೇ, ತಟ್ಟೆಗೆ ಒಂದು ಚಮಚ ತುಪ್ಪ ಹಾಕುವುದಾದರೇ(?) ಅಳೆದಂತೆ ‘ಎಲ್ಲಿ ಒಂದು ಬೊಟ್ಟು ಹೆಚ್ಚು ಬಿತ್ತೋ’ ಎಂದು ನೋಡಿ ಹಾಕುತ್ತಿದ್ದದ್ದನ್ನು ಕಂಡಿದ್ದೆವು ನಾವು. ಅಂತಹುದರಲ್ಲಿ ಕೈಯಿಂದ ತುಪ್ಪ ಸೋರುತ್ತಿರುವುದನ್ನು ಕಲ್ಪಿಸಿಕೊಂಡು ಹಾಗೇನಾದರೂ ಅದು ಸೋರುತ್ತಿದ್ದರೆ ಇನ್ನೊಂದು ಕೈಯನ್ನು ತುಪ್ಪ ಕೆಳಗೆ ಬೀಳದಂತೆ ಹಿಡಿದುಕೊಂಡು ಆಮೇಲೆ ನೆಕ್ಕಿಬಿಡಬೇಕು. ನೆಲದ ಮೇಲೆ ಬೀಳಕ್ಕೆ ಬಿಡಬಾರದು ಎನ್ನುವವರೆಗೆ ಕಲ್ಪನೆಯ ಕುದುರೆ ಹತ್ತಿ ಹೋಗಿರುತ್ತಿದ್ದೆ.

ಈಗ ತಾತ ಮತ್ತೆ ನಮ್ಮೆಲ್ಲರನ್ನೂ ತಿರುಪತಿಗೆ ವಾಪಸ್ಸು ಕರೆದುಕೊಂಡು ಹೋಗುತ್ತಿದ್ದರು. “ಅವ್ನು ಹೋಗಿದ್ದ ದಿನ ಏನೋ ವಿಶೇಷವಂತೆ. ಸ್ವಾಮಿಗೆ ಅಲಂಕಾರ ಎಷ್ಟು ಚೆನ್ನಾಗಿ ಮಾಡಿದ್ರೂಂದ್ರೆ ಸಾಕ್ಷಾತ್ ವೈಕುಂಟಾನೇ ನೋಡ್ಕೊಂಡು ಬಂದ ಹಾಗಾಯ್ತು” ಅಂತಿದ್ದ. “ಸಾಕ್ಷಾತ್ ವೈಕುಂಟ ಅಂದ್ರೆ ಹೇಗಿರತ್ತೆ?! ಪಿಕ್ಚರ್‌ನಲ್ಲಿ ತೋರಿಸ್ತಾರಲ್ಲ… ಒಂದಾದ ಮೇಲೆ ಒಂದು ಏಳು ಬಾಗಿಲು ತನ್ನಿಂತಾನೇ ತೆರೆದುಕೊಂಡು… ಅಲ್ಲಿ ಹಾವಿನ ಹಾಸಿಗೆಯ ಮೇಲೆ ಭಯವಿಲ್ಲದೇ ಆರಾಮಾಗಿ ಮಲಗಿರುವ ಶ್ರೀಮನ್ನಾರಾಯಣ. ಅವನ ಕಾಲೊತ್ತುತ್ತ ಕೂತಿರೋ ಲಕ್ಷ್ಮಿ… ಅದ್ಸರಿ, ಏನೋ ಮೈಲಿಗಟ್ಟಲೆ ನಡ್ಕೊಂಡು ಓಡಾಡಿದ್ರೆ ಕಾಲು ನೋವಾಗತ್ತೆ, ಆಗ ಕಾಲೊತ್ತುಸ್ಕೊಳೋದು ಸರಿ;

ಸದಾ ಮಲಗಿರೋನ್ಗೆ ಕಾಲು ಹೇಗೆ ನೋಯತ್ತೆ? ಇನ್ನೂ ಕೂತ್ಕೊಂಡು ಒತ್ತೀ ಒತ್ತೀ ಲಕ್ಷ್ಮಿಯ ಬೆನ್ನು, ಸೊಂಟ, ಕೈ ನೋವು ಬಂದಿರಬೇಕಲ್ವೇ…. ಅಂತ ನನ್ನ ಯೋಚನೆ ಸಾಗುತ್ತಾ ಮುಂದಿನ ಡೈಲಾಗ್‌ಗಳು ಮಿಸ್ ಆಗಿ ಅಷ್ಟರಲ್ಲಾಗಲೇ ದೊಡ್ಡಮ್ಮ ಕಂಚಿ ರೇಷ್ಮೆ ಸೀರೆಗೆ ಬಂದಿರುತ್ತಿದ್ದರು. "ರಾಮಣ್ಣಾ ಕಂಚೀಲಿ ರೇಷ್ಮೆ ಸೀರೆಗ್ಳು ತುಂಬಾ ಚೆನ್ನಾಗಿರುತ್ವಂತೆ, ತುಂಬಾ ಅಗ್ಗಾನೂ ಅಂತೆ. ನಾವು ಹೋಗೋದಾದ್ರೆ ಒಂದಷ್ಟು ಸರ್ಯಾಗಿ ದುಡ್ಡು ತೊಗೊಂಡು ಹೋದ್ರೆ ರೇಷ್ಮೆ ಸೀರೆ ಕೊಂಡ್ಕೊಂಡು ಬರ್ಬೇಕು ನೋಡು". "ಅಯ್ಯೋ ರೇಷ್ಮೆ ಸೀರೆ ಎಲ್ಲಾ ನೀನು ದುಡೀತೀಯಾ ತೊಗೋಬೋದು, ನಾವು ಕಾಟನ್ ಸೀರೆ ತೊಗೊಂಡ್ರೆ ಸಾಕಾಗಿದೆ" ಚಿಕ್ಕಮ್ಮನ ಉವಾಚ. "ಊರು ನೋಡ್ಕೊಂಡು ಬರೋದು ಮುಖ್ಯ, ಕೊಂಡ್ಕೊಳೋ ವಿಷ್ಯ ಆಮೇಲಿರ್ಲಿ. ನಾನೇನೋ ಹೋದ್ರೆ ತಿರುತ್ತಣಿ ನೋಡ್ದೆ ಬರಲ್ಲ ಅಂದ್ಕೊಂಡ್ಬಿಟ್ಟಿದೀನಿ" ನಮ್ಮಮ್ಮ ಮತ್ತೆ ಪೊಂಗಲ್‌ಗೇ ಬಂದು ನಿಲ್ಲುತ್ತಿದ್ದರು.

ಈಗ ಮುಂದಿನ ಹಂತದ ಪ್ಲಾನಿಂಗ್… ತಾತ ಅನ್ನುತ್ತಿದ್ದರು "ಒಬ್ಬಿಬ್ರು ಹೋದ್ರೆ ಚೆನ್ನಾಗಿರಲ್ಲ; ಯಾತ್ರೆಗಳಿಗೆ ಹೋದ್ರೆ ನೋಡು, ಗುಂಪಲ್ಲೇ ಹೋಗ್ಬೇಕು. ಅದೇ ಚೆನ್ನ". "ಹೌದು ಮತ್ತೆ" ನಮ್ಮ ದೊಡ್ಡಮ್ಮ ಮುಂದುವರೆಸುತ್ತಿದ್ದರು "ನಮ್ಮನೇ ಇಷ್ಟು ಜನವೂ ಹೋಗ್ಬೇಕೂಂದ್ರೆ ಬಸ್ಸಲ್ಲಾಗಲ್ಲ ಬಿಡು (ಮಾತಿನಲ್ಲಿ ಬಿಡುತ್ತಿದ್ದ ರೈಲ್ ಬಿಟ್ಟರೆ ಚಿತ್ರದುರ್ಗದಲ್ಲಿ ರೈಲ್ವೇ ಸ್ಟೇಶನ್ ಇರಲಿಲ್ಲ) ಒಂದು ಮೆಟಡರ್ಾ ಆದ್ರೂ ಮಾಡ್ಬೇಕು. ಒಂದು ಇಪ್ಪತ್ತು ಇಪ್ಪತ್ತೈದು ಜನ ಹೋಗೋ ಹಾಗೆ". "ಅಯ್ಯೋ ಮೆಟಡರ್ಾನಲ್ಲಾದ್ರೆ ಅಬ್ಬಬ್ಬಾ ಅಂದ್ರೆ ಒಂದು ಹದ್ನೈದು ಜನ ಹೋಗ್ಬೋದಷ್ಟೆ; ನಾವು ದೊಡ್ಡವ್ರೇ ಅಷ್ಟು ಜನ ಆಗ್ತೀವಿ, ಮಕ್ಳನ್ನು ಏನು ಮಾಡ್ಬೇಕು" ನಮ್ಮಮ್ಮನ ಅಳಲು. "ಹೌದಲ್ಲಾ ದೊಡ್ಡವ್ರೆಲ್ಲಾ ಟೂರ್ ಹೋದ್ರೆ ನಾವೇನು ಮನೇಲಿರ್ಬೇಕಾ. ನಾವೂ ಆ ವೈಕುಂಟಾನ ನೋಡ್ಬೇಡ್ವಾ, ರೇಶ್ಮೆ ಸೀರೆ ಬೇಡ ಸರಿ, ತುಪ್ಪಾ ಸೋರೋ ಪೊಂಗಲ್ ಆದ್ರೂ ತಿನ್ಬೇಡ್ವಾ" ನನ್ನ ಯೋಚನೆ ನಂಗೆ. "ಮಕ್ಳುನ್ನ ತೊಡೆಮೇಲೆ ಕೂರಿಸ್ಕೊಂಡ್ರೆ ಆಯ್ತು. ಏನ್ಮಹಾ" ನಮ್ಮ ದೊಡ್ಡಮ್ಮನ ಸಲಹೆ. ಈಗ ಚಿಕ್ಕಮ್ಮನ ಸರದಿ "ಅಲ್ಲ ಕಮ್ಲೂ, ತಿರುಪ್ತಿ ಏನು ಚಳ್ಳಕೆರೇನಾ, ತೊಡೆ ಮೇಲೆ ಕೂರಿಸ್ಕೊಂಡು ಹೋಗಕ್ಕೆ. ಇಲ್ಲಿಂದ ಕನಿಷ್ಟ ಪಕ್ಷ ಹತ್ತು ಗಂಟೆ ಪ್ರಯಾಣ, ಸುಮ್ನೇ ಆಯ್ತಾ ಮೂರ್ಮೂರು ಮಕ್ಳು ಬೇರೆ" ತಾತ ಮತ್ತೆ ಎಂಟ್ರಿ ಕೊಡುತ್ತಿದ್ದರು "ಅಯ್ಯೋ, ಅಷ್ಟಷ್ಟು ದೂರ ಕೂರುಸ್ಕೊಂಡು ಹೋಗೋಕ್ಕಾಗಲ್ಲಾ ಬಿಡಮ್ಮಾ. ನಾವು ಯಾವ್ದಾದ್ರೂ ಮಿನಿ ಬಸ್ಸೇ ಮಾಡ್ಕೊಂಡು ಹೋಗ್ಬೇಕು ಅಷ್ಟೇ". "ಅದ್ಸರಿ" ನಮ್ಮಮ್ಮನ ಸಮಾಧಾನ ಜೊತೆಗೆ ನನಗೂ 'ನಮ್ಮನ್ನ ಬಿಟ್ಟು ಹೋಗಲ್ವಲ್ಲಾ…' "ಹೋಗ್ಬೇಕಾದ್ರೆ ನೋಡು… ಮಕ್ಳು ಮರಿ ಇರ್ತಾರೆ, ಕೈಗಾವಲ್ಗೆ ಅಂತ ಒಂದಷ್ಟು ಕೋಡ್ಬಳೆ, ಚಕ್ಲಿ, ನಿಪ್ಪಟ್ಟು, ಹುರಿಟ್ಟು…. ಇಂತವನ್ನೆಲ್ಲಾ ತೊಗೊಂಡು ಹೋಗ್ಬೇಕು. ಹೋದ ಜಾಗ್ದಲ್ಲಿ ಮಕ್ಳಿಗೆ ಹಸ್ವು ಜಾಸ್ತಿ" ತಾತನ ಅನುಭವದ ನುಡಿ. "ಹೌದೌದು" ಇದಕ್ಕೆ ಎಲ್ಲರದೂ ಸಮ್ಮತಿ. ಉಳ್ಕೊಳಕ್ಕೆ ಛತ್ರಗಳು ಸಿಗ್ತವೆ… ಪ್ಲಾನಿಂಗ್ ಇನ್ನೂ ಮುಂದಿನ ಹಂತಕ್ಕೆ ಹೋಗುತ್ತಿತ್ತು…… ಆಯಾ ಊರುಗಳಲ್ಲಿ ಏನೇನನ್ನು ನೋಡಬೇಕೆನ್ನುವವರೆಗೆ……

ಅಷ್ಟರಲ್ಲಿ ತೀರ ಚಿಕ್ಕ ಮಕ್ಕಳು ಅಲ್ಲೇ ಕಟ್ಟೆಯ ಮೇಲೂ, ಅಮ್ಮಂದಿರ ತೊಡೆಯ ಮೇಲೋ ತಾಚಿ ಮಾಡಿರುತ್ತಿದ್ದವು. ಇನ್ನೊಂದು ಸ್ವಲ್ಪ ದೊಡ್ಡವು ನಿದ್ದೆಗೆ ಜಾರುವ ಹಂತದಲ್ಲಿದ್ದು "ಮಲಗ್ಸು ಬಾ…."

ಎಂದು ರಾಗ ತೆಗೆಯುತ್ತಿದ್ದವು. ಅದೆಷ್ಟೋ ಬಾರಿ ಈ ರೀತಿಯ ಪ್ರವಾಸ ಮುಗಿಸಿಬಂದಿದ್ದ ಅಜ್ಜಿ "ಏಳ್ರೆ ಮೇಲೆ, ನಿದ್ದೆ ಮಾಡಿದ್ಮೇಲೆ ಮಕ್ಳನ್ನ ಎತ್ತಿ ಮಲಗ್ಸೋದು ಕಷ್ಟ, ಚಾಪೆ, ಜಮಖಾನ ಎಲ್ಲಾ ಹಾಸ್ಕೋವ್ರಂತೆ ನಡೀರಿ. ನಾಳೆ ಮತ್ತೆ ಇನ್ನೊಂದು ಟ್ರಿಪ್‌ಗೆ ಹೋದ್ರಾಯ್ತು" ಎಂದು ತಾವೂ ಎದ್ದು ಮಿಕ್ಕವರನ್ನೂ ಈ ಲೋಕಕ್ಕೆ ಕರೆದುಕೊಂಡು ಬರುತ್ತಿದ್ದರು. "ಸರಿ ಏಳ್ರಿ ಈಗ ಇನ್ನೊಂದಿನ ನೋಡೋಣ" ತಾತನೂ ಏಳುತ್ತಿದ್ದರು. "ಅಷ್ಟೇ ಈಗ ಹೋಗಕ್ಕೆ ದುಡ್ಡು ಯಾರತ್ರಿದೆ? ಮಾತಾಡಕ್ಕೆ ದುಡ್ಡು ಖರ್ಚಾ, ಕಾಸು ಖರ್ಚಾ, ನೋಡಿದ್ರಾಯ್ತು. ರಾತ್ರಿ ಸರಿಹೊತ್ತಾಯ್ತು ಈಗ ಮಲ್ಗೋಣ" ಎಂದು ದೊಡ್ಡಮ್ಮ ವಂದನಾರ್ಪಣೆ ಮಾಡಿದ ಮೇಲೆ ಸಭೆ ಬರ್ಕಾಸ್ತಾಗಿ ಮಲಗಿದ್ದ ಮಕ್ಕಳನ್ನು ಎತ್ತಿಕೊಂಡು, ಮಲಗಲಿರುವ ಮಕ್ಕಳನ್ನು ಹೇಗೋ ಕಷ್ಟಪಟ್ಟು ನಡೆಸಿಕೊಂಡು ಒಳಗೆ ಹೋಗುತ್ತಿದ್ದರು.

ಮಾರನೆಯ ದಿನ ಹೀಗೇ ರಾಮೇಶ್ವರ, ಕನ್ಯಾಕುಮಾರಿಯೋ ಇಲ್ಲಾ ಮಧುರೆ, ಪಳನಿಯೋ ಶುರುವಾಗುತ್ತಿತ್ತು…

ಟಿ. ಎಸ್. ಶ್ರವಣ ಕುಮಾರಿ

ಕಥೆ .. ಮಮತೆ

ಮಗು ಹೇಗಿದ್ದಾನೆ ಅಪ್ಪಾ?,

ಇತ್ತ ಗದ್ಗತ ಕಂಠದಿಂದ ಕಮಲ ತನ್ನ ತಂದೆ ಶ್ಯಾಮರಾವ್ ಅವರಿಗೆ ಫೋನ್ ಮಾಡಿ ವಿಚಾರಿಸಿದಳು. ಇದು ಎರಡು ತಿಂಗಳ ಪ್ರತಿದಿನದ ದಿನಚರಿ.
ಕರೋನ ಆವರಿಸಿ ಮಗನನ್ನು ನೋಡದೆ ತಿಂಗಳುಗಳು ಕಳೆದ ತಾಯಿಯ ಮಮತೆಯ ಕಣ್ಣೀರಿನ ಕಥೆ ವ್ಯಥೆ..

ಸ್ಕೂಲ್ ಮುಗೀತು ಅಮ್ಮ ಇವತ್ತು.
ತಾತ ಅಜ್ಜಿ ಮನೆಗೆ ಹೋಗಲಾ ಅಮ್ಮ.?
ಪ್ರತಿಸಲ ರಜೆ ಬಂದಾಗ ಅಜ್ಜಿ ಮನೆಗೆ ರೋಹಿತ್ ಹೋಗುವುದು ಅಭ್ಯಾಸ ವಾಗಿತ್ತು.

ಅಮ್ಮನ ಜೊತೆ ಹೋಗಿ ರಜೆ ಮುಗಿಯುವವರೆಗೆ ಇರುತ್ತಿದ್ದ.

ಆದರೇ ಈ ಸಲ ಅವನನ್ನು ಒಬ್ಬನೇ ಏರೋಪ್ಲೇನ್ ನಲ್ಲಿ ಕಳುಹಿಸಿ ಒಂದು ತಿಂಗಳು ಇದ್ದು ಬಾ ಎಂದರು.

ತಾತ ಅಜ್ಜಿ ಜೊತೆ ಮುಂಬೈ ನಲ್ಲಿರುವ, ಬೀಚ್, ಗೇಟ್ ವೇ, ಹ್ಯಾಂಗಿಂಗ್ ಗಾರ್ಡನ್, ಕ್ರಿಕೆಟ್ ಮೈದಾನ, ಎಲ್ಲಾ ನೋಡಿ ಕೊಂಡು ಬಾ..

ಆದರೆ ಅಲ್ಲಿಗೆ ಮೊಮ್ಮಗ ಬಂದ ಕೆಲವು ದಿನಗಳಲ್ಲಿ , ದೇಶದೆಲ್ಲೆಡೆ ಕರೋನ ಭೀತಿ ಎದುರಾಯಿತು.
ಎಲ್ಲರೂ ಮನೆ ಒಳಗೆ ಇರಬೇಕು. ಓಡಾಡುವ ಹಾಗಿಲ್ಲ.

ಇಲ್ಲಿ ತಾಯಿ ಕಮಲ ಮತ್ತು ತಂದೆ ಶ್ರೀನಿವಾಸ ಮಗನನ್ನು ನೋಡದೆ ತಿಂಗಳುಗಳು ಕಳೆಯಿತು.

ಇಬ್ಬರಿಗೂ ಬೇಜಾರು, ಮಗನ ಜೊತೆ ದಿನವೂ ಮಾತಾಡಿದರೂ, ಅವನಿಲ್ಲದೆ ತಾಯಿ ತುಂಬಾ ವ್ಯಥೆ ಪಡುತ್ತಿದ್ದಳು. ಕೆಲವು ದಿನಗಳಿಂದ ಹುಷಾರಿಲ್ಲ. ಮನೋವ್ಯಥೆ.

ಮಾತಿಲ್ಲ ಮೌನದ ಪರದೆಯೊಳಗೆ ಭೂತಗಳ ಓಡಾಟ. ಉಳಿದದ್ದು ಒಂಟಿತನ, ಕೈಯಲ್ಲೊಂದು ಮೊಬೈಲ್ ಮಗನ ಯೋಗಕ್ಷೇಮ ವಿಚಾರಿಸಲು.

"ಅಯ್ಯೋ ಯಾಕಾದ್ರೂ ಕಳುಹಿಸಿದೆನೋ.ಅಲ್ಲಿ ತುಂಬಾ ಕರೋನ ಹಬ್ಬಿದೆ. "

ಕಮಲ ಗಂಡನಿಗೆ ದಿನವೂ ಹೇಳುತ್ತಿರುತ್ತಾಳೆ.

ನೋಡಿ ಅಪ್ಪ ಅಮ್ಮನಿಗೆ ಅವರನ್ನೇ ನೋಡಿಕೊಳ್ಳೋದು ಕಷ್ಟ.   ನಮ್ಮ ಅಣ್ಣ ಅತ್ತಿಗೆ ಅಲ್ಲೇ ಬೇರೆ ಜಿಲ್ಲೆಯಲ್ಲಿ ಯಲ್ಲಿದ್ದಾರೆ.ಅಪ್ಪ ಅಮ್ಮನ್ನ , ಒಂಟಿಯಾಗಿ ಬಿಟ್ಟು..
ವಾರಕ್ಕೊಮ್ಮೆ ಬರುತ್ತಿದ್ದ.ಈಗ ಕರೋನ ಹಬ್ಬಿದೆ, ಬರುವ ಹಾಗಿಲ್ಲ. ಬಿಡುವಾದಾಗ ಫೋನ್ ಮಾಡುತ್ತಾನೆ.
ಎಲ್ಲಾ ಸಂಬಂಧಗಳು ಹರಿದಿದೆ.
ಎಲ್ಲರೂ ಇದ್ದರೂ ಯಾರೂ ಇಲ್ಲದಂತಾಗಿದೆ. ವಿಧಿ ಬರಹ. ಇವು ಸೂಕ್ಷ್ಮ ವಿಚಾರಗಳು, ಬಂಧುಗಳು ದೂರ,ನಂಬಿಕೆಯ ಬಂಧಗಳು ಹರಿದಂತೆ ಭಾಸವಾಗುತ್ತದೆ.

ಆತ್ಮೀಯತೆ ವಿಶ್ವಾಸದ ಸಮಾರಂಭಗಳು ದೂರ.

ಇನ್ನು ಈ ಪರಿಸ್ಥಿತಿ,ಅನ್ ಲಾಕ್ ಡೌನ್ ಸಮಯದಲ್ಲಿ ಎಷ್ಟು ಕಷ್ಟವೋ?

ಕರೋನಾ ಎಲ್ಲರ ಮನೆ ಕದ ತಟ್ಟಿದೆ,ಈಗ ಎಲ್ಲರ ನಿಯಂತ್ರಣ ತಪ್ಪಿದೆ ಎಚ್ಚರ ಇರುವುದು ಲೇಸು.
ಅಂದು ಕರೋನಾ ಕುರಿತು ಭಯ
ಇಂದು ಅದರೊಟ್ಟಿಗೆ ಜೀವಿಸಿ ಎಂದಭಯ.

"ಕರೋನಾಗೆ ಔಷಧಿಯಿಲ್ಲವೆನ್ನುವರು
ಆದರೆ ದಿನವಿಷ್ಟು ಜನ ಗುಣಮುಖರಾದರೆಂಬುವರು.
ಏನೋ ಒಂದು ತಿಳಿಯೋದಿಲ್ಲ ರೀ."

"ಏನೇ ಮಾಡೋದು, ದೇವರ ಮೇಲೆ ಭಾರ ಹಾಕೋಣ.. ಅವನು ವಾಪಸ್ಸು ಬರುವಹಾಗೆ ಆದರೆ ಸಾಕು.."

ಒಂದು ದಿನ ಕಮಲ "ರೀ ಎಲ್ಲೀದ್ದೀರಿ.." ಒಂದೇ ಸಮನೇ ಓಡಿಬಂದು ರೂಮಿಗೆ..
"ಅಲ್ಲಾರಿ ಇವತ್ತು ನ್ಯೂಸ್ ಚಾನಲ್ ನಲ್ಲಿ ಹೇಳುತ್ತಾ ಇದ್ದರು..

ಕೆಲವು ವಿಮಾನ ಹಾರಾಟ ಶುರುಮಾಡ್ತಾರಂತೆ.

ತಕ್ಷಣ ನಮ್ಮ ಮಗನಿಗೆ ಬುಕ್ ಮಾಡಿ ಕರೆಸಿಕೊಳ್ಳುವ, ಏನು?"

"ಸರಿ ಮಾರಾಯ್ತಿ, ಇವತ್ತೇ ಬುಕ್ ಮಾಡುತ್ತೇನೆ."

ನಾಲ್ಕು ದಿನಗಳ ನಂತರ ರೋಹಿತ್ ಒಬ್ಬನೇ ವಿಮಾನದಲ್ಲಿ ಬಂದ.

ಏರೋಪ್ಲೇನ್ ನಿಂದ ಆಚೆ ಬಂದು ತಾಯಿ ಯ ಬಳಿಗೆ ಓಡೋಡಿ ಬಂದು ಅಪ್ಪಿಕೊಂಡು.. "ಅಮ್ಮಾ ಅಮ್ಮಾ!" ಅಂತ ಅಳುತ್ತಿದ್ದ.

ಈ ತಾಯಿ ಮಗನ ಸ್ಥಿತಿ ಕಂಡು, ಎಲ್ಲರ ಕಣ್ಣಲ್ಲೂ ನೀರು..

ಸಹಜ ಸ್ಥಿತಿಯಲ್ಲಿ ಜೊತೆಯಲ್ಲಿ ಇದ್ದಾಗ ಮನಸ್ಥಿತಿ ಒಂದು ತರಹ.

ಕೆಲವು ತಿಂಗಳುಗಳ ಮಗನಿಂದ ಅಗಲಿ, ಅನುಭವಿಸಿದ
ಭೀತಿ, ಅನಿಶ್ಚಿತತೆ, ಭಯ, ಮುಂದೆ ಏನು ಎಂಬ ಪ್ರಶ್ನೆ ಆತಂಕ..
ಸಾಕಪ್ಪ ಸಾಕು.. ಯಾರಿಗೂ ಬೇಡ..

ಮಗನನ್ನು ನೋಡಿದ ಮೇಲೆ ತಂದೆ ತಾಯಿಯ ಆನಂದಕ್ಕೆ ಪಾರವೇ ಇರಲಿಲ್ಲ.
""********

ಎನ್. ಶಂಕರ ರಾವ್.

ಕರೋನ

ನೆಮ್ಮದಿಯಿಂದಿದ್ದ ಜಗಕೆ ಬರಸಿಡಿಲಿನಂತೆ ಬಡಿಯಿತು ಮಹಾಮಾರಿ ಕರೋನಾ.
ವಿಶ್ವದೆಲ್ಲೆಡೆ ವ್ಯಾಪಿಸಿತು ಕಾಡ್ಗಿಚ್ಚಿನಂತೆ ತನ್ನ ಕೆನ್ನಾಲಿಗೆಯನ್ನು ಚಾಚುತ.
ಮಕ್ಕಳು ಮುದುಕರು ಎನ್ನದೆ ಎಲ್ಲರನ್ನು ಉಸಿರುಗಟ್ಟಿಸಿ ನುಂಗಿಹಾಕುತ ಸಾಗಿತು.
ಮೊದಮೊದಲಿಗೆ ಏನು ಮಾಡಬೇಕೆಂಬುದೇ ತೋಚದೆ ಕಂಗಾಲಾಗಿ ಬಿಟ್ಟರು.
ಇದೊಂದು ವೈರಾಣು ಕರೋನ ಕೋವಿಡ್ 19 ಎಂದು ರುಜುವಾತಾಯಿತು.
ಕಡಿವಾಣಹಾಕಲು ಹತ್ತಿಕ್ಕಲು ಸಮರೋಪಾದಿಯಲ್ಲಿ ಕಾರ್ಯ ಕೈಗೊಂಡರು.
ಲಾಕ್ಡೌನ್ ಅನ್ನು ತಂದರು ಮುಂಗೋಟಿಯ ಧರಿಸೆಂದರು ಸಾಮಾಜಿಕ ಅಂತರ ಜಾರಿಗೆ ತಂದರು.
ಮನೆಗಳಲ್ಲೇ ಇರಲೆಂದು ಸೂಚನೆಗಳು ಬಂದವು .
ವಿಮಾನಗಳು ರೈಲುಗಳು ಬಸ್ಸುಗಳು ಸಂಚಾರ ಸ್ಥಗಿತಗೊಳಿಸಿದರು.
ತಹಬಂದಿಗೆ ಬರುವ ಸೂಚನೆಗಳು ಗೋಚರಿಸತೊಡಗಿದವು .
ಲಾಕ್ಡೌನ್ ಸಮಯದಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಂಡರು.
ಪ್ರಕೃತಿಯಲ್ಲಿ ಬದಲಾವಣೆಗಳನ್ನು ಗಮನಿಸಿದರು
ವಾಯುಮಾಲಿನ್ಯ ಶುದ್ಧವಾಗ ತೊಡಗಿತು ನದಿಗಳು ಶುಭ್ರವಾಗ ತೊಡಗಿತು.
ಪ್ರಾಣಿ ಪಕ್ಷಿಗಳು ರಸ್ತೆಗಿಳಿಯುವಂತಾಯಿತು. ಮನೆಗಳಲ್ಲಿ ಬದುಕು ಸಾಗಿಸಲು ಕಲಿತರು.
ಮನೆಮಂದಿಯಲ್ಲ ಸಹ ಭೋಜನ ಮಾಡಲು ಕಲಿತರು.ಆರೋಗ್ಯ ಸುಧಾರಿಸತೊಡಗಿತು.
ಅಂತರ್ಜಾಲ ಸಹಯೋಗದಿಂದ ಮನೆಯಿಂದಲೇ ಕೆಲಸ ಮಾಡತೊಡಗಿದರು. ಇನ್ನು
ಸಾಹಿತಿಗಳು ಸುಮ್ಮನಿರುವರೇ,
ನೋಡಿಯೋ ಕಾರ್ಯಕ್ರಮದಲ್ಲಿ ಸಾಹಿತ್ಯ ದಾಸೋಹ ನಡೆಸಲು ಉದ್ಯುಕ್ತರಾದರು.
ಇದರ ಪರಿಣಾಮವೇ ಇಂದು ನಾನು ಮನೆಯಿಂದಲೇ ಕವನವಾಚನ ಮಾಡುತ್ತಿದ್ದೇನೆ.

ಬಾಲಸುಬ್ರಹ್ಮಣ್ಯಂ.

ಆನ್ಲೈನ್ ಸನ್ಮಾನ

ಯುಗಾದಿ ವೇಳೆಗೆ ತಮಗೆ ಅದ್ಧೂರಿ ಸನ್ಮಾನ ಎಂದು ಯು.ಕೆ.ಇಂದ ಮೆಸೇಜ್ ಬಂದಾಗ ವಿಶ್ವನಿಗೆ ಖುಷಿಯಾಯ್ತು. ಲಂಡನ್ನಲ್ಲಿ ಸನ್ಮಾನ ಮಾಡಿಸ್ಕೊಳ್ಬೇಕಾದ್ರೆ ಅದೃಷ್ಟ ಪಡೆದಿರ್ಬೇಕು ಎಂದು ವಿಶ್ವ ತಿಳಿದ. ಮಾನ ಕಡಿಮೆಯಾದಾಗಲೆಲ್ಲಾ ಆಗಾಗ ಇಂಥ ಸನ್ಮಾನಗಳು ನಡೆದರೆ ಹೇಗೋ ಮೇಕಪ್ ಆಗುತ್ತಿರುತ್ತದೆ ಎಂದುಕೊಳ್ಳುತ್ತಾ ಈ ವಿಷಯವನ್ನು ಮಡದಿ ವಿಶಾಲುಗೆ ವಿವರಿಸಿದ.

``ಸಂತೋಷ ಕಣ್ರೀ, ಯಾವ ಸಂಘದವರು ನಿಮ್ಮನ್ನ ಕರೆಸ್ತಾ ಇರೋದು ?'' ಎಂದು ಆಸಕ್ತಿಯಿಂದ ಕೇಳಿದಳು.

```ಲಂಡನ್ ಐ ಕನ್ನಡ ಸಂಘ ! ಅವರಿಂದ ಆಹ್ವಾನ ಬಂದಿದೆ ಕಣೇ'' ಎಂದ ವಿಶ್ವ.

``ಲಂಡನ್ ಮೈಯಾ ?''

```ಮೈ ಅಲ್ಲ, ಐಯ್ಯೆ' ಲಂಡನ್ನಲ್ಲಿ ಜೈಂಟ್ ವ್ಹೀಲ್ ಥರ ದೊಡ್ಡ ಚಕ್ರ ಇದೆಯಲ್ಲ, ನಾಲ್ಕು ತೆಂಗಿನಮರದ ಎತ್ತರ ಇದೆ, ಅದರ ಹೆಸರು ಲಂಡನ್ ಐ.''

ವಿಶಾಲು ಕಣ್ಮುಂದೆ ಜೈಂಟ್ ವ್ಹೀಲ್ ತಂದುಕೊಂಡು ಯೋಚನೆ ಮಾಡಿದಳು. ಯಾವ ಜಾತ್ರೆಯಲ್ಲೂ ಇಷ್ಟು ದೊಡ್ಡ `ರಾಕ್ಷಸ ಚಕ್ರ' ಇಲ್ಲ ಎಂದುಕೊಂಡಳು.

ಆ ಕನ್ನಡ ಸಂಘದವರು ಎಲ್ಲಿ ಕಾರ್ಯಕ್ರಮ ಮಾಡಿಸುತ್ತಾರೆ ? ಬಹುಶಃ ಲಂಡನ್ ಐನ್ ಕ್ಯಾಪ್ಸೂಲ್ ಕಂಪಾರ್ಟ್ಮೆಂಟ್ನಲ್ಲಿ ಕೂರಿಸಿ ಸನ್ಮಾನ ಮಾಡ್ಬಹುದು. ಮೇಲೆ ಹೋಗ್ತಾ ಕೆಳಗೆ ಬರ್ತಾ ಮೈಕಲ್ಲಿ ಭಾಷಣ ಮಾಡಿದ್ರೆ ಇಡೀ ಏರಿಯಾದಲ್ಲಿ ಇರೋವರಿಗೆ ಕೇಳಿಸುತ್ತೆ ಎಂದು ಊಹಿಸಿದಳು.

ಅದೃಷ್ಟ ಎಂಬುದು ಬ್ರೇಕ್ ಇಲ್ಲದ ಲಾರಿಯಂತೆ. ಎಲ್ಲಿ, ಯಾರಿಗೆ ಯಾವಾಗ ಹೇಗೆ ಗುದ್ದುತ್ತೋ ಹೇಳಲಾಗದು. ಅದು ಕೆಲವೊಮ್ಮೆ ಗ್ರಹಚಾರದ ರೂಪದಲ್ಲಿ ಕಾಣಿಸಿಕೊಂಡು ಕರಿ ಬೆಕ್ಕಿನಂತೆ ಅಡ್ಡ ಬರುತ್ತದೆ. ಹಿಂದಿನ ಕಾಲದಲ್ಲಿ ಯಜ್ಞ ಯಾಗಾದಿಗಳನ್ನು ಮಾಡುವಾಗ ಆಕಾಶಮಾರ್ಗವಾಗಿ ಬರ್ತಿದ್ದ ರಾಕ್ಷಸರು ಮಾಂಸ, ಮದ್ಯವನ್ನು ಯಜ್ಞಕುಂಡಕ್ಕೆ ಸುರಿದು ಎಲ್ಲವನ್ನೂ ಗಬ್ಬೆಬ್ಬಿಸುತ್ತಿದ್ದರು. ಅದರ ಬೇರೊಂದು ರೂಪವೇ ಕರೋನಾ ಎಂಬ ಮಹಾಮಾರಿ !

ಕರೋನಾ ಸಹ ಆಕಾಶಮಾರ್ಗವಾಗಿ ಚೈನಾದಿಂದ ಬಂದು ಎಲ್ಲ ಕಾರ್ಯಕ್ರಮಗಳನ್ನು ರದ್ದುಗೊಳಿಸಿತು. ಪ್ರಪಂಚವನ್ನೇ ಲಾಕ್ಡೌನ್ ಮಾಡಿ ಕೆಡವಿತು. ಬುಕ್ ಮಾಡಿದ್ದ ಟಿಕೆಟನ್ನು ಕನ್ನಡ ಸಂಘದವರೇ ಕ್ಯಾನ್ಸಲ್ ಮಾಡಿದರು.

ವಿಶ್ವನು ಕನ್ನಡ ಸಂಘಕ್ಕೆ ಫೋನ್ ಮಾಡಿ ಕೇಳಿದ.

``ಹಾಗಿದ್ದರೆ ನನ್ನ ಸನ್ಮಾನದ ವಿಷ್ಯ ಏನ್ಮಾಡ್ತೀರಾ ?''

``ಕರೋನಾ ಬಂದ ಮಾತ್ರಕ್ಕೆ ಊಟ ನಿಲ್ಲಿಸಿದ್ದೀವಾ? ನಿಮ್ಮ ಕಾರ್ಯಕ್ರಮವೂ ಊಟದಷ್ಟೇ ಮುಖ್ಯ ಸಾರ್. ಅದರ ಬಗ್ಗೆ ನಾವು ಯೋಚ್ನೆ ಮಾಡ್ತಿದ್ದೀವಿ. ಇವತ್ತು ಕಾರ್ಯಕಾರಿ ಸಮಿತಿ ಸಭೆ ಇದೆ. ನಿಮಗೆ ಸನ್ಮಾನ ಅಂತೂ ತಪ್ಪಿಸೊಲ್ಲ ಸಾರ್. ತಂದಿಟ್ಟಿರೋ ಜರೀ ಶಾಲು, ಗಂಧದ ಹಾರ ವೇಸ್ಟ್ ಆಗಬಾರದು ಸಾರ್. ನಿಮಗೆ ಅದ್ಧೂರಿಯಾಗಿ ಸನ್ಮಾನ ಮಾಡ್ತೀವಿ.'' ಸಂಘದ ಅಧ್ಯಕ್ಷರು ವಿಶ್ವನಿಗೆ ಆಶ್ವಾಸನೆ ಕೊಟ್ಟರು.

ಮರುದಿನ ವಿಶ್ವನಿಗೆ ಲಂಡನ್ನಿಂದ ಫೋನ್ ಬಂತು.

``ನಿಮಗೆ ಮೊಟ್ಟಮೊದಲ ಬಾರಿಗೆ `ಆನ್ಲೈನ್ ಸನ್ಮಾನ'ವನ್ನು ಏರ್ಪಡಿಸಿದ್ದೇವೆ. ನೀವು ಮನೆಯಲ್ಲೇ ಇದ್ದು ನಮ್ಮ ಸನ್ಮಾನ ಸ್ವೀಕರಿಸ್ತೀರ'' ಎಂದಾಗ ವಿಶ್ವನಿಗೆ ಖುಷಿಯಾಯ್ತು.

``ರೀ, ಆನ್ಲೈನ್ ಸನ್ಮಾನ ಅಂದ್ರೆ ಹೇಗೆ ಮಾಡ್ತಾರೆ ?'' ವಿಶಾಲು ಗಂಡನನ್ನು ಕೇಳಿದಳು.

``ಈಗ ಎಲ್ಲಾನೂ ಆನ್ಲೈನೇ ! ಆನ್ಲೈನ್ ಭಾಷಣ, ಆನ್ಲೈನ್ ಚರ್ಚೆ, ಆನ್ಲೈನ್ ನಗೆಹಬ್ಬ ಅಂತ ಏನೇನೋ ಮಾಡ್ತಾ ಇದ್ದಾರಲ್ಲ........''

``ಮೊನ್ನೆ ನೀವು ಆನ್ಲೈನ್ನಲ್ಲಿ ಪಿಜ್ಜಾ ತರಿಸಿದ್ರಲ್ಲ, ಹಾಗೆ !'' ಎಂದಳು ವಿಶಾಲು.

``ಹೌದು, ಅದೇ ರೀತಿ ನನಗೆ ಸನ್ಮಾನ ಮಾಡ್ತಾರೆ'' ಎಂದ ವಿಶ್ವ.

ಕಾರ್ಯಕ್ರಮದ ಬಗ್ಗೆ ಒಂದು ಸುಂದರವಾದ ಭಿತ್ತಿಚಿತ್ರವನ್ನು ಮೊಬೈಲ್ಗೆ ಕಳಿಸಿದ್ದರು. ಅದನ್ನು ನೋಡಿದ
ವಿಶ್ವ ಆನಂದಪಟ್ಟ. ಮಹಾರಾಜರ ಕುರ್ಚಿಯಲ್ಲಿ ಕುಳಿತಿದ್ದ ವಿಶ್ವನ ತಲೆಗೆ ಮೈಸೂರು ಪೇಟ, ಬೆನ್ನಿಗೆ ಜರಿ ಶಾಲು,
ಕೈಗೆ ಹಣ್ಣು-ಹಂಪಲು ಹಾಗೂ ಸನ್ಮಾನ ಪತ್ರ ಇವುಗಳನ್ನು ಆ ಚಿತ್ರದಲ್ಲಿ ಹಾಕಿದ್ದರು. ಆ ದಿನಕ್ಕಾಗಿ ವಿಶ್ವ ಹಾತೊರೆದ.

``500 ಸದಸ್ಯರು ಆನ್ಲೈನ್ನಲ್ಲಿ ನಿಮ್ಮ ಸನ್ಮಾನಕ್ಕೆ ಹಾಜರ ಆಗ್ತಾರೆ, ನಿಮ್ಮ ಮಾತು ಕೇಳಿ ಚಪ್ಪಾಳೆ ತಟ್ಟಿ ಆನಂದಿಸ್ತಾರೆ'' ಎಂದಾಗ ವಿಶ್ವನಿಗೆ ಮತ್ತಷ್ಟು ಖುಷಿಯಾಯಿತು.

ಸನ್ಮಾನದ ದಿನ ವಿಶ್ವ ಜುಬ್ಬ ಧರಿಸಿ ಸಿದ್ಧನಾದ. ಮುಂಚಿತವಾಗಿ ಭಾಷಣವನ್ನು ರೆಕಾರ್ಡ್ ಮಾಡಿ ಮೈಲ್ನಲ್ಲಿ ಕಳಿಸಿದ್ದ. ಒಂದು ಪುಟ್ಟ ಸಭಾಂಗಣದಲ್ಲಿ ಕಾರ್ಯಕ್ರಮಕ್ಕೆ ವ್ಯವಸ್ಥೆ ಆಗಿತ್ತು. ಅಂತರವನ್ನು ಕಾಪಾಡಿಕೊಂಡ ನಾಲ್ಕೈದು ಕಾರ್ಯಕರ್ತರು ಮುಖ ತೋರಿಸದೆ ಮಾಸ್ಕ್ ಹಾಕಿಕೊಂಡಿದ್ದರು. ವಿಶ್ವ ನೆಟ್ ಸಹಾಯದಿಂದ ಮೊಬೈಲ್ನಲ್ಲಿ ತಾನು ಭಾಗವಹಿಸುವ ಕಾರ್ಯಕ್ರಮದ ವೈಶಿಷ್ಟ್ಯ ನೋಡಿ ಆನಂದಿಸಿದ. ಕಾರ್ಯಕ್ರಮ ಆರಂಭವಾಯಿತು.

``ಇವತ್ತು ವಿಶ್ವನಾಥ್ ಅವರಿಗೆ ಸನ್ಮಾನ. ವಿಶ್ವನಾಥ್ ಬಹಳ ದೊಡ್ಡ ಸಾಹಿತಿಗಳು. ಸಿಕ್ಕಾಪಟ್ಟೆ ಬರೆದಿದ್ದಾರೆ. ಎಷ್ಟು ಬರೆದಿದ್ದಾರೆ ಅಂತ ಅವರಿಗೂ ಗೊತ್ತಿಲ್ಲ. ನಮಗೂ ಗೊತ್ತಿಲ್ಲ. ಗೊತ್ತಾಗಿ ಏನೂ ಆಗಬೇಕಾದ್ದಿಲ್ಲ. ಎರಡೂ ಕೈಯಲ್ಲಿ ಅವರು ಬರೀತಾರಂತೆ. ಅಂಥಹ ಶ್ರೀಯುತರು ನಮ್ಮ ಸನ್ಮಾನ ಸ್ವೀಕರಿಸೋಕೆ ಈಗ ಬರ್ತಾ ಇದ್ದಾರೆ, ನಿಮ್ಮ ಚಪ್ಪಾಳೆ ನಡುವೆ'' ಎಂದಾಗ ವಿಶ್ವ ಮತ್ತು ವಿಶಾಲು ಗಾಬರಿಯಿಂದ ಮೊಬೈಲ್ ನೋಡಿದರು.

``ರೀ, ನೀವು ಮನೇಲಿ ಇಲ್ಲಿದ್ದೀರ, ಲಂಡನ್ ಸಭೆಗೆ ಹೇಗೆ ಹೋಗ್ತೀರ ?'' ವಿಶಾಲು ಕೇಳಿದಳು.

``ಗೊತ್ತಿಲ್ಲಮ್ಮ, ನೋಡೋಣ ಏನ್ಮಾಡ್ತಾರೆ ಅಂತ''

ಆಳೆತ್ತರದ ರೋಬೋಟ್ ನಡೆದು ಬಂತು. ವಿಶ್ವನ ಮುಖದ ಚಿತ್ರವನ್ನು ರೋಬೋಟ್ಗೆ ಅಳವಡಿಸಿದ್ದರು. ಅದು ಬಂದು ಕುರ್ಚಿ ಮೇಲೆ ಕುಳಿತು ಮುಗುಳ್ನಕ್ಕಿತು. ದೂರದಿಂದ ನೋಡಿದರೆ ಸಾಕ್ಷಾತ್ ವಿಶ್ವನೇ ಕುಳಿತಂತೆ ಕಾಣುತ್ತಿತ್ತು. ಒಂದೇ ವ್ಯತ್ಯಾಸ ಎಂದರೆ ವಿಶ್ವನಿಗೆ ಪ್ರಾಣ ಇತ್ತು, ಲುಕ್ ಅಲೈಕ್ ಮಿಷೀನಿಗೆ ಪ್ರಾಣ ಇರಲಿಲ್ಲ.

``ರೀ, ಅಲ್ಲಿರೋದು ಮಿಷೀನು ಅಲ್ವೇನ್ರೀ ?'' ಎಂದು ಕೇಳಿದಳು ವಿಶಾಲು.

``ಮಿಷೀನಲ್ಲ, ರೋಬೋಟು. ನೋಡೋಣ ಇರಮ್ಮಾ ಮುಂದೆ ಏನಾಗುತ್ತೆ ಅಂತ'' ಎಂದ ವಿಶ್ವ.

ಪ್ರಾರಂಭಕ್ಕೆ ಪ್ರಾರ್ಥನೆ, ಸ್ವಾಗತವನ್ನು ಮಾಡಿ ಮುಗಿಸಿದರು.
``ಈಗ ವಿಶ್ವನಾಥ್ ಅವರಿಗೆ ನಾವು ಶಾಲು ಹೊದಿಸ್ತಾ ಇದ್ದೀವಿ'' ಎಂದು ರೋಬೋಗೆ ಶಾಲು ಹೊದಿಸಲಾಯಿತು. ವಿಶ್ವ ಕಾರ್ಯಕರ್ತರಿಗೆ ಫೋನ್ ಮಾಡಿದ.
``ಸಾರ್, ನಾನು ಇಲ್ಲಿದ್ದೀನಿ. ಯಂತ್ರಕ್ಕೆ ಶಾಲು ಹೊದಿಸ್ತಾ ಇದ್ದೀರಲ್ಲ, ಸರಿಯಾ ಇದು?'' ಎಂದು ದಬಾಯಿಸಿದ.
``ನಿಮ್ಮ ಪರವಾಗಿ ರೋಬೋನ ಕರೆತಂದಿದ್ದೀವಿ. ಶ್ರೀರಾಮ ರಾಜಸೂಯ ಯಾಗ ಮಾಡೊವಾಗ ಬಂಗಾರದಲ್ಲಿ ಸೀತೆಯ ವಿಗ್ರಹ ಮಾಡಿಸಿ ಪಕ್ಕದಲ್ಲಿಟ್ಟುಕೊಂಡಿದ್ದ. ಆ ಟೈಪ್ ಇದು. ನಿಮ್ಮ ಬದಲು ರೋಬೋ ಇದೆ. ನಿಮ್ಮ ಹೆಸರಲ್ಲಿ ಅದಕ್ಕೆ ಸನ್ಮಾನ ಮಾಡ್ತೀವಿ. ಅದಕ್ಕೆ ಶಾಲು ಹೊದಿಸ್ತಾ ಇದ್ದೀವಿ''
ರೋಬೋಟ್ಗೆ ಶಾಲು ಹೊದ್ದಿಸಿ ಹಾರವನ್ನು ಹಾಕಲಾಯಿತು. ಅಲ್ಲಿದ್ದವರು ಚಪ್ಪಾಳೆ ತಟ್ಟಿದರು. ರೋಬೋಟ್ ತಲೆಗೆ ಮೈಸೂರು ರುಮಾಲನ್ನು ಇಟ್ಟರು. ವಿಶಾಲುಗೆ ಸಂತೋಷವಾಗುತ್ತಿದ್ದರೂ ಎಲ್ಲವೂ ಬೇರೆ ತಲೆಗೆ ಆಗುತ್ತಿದೆ, ನನ್ನ ಗಂಡನ ತಲೆಗೆ ಬೆಲೆಯೇ ಇಲ್ಲವಾ ಎಂದು ಬೇಸರಿಸಿದಳು.
``ಈಗ ವಿಶ್ವನಾಥ್ ಅವರಿಂದ ಅಮೋಘ ಭಾಷಣ'' ಎಂದಾಗ ಪೆನ್ಡ್ರೈವ್ಗಾಗಿ ಹುಡುಕಾಡಿದರು. ವಿಶ್ವ ಕಳಿಸಿದ್ದ ಆಡಿಯೋ ಭಾಷಣವನ್ನು ಪೆನ್ಡ್ರೈವ್ಗೆ ಹಾಕಿಟ್ಟಿದ್ದರು. ಪೆನ್ಡ್ರೈವನ್ನು ತಂದು ಚುಚ್ಚಿದಾಗ ರೋಬೋ ಎದ್ದು ನಿಂತಿತು. ವಿಶ್ವನ ರೀತಿಯಲ್ಲೇ ಮಾತಾಡಲು ಶುರು ಮಾಡಿತು.
``ಮಹನೀಯರೇ, ಮಹಿಳೆಯರೇ.. 35 ವರ್ಷಕ್ಕೆಲ್ಲಾ ಮಾನ್ಯ ಅಧ್ಯಕ್ಷರು ಸಾಯಬಾರದಿತ್ತು. ಚಿಕ್ಕ ವಯಸ್ಸು. ಅವರಿಗಿಂತ ದೊಡ್ಡವರು ಎಷ್ಟೋ ಜನ ಇದ್ದಾರೆ. ಇವರು ಅನ್ಯಾಯವಾಗಿ ಸತ್ರು. ಚಿಕ್ಕ ವಯಸ್ಸಿಗೆ ಸತ್ರೆ ಮೇಲೆ ಜಾಗ ಸಿಗೊಲ್ಲ. ಈಗಾಗ್ಲೇ ಕರೋನಾ ಬಂದು ತುಂಬಾ ಜನ ಸಾಯ್ತಾ ಇದ್ದಾರೆ. ಹೂಳೋಕೇ ಜಾಗ ಇಲ್ದೆ ವಿದೇಶಗಳು  ಪರಿತಪಿಸ್ತಾ ಇರೋವಾಗ ಸ್ವರ್ಗ ಅಥವಾ ನರಕದಲ್ಲಿ ಜಾಗ ಎಲ್ಲಿರುತ್ತೆ ?''
ಸಂಘದವರಿಗೆ ಗಾಬರಿಯಾಯಿತು. ಅಧ್ಯಕ್ಷರು ಎದ್ದು ಬಂದರು.
``ವಿಶ್ವ ಈ ರೀತಿ ಮಾತಾಡಿದ್ದೀರಾ ?'' ಎಂದು ರೇಗಿದರು. ತಪ್ಪು ಮಾಡಿದ್ದ ಕಾರ್ಯಕರ್ತ ಬಂದು, ``ಸ್ಸಾರಿ ಸಾರ್, ಡೌನ್ಲೋಡ್ ಮಾಡೋವಾಗ ತಪ್ಪಾಗಿದೆ'' ಎಂದು ಬೇರೆ ಒಂದು ಪೆನ್ಡ್ರೈವನ್ನು ತಂದು ಸಿಕ್ಕಿಸಿದ. ಆಗ ರೋಬೋ ಕನ್ನಡದ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿತು.
``ವಿಶ್ವನಾಥ್ ಅವರಿಗೆ ಇದೀಗ ಫಲಪುಷ್ಪ ಅರ್ಪಣೆ'' ಎಂದು ಹೇಳಿ ಫಲಪುಷ್ಪಗಳ ಬುಟ್ಟಿ ನೀಡಲಾಯಿತು. ಅಂತೂ ಕಾರ್ಯಕ್ರಮ ಯಶಸ್ವಿಯಾಗಿ ಮುಗಿಯಿತು.
ವಿಶ್ವ ಕನ್ನಡ ಸಂಘಕ್ಕೆ ಫೋನ್ ಮಾಡಿ ಕೇಳಿದ.
``ಕಾರ್ಯಕ್ರಮ ಚೆನ್ನಾಗಾಯ್ತು. ಆದ್ರೆ ನನಗೆ ಇದರಿಂದ ಏನು ಪ್ರಯೋಜನ ?''
``ಬಿಟ್ಟಿ ಪ್ರಚಾರ ಸಿಕ್ತಲ್ಲ ಸಾರ್, ಕಾರ್ಯಕ್ರಮದ ಫೋಟೋ ಒಂದು ಕಳಿಸ್ತೀವಿ. ಅದನ್ನ ನೀವು ಎನ್ಲಾರ್ಜ್ ಮಾಡಿ ಮನೇಲಿ ಹಾಕ್ಕೊಳ್ಳಿ.'' ``ಫೋಟೋ ಖರ್ಚು ?''
``ನಿಮ್ಮ ಫೋಟೋ ಖರ್ಚು ನೀವೇ ತಾನೇ ಕೊಡ್ಬೇಕು ?'' ಎಂದಾಗ ವಿಶ್ವ ಕುಸಿದು ಬಿದ್ದ.
**- ಎಂ.ಎಸ್.ನರಸಿಂಹಮೂರ್ತಿ**

# *ಹುಟ್ಟಿದವರು ಉಳಿಯುವದಿಲ್ಲ*

ಬಹಳ ಹಿಂದೆ ಪ್ರಭುದೇವರ ಒಂದು ವಚನ ಓದಿದ್ದೆ. ಅದು ಹೀಗೆ ಪ್ರಾರಂಭ ಆಗುತ್ತದೆ. " ಕಂಡ ಕಂಡವರೆಲ್ಲ ಬಂದು ನೀರು ಕಾಯಿಸುವುದ ಕಂಡೆ ಮಿಂದು ಉಂಡವರ ಕಾಣಲಿಲ್ಲ." ಇಂದು ಗಡಿಬಿಡಿಯ ಜೀವನ, ಯಾರಿಗೂ ಸಮಯವಿಲ್ಲ ಎಂದು ಕೇಳುತ್ತೇವೆ. 12 ನೇ ಶತಮಾನದಲ್ಲಿಯೂ ಜನರ ಮನೋಭಾವ ಇದೆ ರೀತಿಯಲ್ಲಿ ಇತ್ತು ಎಂದು ಈ ಮಾತುಗಳಿಂದ ತಿಳಿಯುತ್ತದೆ. ಯಾಕೆಂದರೆ ಸಾಹಿತ್ಯ ಕಲೆಗಳು ಹೆಚ್ಚಾಗಿ ಆಯಾ ಕಾಲದ ಸಮಾಜದ ಪ್ರತಿಬಿಂಬ ಗಳಾಗಿರುತ್ತವೆ. ಮೇಲಿನ ಉಕ್ತಿಯ ಅರ್ಥ " ಎಲ್ಲರಿಗೂ ನೀರು ಕಾಯಿಸಲು ಸಮಯವಿದೆ, ಆದರೆ ಸ್ನಾನ ಮಾಡಿ ಊಟ ಮಾಡುವಷ್ಟು ವ್ಯವಧಾನವಿಲ್ಲ. ಜೀವನಾವಶ್ಯಕ ಸ್ವಚ್ಛತೆ, ದೇಹಪೋಷಣೆಗೂ ಬೇಕಾಗುವಷ್ಟು ಸಮಯವಿಲ್ಲ. ಅಷ್ಟೊಂದು ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಇನ್ನೂ ಒಂದು ಅರ್ಥ ಹೀಗೆ ಹೇಳಬಹುದು " ಹಣ, ಸಂಪತ್ತು, ವಿಧ್ಯೆ ಗಳಿಸಿಕೊಳ್ಳುತ್ತಾರೆ, ಆದರೆ ಅದರ ಸದುಪಯೋಗ ಮಾಡಿಕೊಳ್ಳಲಾರರು. ಇಂದು ತಮಗಾಗುವಷ್ಟು ಮುಂದಿನ ಪೀಳಿಗೆಗೆ ಸಾಕಾಗುವಷ್ಟು ಹತ್ತಾರು ವಾಮ ಮಾರ್ಗಗಳಿಂದ ಗಳಿಸುತ್ತಾರೆ, ತಾವೂ ಸುಖವಾಗಿ ಬಾಳದೆ, ಸತ್ಕಾರ್ಯಗಳಿಗೆ ಖರ್ಚು ಮಾಡದೆ ಕೂಡಿಟ್ಟು ಹೊರಟು ಹೋಗುತ್ತಾರೆ. ಅವರ ಮಕ್ಕಳು, ಮೊಮ್ಮಕ್ಕಳು ಪರಿಶ್ರಮ ವಿಲ್ಲದೆ ದೊರೆತ ಈ ಹಣವನ್ನು ದುರ್ವ್ಯವಹಾರಗಳಿಗೆ, ದುಷ್ಕರ್ಮಗಳಿಗೆ ಬಳಸುತ್ತಾರೆ. ಅದಕ್ಕಾಗಿ ಪಂಚಾಕ್ಷರಿ ಗುರುಗಳು ಒಂದು ದಾರಿ ತೋರುತ್ತಾರೆ. ಅವರು ಹೇಳೋದು " ಈ ಭೂಮಿಯಲ್ಲಿ ಇಂದು ನನ್ನದು ನನ್ನದು ಎಂದು ಗಲಾಟೆ ಮಾಡ್ತಾ ಇದ್ದೀರಲ್ಲ, ಒಂದು ದಿನ ಎಲ್ಲ ತೊರೆದು ಹೋಗಬೇಕಾಗುತ್ತದೆ.ಅದಕ್ಕಾಗಿ ಇಲ್ಲಿ ಗಳಿಸಿದುದನ್ನು ದಾನ ಧರ್ಮಗಳಲ್ಲಿ ವ್ಯಯಿಸಿ ಮನಸ್ಸಿನ ನೆಮ್ಮದಿ ಪಡೆಯಿರಿ. ಹುಟ್ಟಿದವರು ಉಳಿಯುವದಿಲ್ಲ, ನೀವು ಜೀವನದಲ್ಲಿ ಆನಂದದಿಂದ ಅನುಭವಿಸಿ, ಸತ್ಪಾತ್ರರಿಗೆ ದಾನ ಧರ್ಮ ಮಾಡಿ, ಗುರುವಿನ ಪಾದದಲ್ಲಿ ಮನವಿಡಿ ". ರಾಮಕೃಷ್ಣ ಪರಮಹಂಸರು ಹೇಳುವುದೇನೆಂದರೆ, " " " ದೇವರು ನನಗೆ ಎರಡು ಸಂದರ್ಭಗಳಲ್ಲಿ ನಗೆ ಬರುತ್ತದೆ ಅನ್ನುತ್ತಾನಂತೆ ಒಂದು ಸಂದರ್ಭ ಅಣ್ಣ ತಮ್ಮ ತಮ್ಮ ಹೊಲದ ಪಕ್ಕದಲ್ಲಿ ನಿಂತು ಇದು ನನ್ನ ಭಾಗ, ಇದು ನನ್ನ ಭಾಗ ಎಂದು ಜಗಳಮಾಡುವಾಗ " ಎಲಾ, ಈ ಜಗದ ಭೂಮಿಯೆಲ್ಲ ನನ್ನದು ಈ ಮೂರ್ಖರು ತಮ್ಮದು ಎಂದು ಹೊಡೆದಾಡುತ್ತರಿದ್ದಾರಲ್ಲ. ನನ್ನ ಭೂಮಿಯನ್ನು ನನಗೆ ಸಂತೋಷವಾಗುವ ರೀತಿಯಲ್ಲಿ ಹಂಚಿಕೊಂಡು, ಅಂದರೆ ಇಬ್ಬರಿಗೂ ಖುಷಿಯಾಗುವರೀತಿಯಲ್ಲಿ ಕೊಟ್ಟು, ತೆಗೆದುಕೊಂಡು ಬಾಳಬಾರದೆ. " ಅನ್ನುತ್ತಾನಂತೆ. ಸ್ವಾಮಿ ಪುರುಷೋತ್ತಮಾನಂದರು ಇದನ್ನೇ ಇನ್ನೊಂದು ಬಗೆಯಾಗಿ ತಿಳಿಸಿಕೊಡುತ್ತಾರೆ. "

" ಮಾನವ ತನ್ನ ಮಿತಿಯನ್ನು ಅರಿಯದೆ ಗಗನಕ್ಕೆ ಲಗ್ಗೆ ಹಾಕುತ್ತಾನೆ, ಅದೆಲ್ಲ ತನ್ನ ಸುಖಮಯ ಬಾಳಿಗೆ ಅಂದುಕೊಳ್ಳುತ್ತಾನೆ, ಆದರೆ ಎಷ್ಟೋ ಸಂದರ್ಭದಲ್ಲಿ ತನಗರಿವಿಲ್ಲದಂತೆ ನಡೆದು ಬಿಡುವನು. ಈ ಜಗ ಬದುಕಿನೊಂದಿಗೆ ಸಾವು, ನೋವುಗಳ ತಾಣ, ಆಶೆ ಪಟ್ಟು ಪಡೆದುದನ್ನೆಲ್ಲ ಇಲ್ಲೇ ಎಲ್ಲ ಬಿಟ್ಟು ಹೋಗುವ ಬದಲು ಚೆನ್ನಾಗಿ ಬಾಳಿ, ನಗು ನಗುತ್ತ ಹೊರಡು. ಅದಕ್ಕಾಗಿ ಎಲ್ಲರನ್ನು ಪ್ರೀತಿಸುವ, ಕಾಪಾಡುವ ಅವನನ್ನು ನಂಬಿ ಕೆಲಸಮಾಡು " ಎಂದು ಹೇಳುತ್ತಾರೆ.

- **ಇಜೇರಿ**

# ಪಾರ

ಚೈತ್ರ ಮಾಸದ ಮಧ್ಯ ಕಾಲ.ಬೇಸಿಗೆ ಕಾಲಿಟ್ಟಿದೆ.ವಸಂತಾಗಮನ ಈಗಾಗಾಲೇ ಆಗಮಿಸಿದೆ.ಊರಲ್ಲಿ ಸುಗ್ಗಿ ಸಮಯ.ಉತ್ತರ ಕರ್ನಾಟಕದ ನಮ್ಮ ಭಾಗದಲ್ಲಿ ಹತ್ತಿ ಜೋಳ ಪ್ರಮುಖ ಬೆಳೆಗಳು.ಹತ್ತಿ ಬಿಡಿಸಿ ಮನೆಯ ಕೋಣೆ ತುಂಬಿದೆ.ಇನ್ನೊಂದು ವಾರದಲ್ಲಿ ಬಟಾರಗಳಲ್ಲಿ ತುಳಿದು, ಚಕ್ಕುಗಳನ್ನು ಗಂಜಿಗೆ ಸಾಗಿಸಬೇಕು. ಹೊಲದಲ್ಲಿ ಜೋಳದ ರಾಶಿ, ಅಳೆಯಲು ಸಿದ್ಧವಾಗಿದೆ.ಮೇಟಿ ಮುಳುಗಿ ಹೋಗುವಂತಹ ದೊಡ್ಡ ರಾಶಿ ಏಳರಿಂದ ಎಂಟು ಖಂಡುಗ ಆಗಬಹುದೆಂದು ಎಲ್ಲರೂ ಮಾತಾಡುತ್ತಿದ್ದಾರೆ. ಖಾಲಿಚೀಲ ಹರವಿ ತಂದ ರಡಿ ಮಾಡಿ ಇಟ್ಬಾರ. ಮಠದ ಬಸಲಿಂಗಯ್ಯ ತಾತಗ ರಾಶಿ ಪೂಜಾಕ್ಕ ಕರದು ಬಂದಾರ. ಒಂಬತ್ತಾಸಿಗೆ ಸುರು ಹಚ್ಚಿದರೆ ಕಣ್ಣ ಬೆಳಕಿಲೆ ಅಳತಿ ಮುಗಿಬಹುದು.

ಸಿದ್ದರಾಮಪ್ಪ ಗೌಡನ  ಎಂಟು ಕೂರಿಗೆ ಎರೆ ಹೊಲ. ಮುಂಜಾನೆದ್ದು ಚಾ ಕುಡುದು ಹೊಲಕ್ಕ ಬಂದ ಗೌಡನ ಮನ ತುಂಬಿ ಹೋಗಿದೆ.ಭೂಮಿ ತಾಯಿ ಈ ವರ್ಷ ಕಣ್ಣು ತೆರದಾಳ . ರೋಹಿಣಿ ಕಾರ್ತಿ ಬಿತ್ತಿದ್ದು ಭೇಷ ಆಯಿತು.ಮುಂಕಟ್ಟು ಆಗಲಿಲ್ಲ.ರೋಹಿಣಿ ಮಳಿ ಬಂದರೆ ಓಣಿ ತುಂಬಾ ಕಾಳು ಅಂಬೋ ಮಾತನ್ನ ದೇವರು ಖರೆ ಮಾಡ್ಯಾನ.ಎಂದು ಪೂರ್ವ ಕ್ಕ ಮುಖ ಮಾಡಿ ಕೈ ಮುಗಿದು, ತೂರುವಾಗ  ಕಣದ ಸುತ್ತ ಬಿದ್ದಿದ್ದ ಕಾಳುಗಳನ್ನ ಆರಿಸಿ ಆರಿಸಿ ರಾಶಿ ಒಳಗ ಹಾಕುತ್ತಿದ್ದ.

ಊರಿನ ಮಾಲಿಗೌಡ ಈ ಸಿದ್ದರಾಮಪ್ಪ.ಇನ್ನೂರು ಎಕರೆ ಪಿತ್ರಾರ್ಜಿತ ಆಸ್ತಿ ಹದಿನಾರು ಅಂಕಣದ ದೆವ್ವನಂಥ ಮನಿ, ಗೌರಮ್ಮನಂತಹ ಹೆಂಡತಿ, ಮಗ ಸೊಸಿ ಮಗಳು ಅಳಿಯ, ಮೊಮ್ಮಕ್ಕಳು ಆಳುಕಾಳು,ತಿಜೋರಿ ಹಿಡಿಲಾರದಷ್ಟು, ಬಂಗಾರ, ಬೆಳ್ಳಿ . ಹತ್ತೆತ್ತಿನ ಒಕ್ಕಲುತನ.ಗೌಡರಗಳಿಗಿರೋ ಯಾವ ಚಟಗಳು ಇಲ್ಲದ ಸತ್ಯವಂತ,ಪ್ರಾಮಾಣಿಕ ಮನುಷ್ಯ ಸಾಲು ಹಳ್ಳಿಗಳಲ್ಲಿ ಯಾವದೇ ನ್ಯಾಯ - ಜಗಳ  ಆಸ್ತಿ-ಪಾಸ್ತಿ,ವಗತನ, ಹೀಂಗ ಏನೇ ಇರಲಿ ಸಿದ್ದರಾಮಪ್ಪ ಬೇಕೇ ಬೇಕೆ ಬೇಕು.ಎರಡೂ ಪಾರ್ಟಿಗೆ ಅನ್ಯಾಯ ಆಗಲಾರದಂಗ ಬಗಹರಿಸುವ ನ್ಯಾಯಮೂರ್ತಿ.ಅದಕ ಅಂತೀನಿ ಸಿದ್ದರಾಮಪ್ಪ ಅಂದರ ಭಾರೀ ಮರ್ಯಾದಿ.ಅಗಸ್ಯಾಗ ಹೊಂಟಾನಂದ್ರ ಜನ ಎದ್ದು ನಿಲ್ಲಬೇಕು.
ಅವತ್ತು ಏನಾಯ್ತುಂದ್ರ ಈತ ಹೊಲದಾಗ.ಆಳಗಳನ್ನು ಊಟಕ್ಕ ಕಳಿಸಿ ರಾಶಿ ನೋಡಿಕೆತ,ಕಾಳು ಆರಿಸಿಕೋತ ತಿರಿಗ್ಯಾಡಲಲಿಕ್ಕೆ ಹತ್ಯಾನ; ಸಣ್ಣಳ್ಳಿ ಚನ್ನಪ್ಪ ಗೌಡ, ಮ್ಯಾಗಳ ಮನಿ ವಿರುಪಾಕ್ಷಯ್ಯ ಇಬ್ಬರೂ ಗೌಡನ್ನ ಹುಡಿಕಿಕೊಂಡು ಹೊಲಕ್ಕಬಂದಾರ  .ದೂರದಿಂದ ನೋಡಿದರ ಗೌಡ ಬಗ್ಗಿ ಬಗ್ಗಿ ಏನೋ ಆರಿಸಿ ರಾಶ್ಯಾಗ ಹಾಕಲಿಕ್ಕೆ ಹತ್ಯಾನ.ಸಮೀಪ ಬಂದ್ರು. ಗೌಡ ಕಾಳ ಆರಿಸಿ  ರಾಶಾಗ ಹಾಕದ ಕಾಣಿಸ್ತ. ಅಬಬ ಇಷ್ಟು ಶ್ರೀಮಂತ,ಖಂಡುಗ ಖಂಡುಗ ರಾಶಿ! ಕಾಳು ಆರಸದ ಬಿಡುವಲ್ಲ ನೋಡ ಇರುಪ ' ಎಂದು ವಿರುಪಾಕ್ಷಿಗೆ ಅಂದ.
ವಿರುಪಾಕ್ಷಿ ' ಏ ಸುಮ್ಮನೆ ಇರೋ ಚನ್ನಪ್ಪ ಗೌಡ, ಮೊದಲೇ,ದೊಡ್ಡ ಮನಿಸ್ಯಾ ಅತನ ಕಿವಿಗಿ ಬಿದ್ದರ ಚಲೋ ಅಲ್ಲ. ನಾವೇನು ನಮ್ಮ ದಗದ ಏನ ? ಅದೀಟು ಮುಗಿಸಿಗೊಂಡು ಹೋದ್ರ ಆತು. '

ಏಕೇಳಿಸಿಲ್ಲೋ ಮಾರಾಯ,ನೀ ಗಟ್ಟಿಗಿ ಮಾತಾಡಿ ಕೇಳಂಗ ಮಾಡಬ್ಯಾಡ' ಅಂದ.  ಸಮೀಪ ಬಂದರು.ರಾಶಿಗೆಮತ್ತ ಗೌಡಗ, ಸಣಮಾಡಿದರು. ' 'ಏ ಬರ್ರೆಪ್ ಬಿಸಲಾಗ ಬಂದೆರೆಲ್ಲ.ಅಲ್ಲೇ ಮಂತ್ಯಾಕ ಇದ್ದು ಯರ್ಾ ಕೈಲೆರ ಹೇಳಕಳಿಸಿದ್ರೆ ನಾನೇ ಬರತಿದ್ದೆ ' ಎಂದು ಸ್ವಾಗತಿಸಿದ. ವಿರುಪಾಕ್ಷಿ ' ಏ ಅದರಾಗ ಏನೈತಿ ಗೌಡ. ಪಾಪ ಗೌಡಶಾನಿ ಅದೇ ಮಾತ ಅಂದ್ಲು.ನಾವೇ ಇಲ್ಲೇಳಂಗೆ, ನಾವೇ ಹೊಲದಾಗ ಹೋತಿವಿ ರಾಶಿ ನೋಡಿದಂಗ ಆತದ ಅಂತ ನಾವೇ ಬಂದಿವಿ ' ಅಂದ. ಗೌಡ 'ಔದಾ ಸರೆ ಕುಂತರ್ಗರಿ ಏನ್ಸುದ್ದಿ ?  ' ಅಂದ ಇಬ್ಬರೂ ತಮ್ಮ ಸಮಸ್ಯಾ ಹೇಳಿದರು ಗೌಡ ಸಾವಕಾಶ ಎಲ್ಲ ಕೇಳಿ  'ಆಯಿತ ತಗಳ್ರೆಪ್ಪ ಸ್ವಾಮಾರ ಬರತೀನಿ ಬಗೆರಸಿ ಬಿಡಮ ಅಂದ.' ಇಬ್ಬರು ಸರೆ ಗೌಡರೆ,ನಾವಿನ್ನ ಬರತೀವಿ ' ಅಂತ ಎದ್ರು.ಆಗ ಗೌಡ ' ಏ ಹಂಗೆಂಗ ಆಗತದ ಊರಾಕ್ ಹೋಗಮ ನಡ್ರಿ ಉಂಡು ಹೋಗಮಂತ್ರಿ ' .
ಇವರು ಮೊದಲ ಒಲ್ಲೆ ಅಂದ್ರ ಆದರ ಗೌಡನ ಒತ್ತಾಯದ ಮುಂದ ಇವರ ಆಟ ನಡೀಲಿಲ್ಲ. ಅಷ್ಟ್ಯಾಗ, ಆಳುಗಳು ಬಂದರು. ಇವರು ಮೂರಮಂದಿ ಸಿದ್ರಾಮಪ್ಪ ಗೌಡನ ಮನಿಗೆ ಹೊಂಟರು.

ಗೌಡ ಮತ್ತು ಇಬ್ಬರೂ ಕಾಲು ಮಕ ತೊಳಕಂಡು ಬಂದು ಊಟಕ್ಕ ಕೂತರು.
ಮೂರು ಮಂದಿ ಮುಂದ ಅಡ್ಡಣಿಕೆ ಬಂದವು.ತಂಬಿಗಿ ಜಾಂಬು ಬಂದವು.ವಿಭೂತಿ ಕರಡಿಗೆ ಬಂತು ಮೂರೂ ಮಂದಿ ವಿಭೂತಿ ಹಚ್ಚಿಗೆಂಡು ಊಟಕ್ಕ ಕುಂತರು. ಸಿದ್ದರಾಮಪ್ಪ ಗೌಡ ಎದ್ದು ಹೋಗಿ ಸೊಸಿಗೆ ಏನs  ಹೇಳಿ ಬಂದ.ಊಟಕ್ಕ ನೀಡಲಿಕ್ಕೆ ಬಂದ ಸೊಸೆ ಗೌಡನ್ನ ಗಂಗಾಳಕ್ಕ ರೊಟ್ಟಿ ನೀಡಿದಳು ಪಲ್ಲೆ ನೀಡಿದಳು.ಬಟ್ಟಲಾದಾಗ ಮೊಸರು ತಂದಿಟ್ಟಳು.ಚನ್ನಪ್ಪ, ವಿರುಪಾಕ್ಷಿ ಎಲಿಗೆ ಏನು ನೀಡsವಳ್ಳು. ಪಾಪ!  ಇಬ್ಬರು ಒಬ್ಬರ ಮಾರಿ ಒಬ್ಬರ ನೋಡಿಕೆಳ್ಳಕ ಹತ್ಯಾರ !
ಸೊಸಿ ಮತ್ತ ಬಂದಳು ಇಬ್ಬರ ಗಂಗಾಳದಾಗ ಒಂದೊಂದು ಹಿಡಿ ಬೆಳ್ಳಿ ರೂಪಾಯಿ ನೀಡಿ ಹೋದಳು.ಇಬ್ಬರೂ ಕಕ್ಕಾಬಿಕ್ಕಿ!!  ಏನ ಮಾಡಬೇಕು ತೋಚವಲ್ದು. ಸಿದ್ದರಾಮಪ್ಪ ಗೌಡ  'ಆರಾಮ ಉಣರೆಪ್ಪ ನಾವಂದ್ರ ಜ್ವಾಳ ತಿನ್ನೋರ ಅದಕ್ಕ ಕಣದ ಸುತ್ತ ಬಿದ್ದಿದ್ದ ಕಾಳು ಆರಿಸಿ ಹಾಕತಿದ್ದೆ.ಭೂಮಿತಾಯಿ ಕೊಟ್ಟ ಕಾಳಿಗೆ ಬೆಲಿ ಹ್ಯಾಂಗ್ ಕಟ್ಟೋದು. ನೀವ ನನ್ನ ಜಿಪುಣ ಅಂದ್ರಿ ಬೆಳದದ್ದ ಉಂಬ ರೈತ ನಾನು.ನೀವು ಸಾವಕಾಶ ಬೆಳ್ಳಿ ರುಪಾಯಿ ತಿನ್ನರಿ ಅವೀಸು ಆದ ಮ್ಯಾಲೆ ಸೊಸಿಗೆ ಹೇಳೀನಿ.ನಿಮಗ ನೋಟಗಳನ್ನ ತಂದ ನೀಡತಾಳ್ ' ಇಬ್ಬರಿಗೆ ಬರಿ ಕೊಟ್ಟಂಗ ಆಯಿತು. ನಾವಾಡಿದ ಮಾತು ಗೌಡ ಕೇಳಿಲ್ಲ ಅಂತ  ಖುಷಿ ಅಗಿದ್ದಿವಿ. ಗೌಡ ಭಾರೀ ಹುಶಾರಿ ಕೇಳಿಸಿಗೆಂಡಾನ ಮತ್ತ ನಮಗ ಚಲೋ ಬುದ್ಧಿ ಕಲ್ಸಿದ.ಅಂತ ಸಾವರಸಿಗೆಂಡ ಎದ್ದು ಗೌಡನ ಪಾದಕ್ಕ ಅಡ್ಡ ಬಿದ್ದರು.ಅವರನ್ನ ಎಬ್ಬಿಸಿದ ಗೌಡ ' ಛೇ ಛೇ ಎಂತ ಮನಿಶ್ಯಾರಪಾ ನೀವು ಏಳ್ರಿ ಏಟ ಸಾವಕಾರ ಆದರೇನು, ಊರು ಆಳ ರಾಜಾ ಆದರೇನು ? ಎಲ್ಲಾರು ಅನ್ನಾನ ಉಣಾಬೇಕು.ಭೂಮಿ ತಾಯಿಗೆ  ಮರ್ಯಾದಿ ಕೊಡಬೇಕು' ಅಂತ ಹೇಳಿ ಬ್ಯಾರೆ ಗಂಗಾಳ ತರಿಸಿ ಹೊಟ್ಟೆ ತುಂಬಾ ಊಟ ಮಾಡಿಸಿ ಕಳಸಿದ.ಅದೇನು ಅಂತಾರಲ್ಲ ! ಏನೋ ಮಾಡಲಿಕ್ಕೆ ಹೋರ್ದ ಏನೋ ಆಗತದ್ ಅನ್ನೋ ಹಂಗ ಅವರಿಬ್ಬರೂ ಜೀವನದಾಗ ಮರೀಲಾರದ ಪಾಠ ಕಲಿತರು.

**ಗೋನವಾರ ಕಿಶನ್ ರಾವ್**

# ಚೆಂಗನ ಮೊದಲ ಎಲೆಕ್ಷನ್

"ಸಾ..."


ಸ್ಟಾಫ್ ರೂಮಿನಲ್ಲಿ ಬರೀತಾ ಕೂತಿದ್ದಾಗ ಚೆಂಗ ಬಂದಿದ್ದ

'ಬಾ ಚೆಂಗಾ...'

"ಆಮ್ಯಾಕೆ ಬಂದು ನೋಡು ಅಂದಿದ್ರಲ್ಲ  ಸಾ..."

'ಹೌದು ಚೆಂಗ. ಕೂತ್ಕೋ.'

"ಬೇಡ ಬಿಡಿ ಸಾ ನಾನಿಲ್ಲೇ ನಿಂತ್ಕೋತೀನಿ" ಅಂತ ಟೇಬಲ್‌ಗೆ ವಾರೆಯಾಗಿ ಒರಗಿಕೊಂಡು ನಿಂತ್ಕೊಂಡ. ಟೇಬಲ್ ಕುಂಯ್‌ಗುಟ್ಟಿತು.



ಅವನ ಭಂಗಿ ನೋಡಿದರೆ ಟೇಬಲ್ ಮೇಲೆ ಕುಳಿತುಕೊಳ್ಳುವ ಹಾಗೆ ಕಾಣಿಸಿತು. ನಾನೇ ಎದ್ದು ಪಕ್ಕದಲ್ಲಿದ್ದ ಕುರ್ಚಿಯನ್ನು ಎಳೆದು ನನ್ನ ಟೇಬಲ್ ಮುಂದೆ ಹಾಕಿದೆ. ಸದ್ಯ ಅದರ ಮೇಲೆ ಕುಳಿತ.

'ಈ ವರ್ಷ ಯೂನಿಯನ್‌ಗೆ ನಾನು ಸ್ಟಾಫ್ ಸೆಕ್ರೆಟ್ರಿ...'

"ಗೊತ್ತಾಯ್ತು ಸಾ..."

'ನಿನ್ನ ಸ್ಟೂಡೆಂಟ್ ಸೆಕ್ರೆಟರಿ ಮಾಡೋಣ ಅಂತ...'

"ನಾನೇ ಯಾಕೆ ಆಗ್ಬೇಕು ಸಾ..."

ಅದು ನಿಜ ಅನ್ನಿಸ್ತು. ಆದರೆ ಏನಾದರೂ ಹೇಳಬೇಕಲ್ಲ, ಹೇಳಿದೆ.

'ನೀ ನಮ್ಮೂರು ಹುಡುಗ ಅಲ್ವಾ? ಅದ್ಕೆ...'

*ನ್ಯೂಸ್*

"ಓ! ಹಾಗಾದ್ರೆ ನಿಮಗಿನ್ನೂ ನ್ಯೂಸ್ ಸಿಕ್ಕಿಲ್ಲ..."

'ಯಾವ ನ್ಯೂಸು? ನೀನು ನಮ್ಮೂರ ಹುಡುಗ ಅಲ್ವಾ?'

"ಹೌದು ಸಾ, ನಾ ನಿಮ್ಮೂರ್ ಉಡುಗ್ನೇ, ಆದ್ರೆ ಈ ಸಲಿ ನೀವು, ಅಂದ್ರೆ ಮೇಷ್ಟ್ರುಗೋಳು ಪ್ರತಿಸಲದ ಹಾಗೆ ಸ್ಟೂಡೆಂಟ್ ಸೆಕ್ರೆಟ್ರಿ ಆರ್ಸಿಕೊಳ್ಳೋ ಹಾಗಿಲ್ಲ ಸಾ..."

'ಯಾರು ಹೇಳಿದರು ಹಾಗಂತ!?'

"ನಾನೇ ಸಾ..."

ನನಗೆ ಅವನ ಮಾತು ಅರ್ಥವಾಗದೆ ಅವನ ಮುಖ ನೋಡಿದೆ.

"ನಾಳೆಯಿಂದ ಕಾಲೇಜಿನಲ್ಲಿ ಸ್ಟ್ರೈಕು ಸಾ...!"

'ಯಾಕೆ?'

"ಈ ಸಲಿಯಿಂದ ಸೆಕ್ರೆಟ್ರಿ ಎಲೆಕ್ಸನ್ ನಡಿ ಬೇಕು ಅಂತ ಸಾ..."

'ನೀನೇ ಲೀಡರ್ರಾ?'

"ಹೌದು ಸಾ..."

'ಎಲೆಕ್ಷನ್ ಮಾಡಿದ್ರೆ ನೀನೂ ನಿಂತ್ಕೋತಿಯ?'

"ನಿಂತ್ಕೊಳ್ದೆ ಬುದ್ತೀನಾ ಸಾ..."

'ಈಗ ನಿಂತ್ಕೊಳ್ಳದೆ ಸೆಕ್ರೆಟ್ರಿ ಆಗ್ತೀಯಲ್ಲಪ್ಪ! ಇನ್ನು ಎಲೆಕ್ಷನ್ ಯಾಕೆ?'

'ಎಲೆಕ್ಸನಲ್ಲಿ ಗೆದೀದೇ ಸೆಕ್ರೆಟ್ರಿ ಆದ್ರೆ ತ್ರಿಲ್ ಏನಿರುತ್ತೆ ಸಾ...?"

ಅವನು ನನ್ನನ್ನು ನೋಡ್ದ.

ನಾನು ಸೂರು ನೋಡ್ದೆ.

'ಅದ್ಸರೀ, ನಿನ್ನೆದ್ರು ಎಲೆಕ್ಷನ್‌ಗೆ ನಿಲ್ಲೋ ಭೂಪರು ಯಾರಿದಾರಪ್ಪಾ!?'

"ಆಗಲೇ ಇಬ್ಬರಿಗೆ ಒದ್ದು ಒಪ್ಪಿಸಿದೀನಿ ಸಾ...!"

ಒದೆಸಿಕೊಂಡವರ ಬಗ್ಗೆ ಅಯ್ಯೋ ಪಾಪ ಅನ್ನಿಸ್ತು.

'ಸರಿ ಹಾಗಾದರೆ, ಪ್ರಿನ್ಸಿಪಾಲ್ ಜೊತೆ ಮಾತನಾಡಿ ಎಲೆಕ್ಷನ್ ಇಡಿಸ್ತೀನಿ. ಸ್ಟ್ರೈಕ್ ಗಿಯ್ಕ್ ಎಲ್ಲ ಬೇಡ.'

*ಸ್ಟ್ರೈಕ್ ಬೇಕು!*

"ಸಾ... ಅದೊಂದ್ಕೆಲ್ಸ ಮಾಡ್ಬೇಡಿ..."

'ಅದ್ಯಾಕ್ ಚೆಂಗ, ಸೆಕ್ರೆಟ್ರಿ ಆಗು ಅಂದರೆ ಎಲೆಕ್ಷನ್ ಬೇಕು ಅಂತಿ; ಎಲೆಕ್ಷನ್ ಮಾಡ್ಸೋಣ ಅಂದರೆ ಬೇಡ ಅಂತಿ.'

"ಹಾಗಲ್ಲ ಸಾ... ನಾವ್ ಸ್ಟೇಕ್ ಮಾಡಿದ್ಮೇಲೆ ಎಲೆಕ್ಸನ್ ಮಾಡಗ್ಬೇಕು ಸಾ..."

'ಏನೋ ನಿನ್ನ ಲಾಜಿಕ್ಕೇ ನನಗೆ ಅರ್ಥ ಆಗ್ತಾ ಇಲ್ಲ ಚೆಂಗ! ನೋಡು ನಮ್ಮದು ಹೊಸ ಕಾಲೇಜು, ಇಲ್ಲಿವರೆಗೆ ಎಲೆಕ್ಷನ್ ನಡೀತಿರಲಿಲ್ಲ ಈ ವರ್ಷದಿಂದ ಎಲೆಕ್ಷನ್ ಬೇಕಾದರೆ ಮಾಡ್ಸೋಣ. ಆದರೆ ಇಲ್ಲೀವರ್ಗೂ ನಮ್ಮ ಕಾಲೇಜಿನಲ್ಲಿ ಸ್ಟ್ರೈಕ್ ಆಗಿಲ್ಲ ಚೆಂಗ. ಸ್ಟ್ರೈಕ್ ಆಗೋದು ನನಗೆ ಇಷ್ಟ ಇಲ್ಲ.' - ನಾನು ಉದ್ವೇಗದಿಂದ ಹೇಳಿದೆ.

"ಸಾ..., ನೀವ್ನಮ್ಮೂರ್ ಉಡ್ಗ ಅಲ್ವಾ ಸಾ..."

ಎಲಾ ಇವನಾ! ನನ್ನ ಪ್ರಶ್ನೆನ ನನಗೇ ತಿರುಗಿಸುತ್ತಾನಲ್ಲ ಅಂದ್ಕೊಂಡು,

'ಅದಕ್ಕೂ ಸ್ಟ್ರೈಕ್‌ಗೂ ಏನ್ ಸಂಬಂಧ ಚೆಂಗಾ?'

"ನಾನ್ಹೇಳ್ತೀನಿ ಸಾ... ನೀವ್ನಮ್ಮೂರ್ ಉಡ್ಗ ಹೌದೋ ಅಲ್ವೋ ಹೇಳಿ ಸಾ... ?"

'ಹೌದು'

"ನಾನು ನಿಮ್ಮೂರ್ನೋನೆ ಅಂತ ಆಗ್ಲೇ ಹೇಳಿದ್ನಲ್ಲಾ ಸಾ..."

'ಹೌದು'

"ನಿಮ್ಮೂರ್ಹುಡ್ಗ ಮುಂದ್ಬರಬೇಕು, ಜೀವನ್ದಾಗೆ ಸುಕವಾಗಿರ್ಬೇಕು ಅಂತ ನಿಮಗಿಷ್ಟ ಐತೋ ಇಲ್ವೋ ಸಾ...?"

'ಅಲ್ಲಯ್ಯ, ಇದಕ್ಕೂ ಸ್ಟ್ರೈಕ್‌ಗೂ ಎಲ್ಲಿಂದೆಲ್ಲಿಗಯ್ಯಾ ಸಂಬಂಧ?'

"ನಾನೇಳ್ತೀನಿ ಅಂದ್ನಲ್ಲಾ ಸಾ... ಇದನ್ನ ಇನ್ಯಾರ್ಗೂ ಹೇಳಲ್ಲ ಅಂತ ಭಾಸೆ ಕೊಡಿ ಸಾ..."

ನನಗೇಕೋ ಅನುಮಾನ ಶುರುವಾಯಿತು. ಇವನು ಕಾಲೇಜಿಗೆ ಬೆಂಕಿ ಗಿಂಕಿ ಇಡ್ತಾನೋ ಅಥವಾ ಇನ್ನೇನು ಕಿತಾಪತಿ ಮಾಡ್ತಾನೋ ಅಂತ.

'ವಿಚಾರ ಏನು ಅಂತ ತಿಳಿದೇ ಭಾಷೇನೂ ಕೊಡೋಲ್ಲ; ನೀನೇನಾದರೂ ಕಾಲೇಜಿಗೆ ಕೇಡು ಬಗೆದರೆ ಸುಮ್ಮನೇನು ಇರೋದಿಲ್ಲ.' ಕೋಪದಿಂದ ಹೇಳಿದೆ.

"ಐ..., ಒಳ್ಳೆ ಆಸಾಮಿ ಸಾ... ನೀವು! ನಾ ಯಾಕೆ ಇದ್ಯಾ ಕೊಡೋ ಕಾಲೇಜಿಗೆ ಕೇಡ್ಬಗೀಲಿ!? ಸರಿ ಸಾ..., ಹೇಳ್ತೀನಿ ಕೇಳಿ. ನಮ್ಪಕ್ಕದೂರಿನ ಸಾವುಕಾರ್ರು ಗೊತ್ತಾ ಸಾ... ?"

'ಆ ಕಡೆಗೆಲ್ಲ ಅವ್ರು ದೊಡ್ಡ ಸಾವ್ಕಾರ್ರು ...
ಅವ್ರು ಗೊತ್ತಿರುಲ್ವಾ?'

*ಸಾವ್ಕಾರ ಮಗಳು*

"ಅವ್ರೂ ನಮ್ಮೋರೇ ಸಾ... ಅವ್ರ ಒಬ್ಬೇ ಮಗ್ಳು ಈ ಸಲಿ ನಮ್ಕಾಲೇಜ್ ಸೇರವ್ಳೆ ಸಾ..."
ಚೆಂಗನ ಮೂತಿ ಕೆಂಪಾಯ್ತು.

'ಸರಿ...'
"ಅವಳ್ಗೆ ನಾ ನಿಜವಾಗ್ಲೂ ಲೀರ್ಡರೂ ಅಂತ ತೋರಿಸ್ಬೇಕು ಸಾ... ಮುಂದಿನ ತಿಂಗ್ಳು ಅವ್ರ ಮನೆಯೋರ್ ಕೈಲಿ ಮಾತುಕತೆ ಆಡೋಕೆ ನಮ್ಮೋರು ಹೋಗ್ತಾರೆ ಸಾ..., ಸಾ... ನನ್ ಜೀವ್ನ ಕನ್ಸು ಎಲ್ಲಾ ನಿಮ್ಮ ಕೈಯಲ್ಲಿದೆ ಸಾ..."
ಒಂದೇ ಉಸಿರಿಗೆ ಚೆಂಗ ಹೇಳಿದಾಗ ಅವನ ಲಾಜಿಕ್ಕು ಸ್ಪಷ್ಟವಾಗಿತ್ತು.
ಅವನ ದೂರದೃಷ್ಟಿಗೆ, ಅವನ ವ್ಯವಹಾರ ಜ್ಞಾನಕ್ಕೆ ಬೆರಗಾದೆ.
'ಚೆಂಗ ನಿನಗೆ ಡಿಗ್ರಿ ಯಾಕೋ?'
ಅವನು ಜೋರಾಗಿ ನಕ್ಕುಬಿಟ್ಟ.
"ಡಿಗ್ರಿ ಯಾರ್ಗೆ ಬೇಕು ಸಾ...!"

*ನನ್ನ ಭಯ*
'ಅದೇ ಚೆಂಗ. ಅಷ್ಟೊಂದು ಡಿಗ್ರಿ ತೊಗೊಂಡಿರೋ ನಮ್ಗಿಂತಾ ಹತ್ತರಷ್ಟು ಜಾಸ್ತಿ ವ್ಯವಹಾರ ಜ್ಞಾನ ಇದೆ ನಿಂಗೆ. ಇನ್ನು ಡಿಗ್ರಿ ಯಾಕೆ ಅಂತ... ಆಲ್ ದ ಬೆಸ್ಟ್... ಇನ್ನೇನಾದ್ರೂ ಸಹಾಯ ಬೇಕಾದ್ರೆ ಕೇಳು. ಕೈಲಾದರೆ ಮಾಡೋಣ'.
ಪ್ರಪಂಚ ಗೆದ್ದೋನು ಹಾಗೆ ಖುಷಿಯಿಂದ ಮೇಲೆದ್ದ.
"ತ್ಯಾಂಕ್ಸ್ ಸಾ..., ನಾಳೆ ಸ್ಟ್ರೇಕ್ ಆದ್ಮೇಲೆ ಬಂದು ನೋಡ್ತೀನಿ ಸಾ..." ಅಂತ ಹೇಳಿ ಸ್ಟಾಪ್ ರೂಮಿಂದ ಆಚೆ ಹೋದ.
ನಮ್ಮೂರ ಹುಡುಗ ಚೆಂಗನ ಯುವಲೀಲೆಗಳೆಲ್ಲ ಜ್ಞಾಪಕಕ್ಕೆ ಬಂದವು. ಆಟಕ್ಕೇ ಆಗಲಿ ಊರಿನ ಕೆಲಸಕ್ಕೇ ಆಗಲಿ ಅವನು ಗುಂಪು ಕಟ್ಟುತ್ತಿದ್ದ ರೀತಿ, ತನಗೆ ಬೇಡದವರನ್ನು ನಿವಾರಿಸಿಕೊಳ್ಳುತ್ತಿದ್ದ ರೀತಿ ಎಲ್ಲಾ ನೆನಪಿಗೆ ಬಂದು ಮೈ ಜುಂ ಅಂತು. ಈ ವರ್ಷ ಯಾಕಾದ್ರೂ ಸ್ಟಾಫ್ ಸೆಕ್ರೆಟ್ರಿ ಆದ್ನೋ ಅನ್ನಿಸ್ತು. ಹಾಗೆ ನನ್ನ ಕಣ್ಣ ಮುಂದೆ ಅವನು ಸಾವ್ಕಾರ್ರ ಮಗಳ್ನ ಮದುವೆ ಆಗೋದು, ಎಂಎಲ್ಎ ಆಗೋದು, ಮಂತ್ರಿ ಆಗೋದು... ಎಲ್ಲಾ ಚಿತ್ರಗಳೂ ಬಂದು ತೇಲಿಹೋದವು.

**- ಜಿ ವಿ ಅರುಣ**

## ***ಕವನ-೧ ಗೃಹಿಣಿಯ ಕೈಚಳಕ***

ನೋಡಬೇಕು ಗೃಹಿಣಿಯ ಕೈಚಳಕ
ಬೇಸಿಗೆಯಲ್ಲಿ ಆಕೆ ಹಾಕುವ ಬಾಳಕ
ಊಟದ ಜೊತೆಗೆ ಮೈ-ಮನವೆಲ್ಲ ಪುಳಕ

ಬಿಸಿಲಿನ ಝಳಕ್ಕೆ ಆಕೆ ಹಾಕುವ ಹಪ್ಪಳ
ಒಣಗಿ ಹೋಗುವುದು ಸ್ವಲ್ಪವೂ ಮಾಡದೆ ಸಪ್ಪಳ
ಅದಕಾಗಿ ಯಾರೂ ನೀಡರು ಆಕೆಗೆ ಸಂಬಳ

ಮಾವಿನಕಾಯಿ, ಅಮ್ಟೆಕಾಯಿ. ನಿಂಬೆಕಾಯಿ
ಹದವಾಗಿ ಅಕೆ ಮಾಡುವ ಉಪ್ಪಿನಾ ಕಾಯಿ
ಚಪ್ಪರಿಸಲು ಕಾದಿದೆ ಮನೆಯವರೆಲ್ಲರ ಬಾಯಿ

ಬೆರಳೆಣಿಸುವಷ್ಟೇನೂ ಮಾಡಳು ಆಕೆ ಅರಳು ಸಂಡಿಗೆ
ವರ್ಷಕೆ ಬೇಕಾಗುವಷ್ಟು ಮಾಡಿ ತುಂಬುವಳು ಸ್ಟೀಲ್ ಡಬ್ಬಿಗೆ
ಕರಿದು ಉಣ ಬಡಿಸುವಳು ಆಕೆ ಮನೆ ಮಂದಿಗೆ

ಹುಳಿಯನ್ನ ಮೊಸರನ್ನ ಯಾವುದೇ ಇರಲಿ
ಹಪ್ಪಳ, ಸಂಡಿಗೆ ಜೊತೆ-ಜೊತೆಗೆ ಇರಲಿ
ಬಾಳಕಾ ಮೆಣಸಿನ ಕಾಯಿ ರುಚಿಗಾಗಿ ಇರಲಿ

ಆಕೆ ಮಾಡಿದ ಹಪ್ಪಳ ಸಂಡಿಗೆ
ಊಟದ ಜೊತೆಗೆ ಬಾಯಿ ರುಚಿಗೆ
ಚೆನ್ನಾಗಿತ್ತೆಂದು ನೀಡದಿರಬೇಡಿ ಮೆಚ್ಚುಗೆ

-ಎಂಜಿವಿ

## *ಕವನ-೨ - ಹಿರಿಯರ ದುಗುಡ*

ಸರ್ಕಾರವೆ ಹೇಳಿದೆ
ಅರವತ್ತು ತುಂಬಿದವರೆಲ್ಲರೂ
ಹಿರಿಯ ನಾಗರಿಕರೆಂದು
ಸರ್ಕಾರವೆ ನೀಡಿದೆ
ಕೆಲವು ಸೌಲಭ್ಯ ಸವಲತ್ತುಗಳನು
ಬಸ್ಸು-ರೈಲುಗಳಲ್ಲಿ ದರದ ರಿಯಾಯಿತಿ
ಆಸನದ ವ್ಯವಸ್ಥೆಯಲ್ಲಿ
ಹಿರಿಯರಿಗೆ ಮೀಸಲಾತಿ
ಹೀಗೆ ಹಲವು ಹತ್ತು
    ಇವು ಯಾವುದೂ ಶಾಶ್ವತವಲ್ಲ
    ಕರೋನಾ ಮಾರಿ ವಕ್ರಹಿಸಿಹಳಲ್ಲ
    ಹಲವಾರು ಬದಲಾವಣೆ ತಂದಿದೆಯಲ್ಲ
    ದೇವಸ್ಥಾನಗಳಿಗೆ ಹಿರಿಯರು ಹೋಗಲಾಗದು
    ಮಾಲ್, ರೆಸ್ಟೋರೆಂಟ್, ಉದ್ಯಾನವನಗಳಿಗೆ
    ಹಿರಿಯರಿಗಿಲ್ಲ ಪ್ರವೇಶ
    ಮದುವೆ, ಮುಂಜಿ, ಶುಭ ಸಮಾರಂಭಗಳಿಗೆ
    ಹಿರಿಯರು ಹೋಗುವ ಹಾಗಿಲ್ಲ
    ಮನೆ ಬಿಟ್ಟು ಹೊರಗೆ ಹೋಗಬಾರದು
ಆ ಕಾಲವೊಂದಿತ್ತು
ಗುರು-ಹಿರಿಯರು ಆಗಮಿಸಿ
ವಧೂವರರನ್ನು ಆಶೀರ್ವದಿಸಿ
ನಮ್ಮ ಮನಸ್ಸಂತೋಷಪಡಿಸಿ
ಎಂಬ ಬಿನ್ನಹವಿರುತ್ತಿತ್ತು ಲಗ್ನ ಪತ್ರಿಕೆಯಲ್ಲಿ
ಇನ್ನು ಮುಂದೆ ಅಚ್ಚು ಹಾಕಿಸುವರೇನೊ
ಅರವತ್ತಾದವರು ಬರಬೇಡಿ
ಮನೆಯಿಂದಲೇ ಆಶೀರ್ವಾದ ಮಾಡಿಬಿಡಿ ಎಂದು
    ಷಷ್ಟಬ್ಧಿ ಮಾಡಿಕೊಂಡುಬಿಡಿ ಆಡಂಬರವಿಲ್ಲದಂತೆ
    ಭೀಮರತಿ ಶಾಂತಿ, ಚಂದ್ರ ದರ್ಶನ ಶಾಂತಿ
    ಬಿಡಿ ಇನ್ನು ಇದರ ಭ್ರಾಂತಿ
    ಇದೇ ಅಲ್ಲವೆ ಕರೋನಾ ತಂದ ಕ್ರಾಂತಿ
ಶುಭ ಸಮಾರಂಭಗಳಿಗೆ

ಐವತ್ತಕ್ಕಿಂತ ಹೆಚ್ಚು ಮಂದಿ ಸೇರುವ ಹಾಗಿಲ್ಲ
ಮರಣಿಸಿದ ಮೇಲಿನ ಯಾತ್ರೆಗೆ
ನಾಲ್ಕು ಮಂದಿಯ ಜೊತೆಗೆ ಹದಿನಾರು ಮಂದಿ ಸಾಕಲ್ಲ

**-ಎಮ್.ಜಿ.ವೆಂಕಟೇಶ ಮೂರ್ತಿ**

# ಕನ್ನಡಿ - ಕಿರು ನಾಟಕ

ಇದರ ಮೂಲ ಉದ್ದೇಶ :- ಪ್ರತಿ ಹೆಣ್ಣು ತಾನು ಏನೆ ಆಗಿರಲಿ, ಕೂಲಿ ಅಥವಾ ಫಾರೆನ್ ಅಫ್ಫೇರ್ಸ್ ಹೆಡ್ ,ಹೋಂ ಮೇರ್ಕರ್ , ಆರ್ಟಿಸ್ಟ್ ,ಡಾರ್ಕ್ಟರ್, ಎಂಜಿನಿರ್ಯರ್ , ಬ್ಯಾಂರ್ಕರ್ , ಯಾ ರಾಜಕಾರಣಿ ಯಾವ ಕ್ಷೇತ್ರದಲ್ಲೇ ಇರಲಿ ತನ್ನನ್ನು ತಾನು ಅರಿಯಲಿ, ತನ್ನನ್ನು ತಾನು ಗೌರವಿಸುವದನ್ನು ಕಲಿಯಲಿ ಹೀಗಾದಾಗ ಮಾತ್ರ ಅವರಲ್ಲಿರುವ ಸುಪ್ತ ಶಕ್ತಿ ನೂರ್ಮಡಿಯಾಗುವದು.

ನಾಟಕದ ಹಿನ್ನೆಲೆ :- ಇದೊಂದು ಮೂಲ ಸೌಲಭ್ಯಗಳಿಂದ ವಂಚಿತವಾದ ಕುಗ್ರಾಮ. ಸ್ವಾತಂತ್ರ ಬಂದು 73 ವರ್ಷ ಕಳೆದರೂ ಇಲ್ಲಿಯ ಪ್ರತಿಯೊಂದು ಹೆಣ್ಣು ಕುಡಿಯುವ ನೀರಿಗಾಗಿ 2-3 ಮೈಲಿ ದೂರ ನೆಡೆದು ನೀರು ತರಬೇಕು. ಬಿಸಿಲು,ಮಳೆ , ಚಳಿಯಲ್ಲಿ ಬೇಯಬೇಕು.
ಅದೊಂದು ದಿನ ಇಳಿ ಸಂಜೆಯಲ್ಲಿ ಆ ಹಳ್ಳಿಯ 5-6 ಹೆಣ್ಣು ಮಕ್ಕಳು ಒಟ್ಟಾಗಿ ಸಿಹಿ ನೀರು ತರಲು ಹೊರಟಿದ್ದಾರೆ. ಅವರುಗಳ ಹೆಸರು ಗಿರಿಜಾ, ಮಲ್ಲವ್ವ,ಪಾರ್ವತಕ್ಕ , ಶಾಂತವ್ವ ಮತ್ತು ಸಾವಿತ್ರಿ.

ವೇದಿಕೆಯ ಮೇಲೆ :- 5 ಜನ ಹೆಂಗಳೆಯರು ಸಾಧಾರಣ ನೂಲಿನ ಸೀರೆಯುಟ್ಟು , ತಲೆತುಂಬಾ ಸೆರಗು ಹೊದ್ದು, ಕೈತುಂಬಾ ಬಳೆ ಇಟ್ಟು, ಕಂಕುಳಲ್ಲೊಂದು , ತಲೆಯ ಮೇಲೊಂದು ಕೊಡ ಇಟ್ಟುಕೊಂಡು
ಒಟ್ಟಾಗಿ ಸಿಹಿ ನೀರು ತರಲು ಹೊರಟ್ಟಿದ್ದಾರೆ.

ದಾರಿಯಲ್ಲಿ .........
ಗಿರಿಜಾ:- ಏನ್ರವ್ವಾ....... ಎಲ್ಲರ ಮನೆ ಸಮಾಚಾರ? ಹೊಟ್ಟೆ ತುಂಬಾ ಊಟ ಆಯ್ತಾ?
ಮಲ್ಲವ್ವ:- ಏನ್ ಸಮಾಚರನೋ ಏನೋ , ಇಷ್ಟು ದಿನ ಆದ್ರೂ, ೨ ಮೈಲಿ ಹೋಗಿ ನೀರು ತಂದು ಅಡಿಗೆ ಮಾಡೋದು ತಪ್ಪಲಿಲ್ಲ ನಮ್ಮ ಹಣೆ ಬರಹಕ್ಕೆ .

ಅಷ್ಟರಲ್ಲಿ ಪರ್ವತಕ್ಕನ ಮೊಬೈಲ್ ಫೋನ್ ರಿಂಗಣಿಸುತ್ತದೆ .............

ಶಾಂತವ್ವ:- ಏನ್ ಪಾರ್ವತಕ್ಕ ನಿನ್ನ ಹತ್ರ ಮೊಬೈಲ್ ಫೋನ ಇದೆಯಾ? ಅದೃಷ್ಟವಂತೆ ಬಿಡವ್ವಾ .

ಗಿರಿಜಾ:- ಪಾರ್ವತಕ್ಕ ಜಾಣತನ ಮಾಡಿ ಮಗಳನ್ನು ಓದಿಸಿದ್ಲು, ಅದಕ್ಕ ಸರಿಯಾಗಿ ಮಗಳು ನೀಲಾಕೂಡಾ ಚೆನ್ನಾಗಿ ಓದಿ ದೇಶದ ದೊಡ್ಡ ಬ್ಯಾಂಕ್ , ಭಾರತೀಯ ಸ್ಟೇಟ್ ಬ್ಯಾಂಕ ನಲ್ಲಿ ಆಫೀರ್ಸರ್ .
ಮಲ್ಲವ್ವ:- ಸ್ಟೇಟ್ ಬ್ಯಾಂಕ್ನಲ್ಲಿ ಅಧಿಕಾರಿ ಆದ್ರ ಕೈ ತುಂಬಾ ಸಂಬಳ , ಅನೇಕ

ಸವಲತ್ತುಗಳಿವೆಯಂತ್ರವ್ವ , ಅದಕಾ..... ಮಗಳು ತಾಯಿಗೂ ಮೊಬೈಲ್ ಫೋನ್ ಕೊಡಿಸ್ಯಾಳ.

ಪಾರ್ವತೆಕ್ಕ :- ಹೇ....ಸುಮ್ಮನಿರವ್ವ, ನೀವ್ ಇಷ್ಟು ಹೊಗಳಿ ಮಾತಾಡಕಹತ್ತಿದಮ್ಯಾಲ, ನೀಲಾಮಾತಾಡದ ಕೇಳಲಿಲ್ಲ , ಫೋನ್ ಕಟ್ ಆಯ್ತು ನೋಡು .

ಮತ್ತೆ ಮೊಬೈಲ್ ಫೋನ್ ರಿಂಗಣಿಸುತ್ತದೆ ................

ಎಲ್ಲರೂ ಒಕ್ಕೊರಲಿನಿಂದ ಮತ್ ಬಂತು ........ಮತ್ ಬಂತು , ಎಲ್ಲಾರೂ ಸುಮ್ಮನಿರಿ .

ಪಾರ್ವತೆಕ್ಕ :- ಹೆಲೋ..... ಏನ್ ನೀಲವ್ವಾ, ಹಾಂ !! ಪಂಕ್ಷನ್ ಮಾಡ್ಯಾರ , ನಿಮ್ಮ ಬ್ಯಾಂಕಿನ್ಯಾಗ

.... ಏನ್ ಪಂಕ್ಷನ್ ? ಆ....ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮಾಡ್ಯಾರ?

ನಿನಗ ಮೊದಲ ಬಹುಮಾನ ಬಂತಾ? ಯಾತಕ್ಕಬೆ ತಾಯಿ ? ಭಾಷಣ ಸ್ಪರ್ಧೆದಾಗ

.......ಹಾಂ!! "ಉದ್ಯೋಗಸ್ಥ ಮಹಿಳೆ ಸಂಸಾರ ಸಮರ್ಥವಾಗಿ ನೆಡೆಸಬಲ್ಲಳೇ ?"

ಅಂತಾನಾ?....... ಏನೇನ್ ಹೇಳಿದೆವ್ವ ತಾಯಿ? ಆ !! ಹಂಗ .......ಹೇಳಿದ್ಯಾ?

ಭೇಷ್! ಭೇಷ್! ಬಿಡ್ ತಾಯಿ , ಸತ್ಯನ ಹೇಳಿದಿ, ಚಲೋನ ಹೇಳಿದಿ, ಬಾಳ

ಸಂತೋಷ ಆಯ್ತವ್ವ ಕೇಳಿ, ಏನಂದಿ ಮೆಡಲ್ ಕೊಡಾಕ ಕರದ್ರ ನಿನ್ನ ......ಆಯ್ತವ್ವ

ಮತ್ತ ಮಾತಾಡೋಣ. ಮೆಡೆಲ್ ತಗಳ್ಳೋ ಫೋಟೋ ಹೊಡಿಸಿಕೊಳ್ಳವ್ವ ನಾವೆಲ್ಲ ನೋಡಾಕ ಬರ್ತತಿ , ಫೋನ್ ಇಡ್ತೀನಿ ಆತ .......

ಎಲ್ಲಾ ಹೆಂಗಳೆಯರು ಪಾರ್ವತಕ್ಕನ ಮುತ್ತಿಗೆ ಹಾಕಿ "ಪಾರ್ವತಕ್ಕ ನೀಲಾಗ ಯದಕ್ ಮೆಡೆಲ್ ಬಂತಂತ?"

ಪಾರ್ವತಕ್ಕ :- ಹಿಗ್ಗಿನಿಂದ , ನೋಡ್ರಿ ಎಲ್ಲಾರು ಕಿವಿಗೊಟ್ಟು ಕೇಳ್ರಿ . ನಮ್ಮ ನೀಲಾ ಇದ್ದ ಶಹರದಾಗ ಎಲ್ಲಾ ಸಂಘ ಸಂಸ್ಥೆಗಳು ಸೇರಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಿದವಂತವ್ವಾ , ಅದಕ್ಕಂತ ಒಂದು ಭಾಷಣ ಸ್ಪರ್ಧೆ ಇಟ್ಟಿದ್ವಂತ.

ಮಲ್ಲವ್ವ:-  ಭಾಷಣ ಸ್ಪರ್ಧೆಯ ವಿಷಯ ಏನ್ ಪಾರಕ್ಕ?

ಪಾರ್ವತಕ್ಕ:- ಅಲ್ಲ, ಮಲ್ಲವ್ವ ಹೋಗಿ ಹೋಗಿ ಭಾಷಣಕ್ಕ ಏನ್ ವಿಷಯ ಗೊತ್ತೇನ್ , 'ಉದ್ಯೋಗಸ್ಥ
ಮಹಿಳೆ ಸಂಸಾರವನ್ನು ಸಮರ್ಥವಾಗಿ ನೆಡಸಬಲ್ಲಳೇ?'

ಗಿರಿಜಾ:-       ಹೋಗಲಿ ಬಿಡು ಪಾರಕ್ಕ ಉದ್ಯೋಗಸ್ಥ ಮಹಿಳೆಯರ ವಿಷಯ ನಮಗ್ಯಾಕ?
ನಮಗ
ಸಂಬಂಧ ಸೂತ್ರ ಇಲ್ಲದ್ದು.

ಪಾರ್ವತಕ್ಕ:- ಅಲ್ಲ್, ಗಿರಿಜಾ  ನಾನೂ ವಿಷಯ ಕೇಳಿದ ತಕ್ಷಣ ನಿನ್ನಂಗ: ಅಂದುಕೊಂಡೆ , ಆದರ
ನಮ್ಮ ನೀಲಾ ಬಾಳ ವಿಚಾರವಂತಿ, ಜಾಣೆ, ಅದಕ ತನ್ನ ಭಾಷಣದ ಸುರುವಿಗೆ
ಹೀಗ
ಹೇಳಿದ್ಳಂತ  " ಇಲ್ಲಿ ಸೇರಿರೋ ಎಷ್ಟೋ ಜನರ ತಾಯಂದ್ರು ಹೊಲದಲ್ಲಿ ,
ಮನೆಯಲ್ಲಿ
ದುಡಿಯುವವರು,ಅವರೆಲ್ಲಾ ಉದ್ಯೋಗಸ್ಥ ಮಹಿಳೆಯರಲ್ಲೇನು? ತಿಂಗಳಿಗೊಮ್ಮೆ
ಸಂಬಳ ತರೋರ್ನ ಯಾಕ ಉದ್ಯೋಗಸ್ಥ ಮಹಿಳೆ ಅನ್ನಬೇಕು?  ನಮ್ಮ ತಾಯಿ ,
ಚಿಗವ್ವ , ದೊಡ್ಡವ್ವಗಳೆಲ್ಲಾ ಕೂಡು ಕುಟುಂಬದಲ್ಲಿ ಇದ್ದುಕೊಂಡು , ಅತ್ತೆ-ಮಾವ,
ಅತ್ತಿಗೆ-ನಾದಿನಿಯರು, ಭಾವ-ಮೈದುರ್ನ ಚಾಕರಿ ಮಾಡುತ್ತಾ, ಯಾವ
ಆಧುನಿಕ
ಸೌಲಭ್ಯ , ಸಲಕರಣೆ ಇಲ್ಲದೆ, ದೊಡ್ಡ ಸಂಸಾರ ನೆಡಿಸಿಕೊಂಡು,  ವ್ಯಾಳ್ಯಾ ಮಿತಿ
ಇಲ್ಲದ
ದುಡಿದಿದ್ದು ದುಡಿಮೆ ಅಲ್ಲೇನ್?  ಅನ್ದಳಂತ.

ಶಾಂತವ್ವ:-   ತಕ್ಷಣ ಚಪ್ಪಾಳೆ ಹೊಡೆದು ,  ಅಲ್ಲ ಪಾರಕ್ಕ , ನಮ್ಮ ನೀಲಾ ಬರೋಬ್ಬರಿ ಹೇಳ್ಯಾಳ
ನೋಡ್,  ನಿನ್ನ ಜೊತೆ ಸಣ್ಣವ್ವ,ದೊಡ್ಡವ್ವ, ಅಂತ ಹೇಳಿ , ನಮ್ಮೆಲ್ಲರಿಗೂ ನಮ್ಮ ಬಗ್ಗೆ
ಹೆಮ್ಮೆ              ಪಟ್ಟುಕೊಳ್ಳೊಹಂಗ್ ಮಾಡ್ಯಾಳ.

ಸಾವಿತ್ರಿ:-      ಅಲ್ಲ್ , ಈ ನಮ್ಮ ನೀಲಾ ಹೇಳಿದಮ್ಯಾಲ ಗೊತ್ತಾಯ್ತು ನೋಡು,ನಾವು
ಉದ್ಯೋಗಸ್ಥ
ಮಹಿಳೆಯರು, ನಮಗೂ ನಮ್ಮದ್ ಬೆಲೆ ಅದ ಅನ್ನೋದು.

ಪಾರ್ವತಕ್ಕ:-ಅಷ್ಟ ಅಲ್ಲ್ ಸಾವಿತ್ರಿ,ಇನ್ನೂ ಐತಿ ಕೇಳ್, ಅಂತಾ ತಾಯಿಗೋಲ್ ಮಕ್ಕಳಾದ ನಾವು

ಇವತ್ತು ಈ ವೇದಿಕೆಮ್ಯಾಲ ನಿಂತು,ಆಕಿ ಸಮರ್ಥವಾಗಿ ಸಂಸಾರ ಸಾಗಿಸಿದಳೋ ಇಲ್ಲವೋ
ಅಂತಾ ಇಲ್ಲಿ ವಾದ ವಿವಾದ ಮಾಡಿ, ಅಕೀಗೆನ್ ಸರ್ಟಿಫಿಕೇಟ್ ಕೊಡಾಕ ನಿಂತೇವಿ
ಅಂದ್ಮ್ಯಾಲ ನಮ್ಮನ್ನ ಈ ಹಂತಕ್ಕೆ ತಂದ ನನ್ನ ತಾಯಿ ಸಮರ್ಥವಾಗಿ ಸಂಸಾರ
ತೂಗಿಸ್ಯಾಳ ಅಂತಾ ಆತೊ ಇಲ್ಲೋ , ಅಂತಾ ಬಲವಾದ್ ಪ್ರಶ್ನೆನೇನ ಹಾಕ್ಯಾಳ . ಇವಳ
ಮಾತ ಕೇಳಿ ಅಲ್ಲಿ ಜಡ್ಜ ಮಾಡಾಕ ಕುಂತ್ ಬಾಯರೆಲ್ಲ ಭಲೇ,ಭಲೇ, ಅಂತಾ ತಲೀ
ದೂಗಿದರಂತ.

ಶಾಂತವ್ವ,ಮಲ್ಲವ್ವ,ಗಿರಿಜಾ,ಸಾವಿತ್ರಿ ಎಲ್ಲರೂ ಭಲೇ,ಭಲೇ, ನೀಲಾ, ಖರೇನ ಹೇಳ್ಯಾಳ
ಅಂತಾ ಸಂತೋಷ ವ್ಯಕ್ತ ಪಡಿಸುತ್ತಾರೆ.

ಪಾರ್ವತಕ್ಕ:- ಇಷ್ಟ ಅಲ್ಲದ , ರಾಜಕೀಯ,ಕಲೆ,ಶಿಕ್ಷಣ,ಸೇನೆ,ಎಲ್ಲಾ ಕ್ಷೇತ್ರದಲ್ಲಿ ಮಹತ್ತರ ಸಾಧನೆ
ಮಾಡಿದ ಹೆಣ್ಣು ಮಕ್ಕಳನ್ನ ಉಧಾರಣೆ ಕೊಟ್ಟು , ಅವರು ಸಂಸಾರದಲ್ಲೂ ಹೇಗೆ
ಸಮತೋಲನ ಕಾಯ್ದರ ಅಂತಾ ಎಳೆ ಎಳೆಯಾಗಿ ಹೇಳಿ ಮೊದಲ ಬಹುಮಾನ
ಪಡಕೊಂಡಳಾ.

ಮಲ್ಲವ್ವ:- ಬಿಡು ಪಾರತಕ್ಕ, ನೀಲಾ ಹೇಳ್ಯಾಳ ಅಂತಾ ನಾವು ಇಲ್ಲೆನ ಇಂದು ಅಂತಾರಾಷ್ಟ್ರೀಯ
ಮಹಿಳಾ ದಿನಾಚರಣೆ ಸಾರ್ಥಕವಾಗಿ ಆಚರಿಸಿದಂತಾಯ್ತು. ನಮ್ಮನ್ನ ನಾವು
ಅರಿತುಕೊಂಡಿದ್ದೇನು ಸಣ್ಣ ಮಾತಲ್ಲ.

ಗಿರಿಜಾ:- ಅಲ್ಲ ಮಲ್ಲವ್ವ, ನಮ್ಮನ್ ನಾವು ಅರಿತುಕೊಂಡ್ರೆನೇ ನಮಗೆ ನಮ್ಮ ಬಗ್ಗೆ ಗೌರವ
ಬರೋದು.

ಶಾಂತವ್ವ:- ಗೌರವ ಇದ್ರೆನ ಧೈರ್ಯ , ಛಲ ಬರೋದು , ಛಲ ಇದ್ರ ಎಂತ ಕಷ್ಟ ಸಂಸಾರದಲ್ಲಿ
ಬಂದ್ರು ನಿಭಾಹಿಸಬಹುದು .

ಸಾವಿತ್ರಿ:- ಒಬ್ಬೊಬ್ಬ ಹೆಣ್ಣು ಮಕ್ಕಳು ತಮ್ಮ ಸಾಮರ್ಥ್ಯ ಅರಿತುಕೊಂಡ್ರ , ಆ ಸಂಸಾರನ ಉದ್ಧಾರ
ಆಯ್ತು ಅಂತಾ.

ಮಲ್ಲವ್ವ:- ಸಂಸಾರ ಉದ್ಧಾರ ಆದ್ರ ಸಮಾಜ ಉಧ್ಧಾರ ಆಯ್ತು ಅಂತನ ಲೆಕ್ಕ .

ಪಾರ್ವತಕ್ಕ:- "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ".

ಗಿರಿಜಾ:- ಏಬೆ, ಪಾರತಕ್ಕ , ನೀಲಾ ಈ ದಿನ ನಮ್ಮ ಮನಸ್ಸಿಗೆ ಕನ್ನಡಿ ಹಿಡಿದ್ಲು.

ನಿರೂಪಕ:- ಹಾಂ!! ಈ ಮಹಿಳೆಯರು ಇಂದು, ಇಲ್ಲಿ ಅರ್ಥಪೂರ್ಣ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಿದರು. ಈ ದಿನದ ಉದ್ದೇಶವು ಕೂಡಾ ಎಲ್ಲಾ ಮಹಿಳೆಯರ ಕಣ್ಣು ತೆರೆಸುವದೇ ಆಗಿದೆ.

ನೀಲಾ ಇಲ್ಲಿ ಪ್ರತಿ ಹೆಣ್ಣು ಮಕ್ಕಳ ಮನಸ್ಸಿಗೆ ಕನ್ನಡಿ ಹಿಡಿದಿದ್ದಾಳೆ. ಅಸಂಘಟಿತ ಮಹಿಳೆಯರಲ್ಲೂ ಆತ್ಮವಿಶ್ವಾಸ ತುಂಬಿದ್ದಾಳೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ನಮ್ಮ ಭಾರತೀಯ ಸ್ಟೇಟ್ ಬ್ಯಾಕ್ನಲ್ಲಿ ಪ್ರತಿವರ್ಷ ಅದ್ದೂರಿಯಿಂದ ಆಚರಿಸಲಾಗುತ್ತದೆ. ಆ ಒಂದು ಸಮಾರಂಭದಲ್ಲಿ ಪ್ರದರ್ಶಿಸಿದ ಕಿರು ನಾಟಕವಿದು.
ಬರೆದು, ನಾಟಕ ನಿರ್ದೇಶಿಸಿದವರು,

**ರೇಣುಕಾ ದೇಸಾಯಿ**.

# ರುದ್ರ ರಮಣೀಯ ಸ್ಪಿಟೀ ಕಣಿವೆ - ಪ್ರವಾಸ ಕಥನ

ಸುಮಾರು ಒಂದು ವರ್ಷದ ಹಿಂದೆ ನಾವು ಮೂವರು ದಂಪತಿಗಳು (6ಜನ) ಭಾರತ ಮತ್ತು ಟಿಬೆಟ್ ಮಧ್ಯೆ ಇರುವ ರುದ್ರ ರಮಣೀಯ ಪ್ರವಾಸಿ ತಾಣ ವಾದ ಸ್ಪಿಟೀ ಕಣಿವೆಯ ಪ್ರವಾಸ ವನ್ನು ಕೈಗೊಂಡಿದ್ದೆವು.

31.5.19ರ ರಾತ್ರಿ 60ರ ಮೇಲಿನ ಹರೆಯದ ಈ 6 ಜನ ಬಾಲಕ, ಬಾಲಕಿಯರಿಗೆ ನಿದ್ದೆಯೇ ಇಲ್ಲ. ಶಾಲೆಯಿಂದ ಪ್ರವಾಸಕ್ಕೆ ಹೊರಡುವಾಗ ಕಾಡಿ ಬೇಡಿ ತುಂಬಿ ಕೊಂಡಿರುತ್ತಿದ್ದ ಚೀಲದಂತಿತ್ತು ನಮ್ಮ ತಿಂಡಿಯ ಚೀಲಗಳು. ಬೆಳಗಿನ ಜಾವ 3 ಗಂಟೆಗೆ ಹೊರಟೆವು, ವಿಮಾನ ನಿಲ್ದಾಣದೆಡೆಗೆ. ನಿಲ್ದಾಣದಲ್ಲಿ ತಪಾಸಣೆ ಮುಗಿಸಿ 5.45 ಕ್ಕೇ ಶುರುವಾಯಿತು ನಮ್ಮ ಬೆಳಗಿನ ಉಪಹಾರ. ಒಬ್ಬರ ಮನೆಯ ಇಡ್ಲಿ, ಇನ್ನೊಬ್ಬರ ಮನೆಯ ಚಟ್ನಿ, ಮತ್ತೊಬ್ಬರ ಮನೆಯ ಬ್ರೆಡ್ ಬನ್ ಜೊತೆಗೆ ಈ ಪ್ರವಾಸಕ್ಕೆ ಪ್ರೋತ್ಸಾಹಿಸಿದ್ದ ಶ್ರೀ ಗುರು ಪ್ರಸಾದ್ ರವರು ಪ್ರೀತಿಯಿಂದ ಕಳುಹಿಸಿದ್ದ ಸವಿ ಸವಿ ಯಾದ ಅಂಟಿನುಂಡೆ ಮತ್ತು ಕೋಡುಬಳೆ.

ಮೂರು*ಮೂರು ಜನರ ಮಾತು, ನಗೆ,ಉಲ್ಲಾಸ, ನನಗೆ ನನ್ನ ಶಾಲೆಯ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯುತ್ತಿದ್ದ ದಿನಗಳನ್ನು ನೆನಪಿಸಿತು.ವಿಮಾನದಿಂದ ಇಳಿಯುತ್ತಿದ್ದಂತೆ ಮತ್ತೊಮ್ಮೆ ತಿಂಡಿ ಸಮಾರಾಧನೆ. ಅಲ್ಲಿ ಕಾಯುತ್ತಾ ಇತ್ತು ನಮ್ಮ11 ದಿನಗಳ ಟೆಂಟ್ ಎಂದೇ ಹೇಳಬಹುದಾದ ವಾಹನ ,ಇನ್ನೋವ.

ಚಂಡೀಗಡದಿಂದ ಸರಹಾನ ಯಾತ್ರೆ ಮಾತ್ರ ಬಿಸಿ ಬಿಸಿ ಬೇಗೆ,ಧೂಳಿನ ರಸ್ತೆ,ತಂಗುದಾಣ ತಲುಪವಷ್ಟರಲ್ಲಿ ಮಾತಾಡುತ್ತಿತ್ತು ಮೈ,ಕೈ ಕಾಲುಗಳು. ಏನೋ ಕೊಟ್ಟರು ತಿಂದು ಮಲಗಿದ್ದಷ್ಟೇ .ಎಚ್ಚರವಾದಾಗ ಚುಮುಚುಮು ಛಳಿ .ಬೆಳಗ್ಗೆ 6 ಘಂಟೆ.

1.6.19 ರಂದು ನಮ್ಮ ನಡಿಗೆ ಭೀಮಾ ಕಾಳಿ ದೇವಾಲಯಕ್ಕೆ.ಎಲ್ಲಿ ನೋಡಿದರೂ ಪರ್ವತಗಳ ಸಾಲು,ಸೇಬು ಮರಗಳ ತೋಟ,ಪುಟ್ಟ ಪುಟ್ಟ ಬಣ್ಣ ಬಣ್ಣದ ಹಕ್ಕಿಗಳು,ಕೆಂಪು, ಹಳದಿ, ತಂಪಾದ ಬಿಳಿಯ ಬಣ್ಣದ ಹೂಗಳು. ಆಹಾ ಎಲ್ಲೆಲ್ಲೂ ಹಸಿರು, ಹೂವು ,ನೀರು.ಸುಂದರ ಪರಿಸರದಲ್ಲಿಯ ದೇವಸ್ಥಾನವಂತೂ ಅತ್ಯಂತ ರಮಣೀಯ

.ಯಾರೋ ಬನವಾಸಿಯಲ್ಲಿ ದುಂಬಿಯಾಗ ಬಯಸಿದರಂತೆ ನಾನು ಒಂದಾದರೂ ಜನ್ಮದಲ್ಲಿ ಪುಟ್ಟ ಪಕ್ಷಿ ಯಾಗಿ ಈ ಪರ್ವತಶ್ರೇಣಿಯಲ್ಲಿ ,ಕಣಿವೆಗಳಲ್ಲಿ ಹಾರಾಡಿದರೇ.....ಎನ್ನುವಂತಿತ್ತು.

ಬೆಳಗಿನ ನಡಿಗೆಯನ್ನು ಮುಗಿಸಿ ಬಂದು ಉಪಹಾರ ತಿಂದು ಹೂರಟಿದ್ದೆವು,ನಮ್ಮ ಮಾರ್ಗದರ್ಶಿಗಳಾದ ಗುರುಪ್ರಸಾದ್ ರವರ ಕರೆ.ಅದು ಬರದಿದ್ದರೆ ನಾವು ಬಹುಶಃ ಶ್ರೀ ಕಂಡ ಮಹದೇವನ ದರ್ಶನದಿಂದ ವಂಚಿತರಾಗುತ್ತಿದ್ದೇವೇನೋ. ನಮ್ಮಸಾಮಾನುಗಳನ್ನು ಮತ್ತೆ ಕೆಳಗಿಳಿಸಿ ಮಹದೇವನ ಅದ್ಭುತ ವಾದ ದರ್ಶನ ಮಾಡಿ ಫೋಟೋ ಗಳನ್ನೂ ತಗೆದುಕೊಂಡು ಸಾಂಗ್ಲಾದ ಕಡೆಗೆ ನಮ್ಮ ಪಯಣ.ಬೆಟ್ಟ ಕಣಿವೆಗಳ ಹಾದಿ ರುದ್ರ ರಮಣೀಯ.ಎಡಕ್ಕೆ ಕಣಿವೆ ಬಲಕ್ಕೆ ಪರ್ವತ, ಕಣ್ಮುಚ್ಚಿ ತೆರೆಯುವುದರಲ್ಲಿ ಕಣಿವೆ ಹೋಯ್ತು , ಪರ್ವತ ಬಂತು. ಅಂಕುಡೊಂಕು ಹಾದಿಯಲ್ಲಿ ಎಲ್ಲೆಲ್ಲೂ ನದಿ, ಝರಿ, ಹೂವು, ಹಕ್ಕಿಗಳನ್ನೆಲ್ಲಾ

ಕಣ್ತುಂಬಿಕೊಳ್ಳುತ್ತಾ ಸಾಗುತ್ತಾ ಇದ್ದಾಗ ಅನ್ನಿಸಿತು, ಈ ಪ್ರಕೃತಿ ಎಷ್ಟು ಸುಂದರ, ವಿಶಾಲ, ಅನಂತ ಹೇಳಲು ಪದಗಳೇ ಸಾಲದು ಎಂದು.
ಬಂದೇ ಬಂತು ಸಾಂಗ್ಲಾ.ಅಚ್ಚುಕಟ್ಟಾದ ಹೋಟೆಲ್, ರುಚಿ ರುಚಿಯಾದ ಊಟ, ಸವಿ ಸವಿಯಾದ ಹೋಟೆಲ್ಲ ಮಾಲೀಕನ ಮಾತು ನಂತರ ಕಮ್ರು ಕೋಟೆಯತ್ತ ನಮ್ಮ ನಡಿಗೆ. ಅಲ್ಲಿನ ಜನಗಳಿಗೆ ಕೇವಲ10 ನಿಮಿಷದ ದಾರಿ.500ಮೆಟ್ಟಿಲುಗಳು.ಏದುಸಿರು ಬಿಡುತ್ತಾ ಹತ್ತಿದ ನಮಗೆ 30 ನಿಮಿಷಗಳು.ನಂತರ ನಿಟ್ಟುಸಿರು.ಆ ಎತ್ತರದಲ್ಲಿ ಜಗದ ಸೌಂದರ್ಯದ ಅಗಾಧತೆಯ ಎದುರು ನಮ್ಮಿರುವು ಎಷ್ಟು ನಗಣ್ಯ! ಈ ವಿಶ್ವದಲ್ಲಿ ಭೂಮಿಯೇ ಒಂದು ಮರಳಂತಾದರೆ ನಾವೆಷ್ಟರವರು ಎಂದು ತಿಳಿಸುತ್ತದೆ ಈ ಪ್ರಕೃತಿ. ನಾವು ಕಷ್ಟಪಟ್ಟು ಹತ್ತುತ್ತಿದ್ದರೆ ಉಸಿರಾಡಿದಷ್ಟೇ ಸರಾಗವಾಗಿ ಮೇಲಕ್ಕೂ ಕೆಳಕ್ಕೊ ಲೀಲಾಜಾಲವಾಗಿ ಹತ್ತಿಳಿಯುತ್ತಿದ್ದ ಗ್ಯಾಸ್ ಸಿಲಿಂಡರ್ , ಸೌದೆ, ಸಾಮಾನುಗಳನ್ನು ಹೊತ್ತು ಸಾಗಿಸುತ್ತಿದ್ದ ಜನಗಳನ್ನು ನೋಡಿ ನಾವು ಮೂಕ ವಿಸ್ಮಿತರಾದೆವು.ನೆಲದಿಂದ ಎಷ್ಟು ಮೇಲೆ ಹೋದೆವೋ ,ಅಷ್ಟೇ ಕೆಳಗಿಳಿದರೆ ಭೋರೆಂದು ಹರಿಯುತ್ತಿರುವ ಬಾಪ್ಸಾ ನದಿ. ಅದರ ಮೇಲಿನ ಬಿದಿರಿನ ಸೇತುವೆ ಮೇಲೆ ಓಡಾಡುವ ಜನಗಳನ್ನು ನೋಡಿ ನಾವು ಸುಸ್ತೋ ಸುಸ್ತು.
ಅಲ್ಲಿಂದ ಮುಂದೆ ನಾಗಾ ದೇವಸ್ಥಾನ ದೇವರು ದರ್ಶನಕ್ಕೆ ಅಲಭ್ಯ . ನಂತರ ಬುದ್ದನ ದೇವಾಲಯ, ಒಳಗೆ ಹೋಗಲು ಅನುಮತಿ ಇಲ್ಲ. ಸಮುದ್ರ ಮಟ್ಟದಿಂದ 11000 ಅಡಿಗಳ ಮೇಲೆ ನಿಂತಿರುವ ಆ ಕಲಾ ಕೌಶಲ್ಯ ಯಾವ ಶಿಲ್ಪಿಯ ಕಲ್ಪನೆಯೋ ಎನಿಸಿತು.

ಮರುದಿನ ಅಲ್ಲಿಂದ ಚಿತ್ಕುಲ್ ಗೆ ಪಯಣ. 11350 ಅಡಿ ಎತ್ತರದಲ್ಲಿರುವ ಈ ಜಾಗ ಕ್ಕೆ ಮತ್ತದೇ ಅಂಕುಡೊಂಕಾದ ದಾರಿ.ಪರ್ವತ-ಕಣಿವೆಗಳ ಖೋ ಖೋ ಆಟ. ಬೆರಗುಗೊಳುವಂತೆ ಚಾಲನೆ ಮಾಡುವ ಚಾಲಕನ ಏಕಾಗ್ರತೆ ಹಾಗೂ ಪ್ರಾವೀಣ್ಯತೆ ನಿಜಕ್ಕೂ ಶ್ಲಾಘನೀಯ. ದೇವರ ಆಶೀರ್ವಾದ ಅವರ ಮೇಲೆ ಸದಾ ಇರಲೆಂದು ಹೆಜ್ಜೆ ಹೆಜ್ಜೆಗೂ ಹರಸಿತ್ತಿದ್ದೆವು. ಅದು ಸುಖವಾಗಿ ನಮ್ಮೂರನ್ನು ತಲುಪಬೇಕೆಂಬ ನಮ್ಮ ಸ್ವಾರ್ಥ. ಚಿತ್ಕುಲ್ ಒಂದು ಸಣ್ಣ ಹಳ್ಳಿ. ಕಾರಿನಿಂದ ಇಳಿದು ಸುಮಾರು ಒಂದು ಮೈಲಿ ನಡೆದರೆ ಕಲ್ಲು ಬಂಡೆಗಳಲ್ಲಿ ಭೋರ್ಗರೆಯುತ್ತಿದ್ದ ನದಿ. ಸರಾಗವಾಗಿ ಕಾಲಾಡಿಸುವ ಹಂಬಲದಿಂದ ಕಾಲಿಟ್ಟರೆ 20 ಸೆಕೆಂಡ್ ಕೂಡ ಇರಲಾಗದಷ್ಟು ಕೊರೆಯುತ್ತಿದ್ದ, ಹಿಮಕರಗಿ ಹರಿಯುತ್ತಿದ್ದ ನೀರು.ಇಕ್ಕೆಲಗಳಲ್ಲಿ ಗಗನ ಚುಂಬಿ ಪರ್ವತಗಳು ,ಮಧ್ಯೆ ಭೋರ್ಗರೆಯುತ್ತಿದ್ದ ನದಿ ಸುಂದರ, ರಮಣೀಯ .ಘಂಟೆಗಟ್ಟಲೇ ಆಡಿದರೂ ದಣಿಯದ ತಣಿಯದ ತನುಮನ.ಅಲ್ಲಿಂದ ಕಾಣುವ ಟಿಬೆಟ್ನಲ್ಲಿರುವ ಪರ್ವತ ಶ್ರೇಣಿ. ಧನ್ಯತೆ ಯಿಂದ ಪುಳಕಿತವಾಯ್ತು ಹೃನ್ಮನ🙏🏼🙏
ನಮ್ಮ ಕಣ್ಣಲ್ಲೇಕೆ ದೇವರು ಫಿಲ್ಮ್ ಒಂದನ್ನು ಅಳವಡಿಸಲಿಲ್ಲ ಎನ್ನುವಂಥಹ ರೋಚಕವಾದ ಮುಂದಿನ ನಮ್ಮ ಪ್ರವಾಸದ ವಿವರಣೆ ಮುಂದಿನ ದಾಸೋಹದಲ್ಲಿ.

**ಗೌರಾಂಬ ವೆಂಕಟ ಸುಬ್ಬಯ್ಯ**